" ಪಂಚ ದ್ರಾವಿಡ ಭಾಷೆಗಳು "

(ಕನ್ನಡ ಎಂ.ಫಿಲ್. ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ನಿಬಂಧ)

ಮಾರ್ಗದರ್ಶಕರು :

ಪ್ರೊ|| ಹೆಚ್.ಎಲ್. ಮಹಾದೇವ

ಸಂಶೋಧಕರು :

ಸರ್ವಶ್ರೀ ಎಂ.ಪಿ.

ಕರ್ನಾಟಕ ಸಂಘ (ರಿ). ಮಂಡ್ಯ

. ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2007-08

"ಪಂಚ ದ್ರಾವಿಡ ಭಾಷೆಗಳು"

(ಕನ್ನಡ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಮಾರ್ಗದರ್ಶಕರು:
ಪ್ರೊ॥ ಹೆಚ್.ಎಲ್. ಮಹಾದೇವ

ಸಂಶೋಧಕರು:
ಸರ್ವಶ್ರೀ ಎಂ. ಪಿ.

ಕರ್ನಾಟಕ ಸಂಘ (ರಿ), ಮಂಡ್ಯ.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

೨೦೦೭ - ೨೦೦೮

ಮಾರ್ಗದರ್ಶಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್.ಪದವಿಯ ವಿದ್ಯಾರ್ಥಿಯಾದ ಸರ್ವಶ್ರೀ ಎಂ.ಪಿ. ಅವರು ನನ್ನ ಮಾರ್ಗದರ್ಶನದಲ್ಲಿ ''ಪಂಚ ದ್ರಾವಿಡ ಭಾಷೆಗಳು'' ಎಂಬ ಶೀರ್ಷಿಕೆಯ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲೀ, ಪೂರ್ಣವಾಗಿಯಾಗಲೀ, ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು 10/9

ದಿನಾಂಕ : 10-09-2008

ಸ್ಥಳ : ಮಂಡ್ಯ

ಪ್ರೊ॥ ಹೆಚ್.ಎಲ್. ಮಹಾದೇವ
ಕನ್ನಡ ವಿಭಾಗ
ಮಹಿಳಾ ಸರ್ಕಾರಿ ಪದವಿ ಕಾಲೇಜು
ಮಂಡ್ಯ

ಅಭ್ಯರ್ಥಿಯ ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2007-08ನೇ ಸಾಲಿಗೆ **ಕನ್ನಡ ಎಂ. ಫಿಲ್.** ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು ***"ಪಂಚ ದ್ರಾವಿಡ ಭಾಷೆಗಳು"*** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು, ಕನ್ನಡ ಪ್ರಾಧ್ಯಾಪಕರಾದ **ಪ್ರೊ॥ ಹೆಚ್.ಎಲ್. ಮಹಾದೇವ**, ಮಹಿಳಾ ಸರ್ಕಾರಿ ಪದವಿ ಕಾಲೇಜು, ಕನ್ನಡ ವಿಭಾಗ, ಮಂಡ್ಯ ಇವರ ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲೀ ನಿಬಂಧದ ಅಧ್ಯಾಯಗಳನ್ನಾಗಲೀ, ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ.

ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ದಿನಾಂಕ: 10-09-2008

ಸ್ಥಳ : ಮಂಡ್ಯ

Sarvashree M.P.

-ಸರ್ವಶ್ರೀ ಎಂ.ಪಿ.

ನಿಬಂಧಕಾರರು

2007-08ನೇ ಸಾಲಿನ ಎಂ.ಫಿಲ್. ವಿದ್ಯಾರ್ಥಿ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ,

ಮಂಡ್ಯ

ಪರಿವಿಡಿ

ಅಧ್ಯಾಯ -೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಜಗತ್ತಿನ ಪ್ರತಿಯೊಂದು ಭಾಷೆಗೂ ತನ್ನದೇ ಆದ ಸ್ವತಂತ್ರ ಅಸ್ತಿತ್ವ ಮತ್ತು ಸ್ವರೂಪಗಳಿವೆ. ಮಾನವನ ಸಾಮುದಾಯಿಕ ಜೀವನದ ಸಂವಹನ ಸಾಧನದ ಅನಿವಾರ್ಯತೆಯೇ ಭಾಷೆಗಳ ಉಗಮಕ್ಕೆ ಕಾರಣ. ಜನಸಂಪರ್ಕವನ್ನು ಕಡಿದು ಹಾಕುವ ದುರ್ಗಮವಾದ ಅಡೆತಡೆಗಳು, ಸಾಮಾಜಿಕ ಒಡನಾಟ, ವ್ಯಾವಹಾರಿಕ ಸಂಬಂಧಗಳಲ್ಲಿರುವ ಸೀಮಿತತೆ, ಸಾಂಸ್ಕೃತಿಕ ವ್ಯತ್ಯಾಸಗಳು, ಧಾರ್ಮಿಕ ನಿಷೇಧಗಳು ಈ ಮೊದಲಾದ ನಿರ್ದಿಷ್ಟವಾದ, ಸೂಕ್ಷ್ಮವಾದ, ಇನ್ನೂ ಎಷ್ಟೋ ಪ್ರತ್ಯಕ್ಷ, ಪರೋಕ್ಷ ಸಂಗತಿಗಳು ಜಾಗತಿಕ ಮಟ್ಟದಲ್ಲಿ ವಿವಿಧ ಭಾಷಾ ಪರಿವಾರಗಳನ್ನು ಹುಟ್ಟುಹಾಕಿವೆ. ಸ್ಟುರ್ಟ್‌ವಾಂಟ್ ಹೇಳುವಂತೆ ''ಭಾಷೆಯು ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆ'' ಈ ವ್ಯವಸ್ಥೆಯಿಂದಾಗಿಯೇ ಸಮಾಜದ ಸದಸ್ಯರ ನಡುವೆ ಕ್ರಿಯೆ, ಪ್ರತಿಕ್ರಿಯೆಗಳು ನಡೆಯುತ್ತವೆ.

ಜಗತ್ತಿನ ಭಾಷಾ ಪರಿವಾರಗಳ ಗುಂಪಿನಲ್ಲಿ ಭಾರತದ ಭಾಷಾ ಪರಿವಾರವು ವಿಶಿಷ್ಟವಾದುದು. ಭಾರತದಲ್ಲಿ ಪ್ರಧಾನವಾಗಿ ಇಂಡೋ-ಆರ್ಯನ್ ಮತ್ತು ದ್ರಾವಿಡ ಭಾಷಾ ಪರಿವಾರ ಎಂಬ ಎರಡು ಭಾಷಾ ಪರಿವಾರಗಳನ್ನು ಗುರುತಿಸಲಾಗಿದೆ. ಈ ಭಾಷಾ ಪರಿವಾರಗಳು ತಮ್ಮದೇ ಆದ ವಿಶಿಷ್ಟ ಲಕ್ಷಣಗಳಿಂದ ಕೂಡಿದ್ದು, ಪ್ರತ್ಯೇಕ ಭಾಷಾ ನಿಯಮಗಳಲ್ಲದೆ, ತಮ್ಮದೇ ಆದ ಭಾಷಿಕ ಜನಾಂಗಗಳ ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಭಿನ್ನತೆಗಳಿಗೆ, ಪರಂಪರೆಗಳಿಗೆ ಕಾರಣವಾಗಿವೆ. ಉತ್ತರ ಭಾರತದಲ್ಲಿ ಪ್ರಧಾನವಾಗಿ ಆರ್ಯ ಬುಡಕಟ್ಟು ಭಾಷೆಗಳ ಪ್ರಾಬಲ್ಯವನ್ನು ಗುರುತಿಸುವ ರೀತಿಯಲ್ಲೇ ದಕ್ಷಿಣ ಭಾರತದಲ್ಲಿ ದ್ರಾವಿಡ ಬುಡಕಟ್ಟು ಭಾಷೆಗಳ ಪ್ರಾಬಲ್ಯವನ್ನು ಗುರುತಿಸಬಹುದು.

ದಕ್ಷಿಣ ಭಾರತದಲ್ಲಿ ಅಸ್ತಿತ್ವದಲ್ಲಿರುವ ಮೂಲ ದ್ರಾವಿಡ ಭಾಷೆಯನ್ನು ಉತ್ತರ ದ್ರಾವಿಡ, ಮಧ್ಯ ದ್ರಾವಿಡ, ದಕ್ಷಿಣ ದ್ರಾವಿಡ ಎಂಬ ಮೂರು ಭಾಗಗಳಾಗಿ ವಿಂಗಡಿಸಲಾಯಿತು. ಈ ಮೂರು ವರ್ಗಗಳಲ್ಲಿ ಪ್ರಮುಖವಾದುದು ದಕ್ಷಿಣ ದ್ರಾವಿಡ ಭಾಷೆಗಳು.ಇದರಲ್ಲಿ ಮುಖ್ಯವಾಗಿ ತಮಿಳು, ಕನ್ನಡ, ಮಲಯಾಳಂ, ತುಳು ಭಾಷೆಗಳು ಕಂಡು ಬರುತ್ತವೆ. ತೆಲುಗು ಭಾಷಾ ಪ್ರದೇಶ ಭೌಗೋಳಿಕವಾಗಿ ದಕ್ಷಿಣ ಭಾರತಕ್ಕೆ ಸೇರಿದರೂ,ತೆಲುಗು ತನ್ನ ಆಂತರಿಕ ರಚನೆಯಲ್ಲಿ ದಕ್ಷಿಣ ದ್ರಾವಿಡಗಳಿಗಿಂತ ಮಧ್ಯ ದ್ರಾವಿಡ ಭಾಷೆಗಳ ವ್ಯಾಪ್ತಿಗೆ ಸೇರುತ್ತದೆ. ಒಟ್ಟಿನಲ್ಲಿ 'ತಮಿಳು, ಕನ್ನಡ, ಮಲೆಯಾಳಂ,ತೆಲುಗು, ತುಳು'ಈ ಐದೂ ಭಾಷೆಗಳನ್ನು ಒಟ್ಟುಗೂಡಿಸಿ ' ಪಂಚ ದ್ರಾವಿಡ ಭಾಷೆಗಳು' ಎಂದು ಕರೆಯಲಾಗಿದೆ.

ವಿದೇಶಿ ವಿದ್ವಾಂಸರಿಂದ 18ನೇ ಶತಮಾನದಲ್ಲಿ ಭಾರತದ ವಿವಿಧ ಭಾಷಾ ವರ್ಗಗಳ ತೌಲನಿಕ ಅಧ್ಯಯನ ಆರಂಭವಾಗುವ ಮೊದಲು ಪೂರ್ವಜರು ಭಾರತೀಯ ಭಾಷೆಗಳನ್ನು 'ಪಂಚ ದ್ರಾವಿಡ' ಹಾಗೂ 'ಪಂಚ ಗೌಡ' ಎಂದು ವಿಭಜಿಸಿದ್ದರು. ಆದರೆ ಈ ವಿಭಜನೆ ವೈಜ್ಞಾನಿಕ ರೀತಿಯಲ್ಲಿ ಆಗಿರಲಿಲ್ಲ.ಅವರ ದೃಷ್ಟಿಯಲ್ಲಿ ಈ ಎರಡು ಗುಂಪಿನ ಭಾಷೆಗಳು ಇಂತಿದ್ದವು.

ಪಂಚ ದ್ರಾವಿಡ : ತಮಿಳು,ತೆಲುಗು, ಕನ್ನಡ, ಗುಜರಾತಿ ಮತ್ತು ಮರಾಠಿ.

ಪಂಚ ಗೌಡ : ಸಾರಸ್ವತ, ಕಾನ್ಯಕುಬ್ಜ, ಗೌಡ, ಮೈಥಿಲಿ ಮತ್ತು ಉತ್ಕಲ.

ಈ ವರ್ಗಗಳ ಮುಖ್ಯ ಆಶಯ ಭಾರತದ ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ಬಹಳ ಪ್ರಚಲಿತದಲ್ಲಿರುವ ಭಾಷೆಗಳನ್ನು ಪ್ರತ್ಯೇಕವಾಗಿ ವಿಭಾಗಿಸುವುದು. ಕೆಲವರು ಇದು ಆಯಾ ಪ್ರದೇಶಗಳ ಜನರ ಆಚಾರ-ವಿಚಾರ, ಸಂಸ್ಕೃತಿಗಳ ಪ್ರಭೇದಗಳನ್ನು ಬಿಂಬಿಸಲು ವರ್ಗೀಕರಣ ಮಾಡಿರಬಹುದೆಂದು ಅಭಿಪ್ರಾಯಪಟ್ಟರೆ, ನರಸಿಂಹಾಚಾರ್ಯರು 'ಪಂಚ ದ್ರಾವಿಡ ಭಾಷೆ'ಗಳಲ್ಲಿ ಗುಜರಾತಿ ಮತ್ತು ಮರಾಠಿ ಭಾಷೆಗಳು ಸೇರಿರುವುದಕ್ಕೆ ಅವುಗಳಲ್ಲಿ ದ್ರಾವಿಡ ಭಾಷೆಗಳ ಕೆಲ ಸಾದೃಶ್ಯಗಳು ಗೋಚರಿಸಿರುವುದೇ ಮುಖ್ಯ ಕಾರಣ ಎಂದಿದ್ದಾರೆ. ಭಾಷಿಕ ಹಿನ್ನಲೆಯಲ್ಲಿ ಈ ಎರಡೂ ಭಾಷೆಗಳು ಇಂಡೋ-ಆರ್ಯನ್ ಭಾಷೆಗಳು.

ವಿದೇಶಿಯರು ದ್ರಾವಿಡ ಭಾಷೆಗಳ ಅಧ್ಯಯನ ಕೈಗೊಳ್ಳುವ ಮೊದಲೇ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರವರು ಕ್ರಿ.ಶ. 1838ರಲ್ಲಿ ತಮ್ಮ 'ಹೊಸಗನ್ನಡ ನುಡಿಗನ್ನಡಿ' ಎಂಬ ಹೊಸಗನ್ನಡ ವ್ಯಾಕರಣ ಕೃತಿಯನ್ನು ರಚಿಸಿ ಪ್ರಕಟಿಸಿದ್ದರು. ಇದರಲ್ಲಿ ದ್ರಾವಿಡ, ಕೇರಳ, ತಾಳವ, ಕರ್ಣಾಟಕಾಂಧ್ರ ಭಾಷೆಗಳನ್ನು ಒಟ್ಟುಗೂಡಿಸಿ 'ಪಂಚದ್ರಾವಿಡ' ಎಂಬ ಪದವನ್ನು ಉಲ್ಲೇಖಿಸುತ್ತಾ ಈ ಐದು ಭಾಷೆಗಳು ಅದರಲ್ಲಿ ಸಮಾವೇಶವಾಗುತ್ತವೆ ಎಂದು ನಿರ್ದೇಶಿಸಿರುವುದು ಕಾಲದ ದೃಷ್ಟಿಯಿಂದ ಮಹತ್ವಪೂರ್ಣ ಸಂಗತಿಯಾಗಿದೆ.ಪ್ರಾದೇಶಿಕವಾಗಿ ಪಂಚ ದ್ರಾವಿಡ ಭಾಷೆಗಳು ಹೀಗೆ ಬಳಕೆಯಾಗಿವೆ - ತಮಿಳುನಾಡಿನಲ್ಲಿ ತಮಿಳು, ಕರ್ನಾಟಕದಲ್ಲಿ ಕನ್ನಡ, ಕೇರಳದಲ್ಲಿ ಮಲೆಯಾಳಂ, ಆಂಧ್ರದಲ್ಲಿ ತೆಲುಗು, ಕರ್ನಾಟಕದ ತುಳುನಾಡಿನಲ್ಲಿ ತುಳು ಭಾಷೆಯೂ ತಮ್ಮ ಸ್ಥಾನವನ್ನು ಪಡೆದಿವೆ. ಈ ಪಂಚ ದ್ರಾವಿಡ ಭಾಷೆಗಳು ಪರಸ್ಪರ ಸಾಮ್ಯ - ವ್ಯತ್ಯಾಸಗಳನ್ನು ತಮ್ಮದೇ ಆದ ವಿಶಿಷ್ಟ ಲಕ್ಷಣಗಳನ್ನು ಮಹತ್ವವನ್ನು ಒಳಗೊಂಡಿವೆ.

ಈ ರೀತಿಯ ಮಹತ್ವವನ್ನು ಪಡೆದುಕೊಂಡಿರುವ 'ಪಂಚ ದ್ರಾವಿಡ ಭಾಷೆಗಳು' ಎಂಬ ವಿಷಯವನ್ನು ಈ ನಿಬಂಧದಲ್ಲಿ ನಾನು ಅಧ್ಯಯನಕ್ಕಾಗಿ ಆರಿಸಿಕೊಂಡಿದ್ದೇನೆ. ನನ್ನ ಈ ಅಧ್ಯಯನದ ಉದ್ದೇಶವು ಪಂಚ ದ್ರಾವಿಡ ಭಾಷೆಗಳ ಮೂಲವನ್ನು ಗುರುತಿಸಿ, ಅವುಗಳ ಸ್ವತಂತ್ರ ಅಸ್ತಿತ್ವವನ್ನು ಸಮರ್ಥಿಸುವುದು. ಆದ್ದರಿಂದಲೇ ನನ್ನ ಅಧ್ಯಯನವನ್ನು ಈ ನಿಬಂಧದಲ್ಲಿ ಕೆಲವು ಅಧ್ಯಾಯಗಳಾಗಿ ವಿಂಗಡಿಸಿಕೊಂಡಿದ್ದೇನೆ.

ಮೊದಲ ಅಧ್ಯಾಯದಲ್ಲಿ ನನ್ನ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯ ಬಗೆಗೆ ವಿವರಿಸಿದ್ದೇನೆ.

ಎರಡನೇ ಅಧ್ಯಾಯದಲ್ಲಿ ಭಾಷೆಯ ಸ್ವರೂಪ ಮತ್ತು ವೈಶಿಷ್ಟ್ಯಗಳ ವಿವರಣೆಯನ್ನು ನೀಡಿದ್ದೇನೆ. ಇದರಲ್ಲಿ ಸಾಮಾಜಿಕ ಅನಿವಾರ್ಯತೆಗಳೊಂದಿಗೆ ಭಾಷೆಯ ಉಗಮ, ಭಾಷಾ ವೈವಿಧ್ಯ ಹಾಗೂ ಭಾಷೆಯನ್ನು ಕುರಿತ ವ್ಯಾಖ್ಯೆಗಳನ್ನು ಕುರಿತು ಚರ್ಚಿಸಿದ್ದೇನೆ.

ಮೂರನೇ ಅಧ್ಯಾಯದಲ್ಲಿ ದ್ರಾವಿಡ ಭಾಷೆಗಳ ಸ್ವರೂಪ ಮತ್ತು ವೈಶಿಷ್ಟ್ಯವನ್ನು ಕುರಿತು ವಿವರಿಸಲಾಗಿದೆ. ಇದರಲ್ಲಿ ದ್ರಾವಿಡ ಪದದ ನಿಷ್ಪತ್ತಿ. ದ್ರಾವಿಡ ಭಾಷೆಗಳ ವರ್ಗೀಕರಣ ಮತ್ತು ಅವುಗಳ ವೈಶಿಷ್ಟ್ಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ 'ಪಂಚ ದ್ರಾವಿಡ ಭಾಷೆಗಳು' ಕುರಿತ ಅಧ್ಯಯನಕ್ಕೆ ಆದ್ಯತೆ ನೀಡಲಾಗಿದೆ. ಇದರಲ್ಲಿ ಪಂಚ ದ್ರಾವಿಡ ಭಾಷೆಗಳ ಚಾರಿತ್ರಿಕ ಹಿನ್ನಲೆ, ಅವುಗಳ ಅರ್ಥ ಮತ್ತು ವ್ಯಾಪ್ತಿ, ಹಾಗೆಯೇ ಅವುಗಳ ಚಾರಿತ್ರಿಕ, ಸಾಮಾಜಿಕ, ಭೌಗೋಳಿಕ ಹಿನ್ನೆಲೆಗಳ ವಿವರಣೆ ನೀಡಲಾಗಿದೆ.

ಐದನೇ ಅಧ್ಯಾಯದಲ್ಲಿ ಪಂಚ ದ್ರಾವಿಡ ಭಾಷೆಗಳಲ್ಲಿನ ಪರಸ್ಪರ ಸಾಮ್ಯ ಹಾಗೂ ವ್ಯತ್ಯಾಸಗಳನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ಅವುಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವ ಪ್ರಯತ್ನ ಮಾಡಿದ್ದೇನೆ.

■

ಅಧ್ಯಾಯ : ೨

ಭಾಷೆಯ ಸ್ವರೂಪ ಮತ್ತು ವೈಶಿಷ್ಟ್ಯ

ಭಾಷೆ ಒಂದು ಸಾಮಾಜಿಕ ಕ್ರಿಯೆ. ಭಾಷೆ ಬಹು ಪುರಾತನವಾದುದು. ಮನುಷ್ಯನಷ್ಟು ಹಳೆಯದಲ್ಲದಿದ್ದರೂ ಮಂಗನಿಂದ ಮಾನವನಾಗಿ ವ್ಯವಹರಿಸಲು ತೊಡಗಿದಾಗಿನಿಂದಲೇ ಅಥವಾ ಆ ಹೊತ್ತಿಗಾಗಲೇ ಭಾಷೆ ಅಸ್ತಿತ್ವಕ್ಕೆ ಬಂದಿರಬೇಕು. ಮಾನವ ಪ್ರಾಣಿ ಸ್ಥಿತಿಯಿಂದ ವಿಕಾಸದೆಡೆಗೆ ಸಾಗಿದಾಗ ಅವನ ವಿಕಾಸದ ಪ್ರೇರಕ ಶಕ್ತಿಯಾಗಿ ನಿಂತಿದ್ದ ಭಾಷೆಯೇ. ಮಾನವ ಸಂಕೇತ ಶಬ್ದವಾಯಿತು, ಶಬ್ದ ಭಾಷೆಯಾಯಿತು, ಭಾಷೆ ಬೆಳೆದು ಮಾನವನ ಬುದ್ಧಿಶಕ್ತಿ, ವಿಚಾರಶಕ್ತಿಗಳ ವಾಹಕವಾಯಿತು. ಈ ವಿಚಾರ ಶಕ್ತಿಯೇ ಇತರ ಪ್ರಾಣಿಗಳಿಂದ ಮನುಷ್ಯನನ್ನು ಬೇರ್ಪಡಿಸಿದೆ. ಮನುಷ್ಯನ ಬುದ್ಧಿಶಕ್ತಿ ಬೆಳೆದಂತೆ ಭಾಷೆಯೂ ಬೆಳೆಯತೊಡಗಿತು.

ಭಾಷೆ ಮನುಷ್ಯನ ಬದುಕಿನಲ್ಲಿ ಅನಿವಾರ್ಯವಾದುದಾಗಿದೆ. ಭಾಷೆ ಇಲ್ಲದಿದ್ದರೆ ಸಮಾಜ ಜೀವನವೇ ಅಸಾಧ್ಯ. ''ಶಬ್ದವೆಂಬ ಜ್ಯೋತಿಯು ಲೋಕವನ್ನೆಲ್ಲಾ ಬೆಳಗದಿದ್ದರೆ ಮೂರು ಲೋಕಗಳೆಲ್ಲವೂ ಅಂಧಕಾರಮಯವಾಗುತ್ತಿದ್ದವು'' ಎಂದು ದಂಡಿ ಒಂದು ಕಡೆ ಹೇಳಿದ್ದಾನೆ. ''ಮಾತೆಂಬುದು ಜ್ಯೋತಿರ್ಲಿಂಗ'' ಎಂಬುದು ಅಲ್ಲಮ ಪ್ರಭುವಿನ ಮಾತು. ಅಂದರೆ ಮಾನವನ ಒಳ-ಹೊರಗುಗಳನ್ನು ಬೆಳಗಬಲ್ಲ ಶಕ್ತಿ ಮಾತಿಗಿದೆ. ಮಾತಿಲ್ಲದಿದ್ದರೆ, ವ್ಯಕ್ತಿ-ವ್ಯಕ್ತಿಗಳ ನಡುವೆ ಸಂಪರ್ಕ, ಸಹಕಾರ, ಸಹಬಾಳ್ವೆಯೇ ಇರುತ್ತಿರಲಿಲ್ಲ. ಭಾಷೆ ಇಲ್ಲದೆ ಸಮಾಜ ಬೆಳೆಯಲಾರದು. ಸಮಾಜವಿಲ್ಲದೆ ಭಾಷೆಯೂ ಬೆಳೆಯಲಾರದು.

ಭಾಷೆ ದೇವರ ಕೊಡುಗೆ ಎಂಬ ಕಲ್ಪನೆ ಋಗ್ವೇದದಲ್ಲಿ ಕಂಡು ಬರುತ್ತದೆ. ಅಲ್ಲಿ ಯಜ್ಞಗಳನ್ನು ನೆರವೇರಿಸುವುದಕ್ಕಾಗಿ ದೇವರು ಭಾಷೆಯನ್ನು ನಿರ್ಮಿಸಿದ ಎಂಬ ಅಭಿಪ್ರಾಯವಿದೆ. ಗ್ರೀಕ್‌ರಲ್ಲಿಯೂ ಭಾಷೆ ದೈವ ನಿರ್ಮಿತವಾದುದು ಎಂಬ ನಂಬಿಕೆ ಇದೆ. ಭಾಷೆ ಸಹಜ ಅಥವಾ ನೈಸರ್ಗಿಕ ಕ್ರಿಯೆ ಎಂಬುದು ಗ್ರೀಕರ ಕಲ್ಪನೆ. ಆದರೆ ಭಾಷೆ ಎಂಬುದು ನೈಸರ್ಗಿಕ ಕ್ರಿಯೆಯಲ್ಲ, ಕಲಿತ ಕ್ರಿಯೆ ಎಂಬುದು ಆಧುನಿಕರ ಅಭಿಪ್ರಾಯ. ಭಾಷಾ ವಿಜ್ಞಾನಿಗಳ ಪ್ರಕಾರ ಭಾಷೆ ಎಂದರೆ, ಆಡುವ ಮಾತು ಭಾಷೆಯನ್ನು ಮೊದಲು ನಾವು ಅರಿಯುತ್ತೇವೆ ನಂತರ ಬರೆಯುತ್ತೇವೆ.

ಭಾಷೆ ಎಂದರೇನು ? ಎಂಬುದನ್ನು ಒಂದು ಮಾತಿನಲ್ಲಿ ಸೂತ್ರೀಕರಿಸಿ ಹೇಳುವುದು ಕಷ್ಟ. ಆದರೂ, ಅಂತಹ ಕೆಲವು ಪ್ರಯತ್ನಗಳು ನಡೆದಿವೆ. ಐಸ್ಲರ್‌ನ ಪ್ರಕಾರ ''ಆತ್ಮ (ಮನಸ್ಸು) ಇರುವ ಯಾವುದೇ

ಪ್ರಾಣಿಯ ಅನುಭವಗಳ ಅಭಿವ್ಯಕ್ತಿಯೇ ಭಾಷೆ''. ಈ ವಿವರಣೆಯು ಪ್ರಾಣಿಗಳ ಕೂಗುಗಳನ್ನೂ, ಮನುಷ್ಯ ಸಂಜ್ಞೆಗಳನ್ನೂ ಒಳಗೊಳ್ಳುವುದು.

ಮಾರ್ಟ ''ಒಂದು ಚಿತ್ತಸ್ಥಿತಿಯನ್ನು ವ್ಯಕ್ತಪಡಿಸುವವನು ಮಾಡುವ ಉದ್ದೇಶಪೂರ್ವಕ ಧ್ವನಿಗಳ ಉಚ್ಚಾರಣೆಯೇ ಭಾಷೆ'' ಎಂದು ಅಭಿಪ್ರಾಯಿಸುತ್ತಾನೆ. ಈ ಸೂತ್ರ ಹಿಂದಿನದ್ದಕ್ಕಿಂತ ಉತ್ತಮವಾದುದಾದರೂ ಅಷ್ಟು ಸಮರ್ಪಕವೆನಿಸುವುದಿಲ್ಲ. ಈ ವ್ಯಾಖ್ಯೆ ಭಾಷೆ ನಮ್ಮ ಅಂತರಂಗವನ್ನು, ಚಿತ್ತಸ್ಫೂರ್ತಿಯನ್ನು ಧ್ವನಿಗಳ ಮೂಲಕ ವ್ಯಕ್ತಪಡಿಸುವ ಒಂದು ಸಾಧನ ಎಂಬುದನ್ನು ಸಂಗ್ರಹವಾಗಿ ಹೇಳುತ್ತದೆ.

ಎರ್ಡ್‌ಮನ್ ಪ್ರಕಾರ ''ಭಾಷೆ ಎನ್ನುವುದು ಅಭಿವ್ಯಕ್ತಿಯ ಒಂದು ವಿಧಾನವಲ್ಲ, ಅದೊಂದು ರೀತಿಯ ಆಲೋಚನೆ''. ಭಾಷೆ ಒಂದು ಸಾಧನ, ಮನುಷ್ಯರಿಗೆ ವಿಶಿಷ್ಟವಾಗಿರುವ ಆಲೋಚನೆಯಿಂದ ಬಂದ ಸಾಧನ. ಈ ವ್ಯಾಖ್ಯೆಯು ಭಾಷೆ ಮತ್ತು ಆಲೋಚನೆಗಿರುವ ಅನೇಕ ಸಮಸ್ಯೆಗಳನ್ನು ಎತ್ತುತ್ತದೆ.

ಡಿ.ಸಸೂರನು ''ಭಾಷೆ ಎಂಬುದು ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಂಕೇತಗಳ ಒಂದು ವ್ಯವಸ್ಥೆ''ಎನ್ನುತ್ತಾನೆ.

ಸಫೀರನು ''ಸ್ವಪ್ರೇರಿತವಾಗಿ ಉಚ್ಚರಿಸಿದ ಸಂಕೇತಗಳ ಒಂದು ವ್ಯವಸ್ಥೆಯ ಮೂಲಕ ಅಭಿಪ್ರಾಯಗಳನ್ನು, ಭಾವಗಳನ್ನು ಇಷ್ಟಗಳನ್ನು ಪ್ರಧಾನ ಮಾಡಿಲಿರುವ ಮನುಷ್ಯನಿಗೆ ವಿಶಿಷ್ಟವಾದ ಅವನ ಸ್ವಭಾವ ಸಿದ್ಧವಲ್ಲದ ರೀತಿಯೇ ಭಾಷೆ'' ಎಂದು ಅಭಿಪ್ರಾಯಿಸುತ್ತಾನೆ.

ಭಾಷಾ ವಿಜ್ಞಾನಿಗಳ ಮೇಲ್ಕಂಡ ವ್ಯಾಖ್ಯೆಗಳೆಲ್ಲವೂ ಒಂದು ದೃಷ್ಟಿಯಲ್ಲಿ ಸಮರ್ಪಕವಾಗಿದ್ದರೆ, ಮತ್ತೊಂದು ರೀತಿಯಲ್ಲಿ ಅಸಮರ್ಪಕವಾಗಿ ವೆನಿಸುತ್ತವೆ. ಭಾಷೆಯ ಪರಿಪೂರ್ಣ ಕಲ್ಪನೆಯನ್ನು ಒಂದು ಮಾತಿನಲ್ಲಿ ಹಿಡಿದಿಡಲು ಕಷ್ಟಸಾಧ್ಯವಾಗಿದೆ. ಇದುವರೆಗಿನ ವ್ಯಾಖ್ಯೆಗಳಲ್ಲಿ ಇದ್ದುದ್ದೆಲ್ಲಕ್ಕಿಂತ ಉತ್ತಮವಾದ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾದ ಸೂತ್ರ ಎಂದರೆ ಬ್ಲಾಕ್ ಮತ್ತು ಟ್ರೇಗರ್ ರವರದು ಅವರ ವ್ಯಾಖ್ಯೆ ಹೀಗಿದೆ.''ಮನುಷ್ಯರ ಸಾಮಾಜಿಕ ಕ್ರಿಯೆಗೆ ಪೋಷಕವಾದ ಮೌಖಿಕ ಯಾದೃಚ್ಛಿಕ ಧ್ವನಿ ಸಂಕೇತಗಳೇ ಭಾಷೆ''. (A Language is a structural system of arbitary vocal sounds by means of which a social group co-operation) ಭಾಷೆಯು ಮುಖ್ಯವಾಗಿ ಸಮಾಜದ ಜೀವಿಗಳ ವ್ಯವಹಾರಕ್ಕಾಗಿ ಹುಟ್ಟಬಂದಿದೆ. ಸಮಾಜದಲ್ಲಿರುವ ವಿವಿಧ ಜನರ ನಡುವೆ ಸಂಪರ್ಕ ಕಲ್ಪಿಸಿ ಅವರ ವಿಚಾರ-ವಿನಿಮಯಕ್ಕೆ ಸಹಾಯಕವಾಗುವುದೇ ಭಾಷೆ. ಭಾಷೆಯಲ್ಲಿ ಕಾಣುವ ವ್ಯವಸ್ಥೆ ಮೌಖಿಕ ಸಂಕೇತಗಳಿಗೆ ಸಂಬಂಧಿಸಿದ್ದು ಎಂಬ ಈ ಅಂಶಗಳು ಮೇಲ್ಕಂಡ ಸೂತ್ರದಿಂದ ವ್ಯಕ್ತವಾಗುತ್ತವೆ.

ಕೇವಲ ಮೌಖಿಕವಾದ ಅದರಲ್ಲಿಯೂ ಮಹತ್ವದ ವ್ಯವಹಾರ ಯೋಗ್ಯವಾದ ಸಂಕೇತಗಳು ಮಾತ್ರ ಭಾಷೆಯ ವ್ಯಾಪ್ತಿಗೆ ಬರುತ್ತವೆ. ಆದರೆ ಈ ಸಂಕೇತಗಳಲ್ಲಿ ಸಾರ್ವಕಾಲಿಕವಾದ ಖಚಿತತೆ ಇಲ್ಲ. ಕಾಲ ಕಾಲಕ್ಕೆ ದೇಶದಿಂದ ದೇಶಕ್ಕೆ ಭಿನ್ನವಾಗುತ್ತಾ ಬಂದಿದೆ. ಒಂದು ಜನಾಂಗ ತನಗೆ ಸರಿಕಂಡಂತೆ ತನ್ನ ಅನುಕೂಲಕ್ಕೆ ಸಂಕೇತಗಳನ್ನು ನಿರ್ಮಿಸಿಕೊಳ್ಳಬಹುದು. ಆದ್ದರಿಂದಲೇ ವಿಶ್ವದ ಪ್ರತಿಯೊಂದು ಭಾಷೆಯು ವಿಶಿಷ್ಟ ಸಂಕೇತಗಳ ಒಂದು ವ್ಯವಸ್ಥೆಯಾಗಿರುವುದು.

ಒಟ್ಟಿನಲ್ಲಿ ಭಾಷೆಯ ವ್ಯಾಖ್ಯೆ ಅದನ್ನು ನೋಡುವ, ಪರಿಶೀಲಿಸುವ ವ್ಯಕ್ತಿಗಳ ದೃಷ್ಟಿ, ವಿಷಯ ಸಂಗ್ರಹಣೆಗೆ ಅನುಗುಣವಾಗಿ ಭಿನ್ನವಾಗುತ್ತಾ ಹೋಗಿವೆ. ಇದರಿಂದ ಒಂದೊಂದು ವ್ಯಾಖ್ಯೆಯೂ ಭಾಷೆಯನ್ನು ಕುರಿತಾದ ಒಂದೊಂದು ಅಭ್ಯಾಸದ ಮುಖವನ್ನು ಸೂಚಿಸುತ್ತದೆ ಎನ್ನಬಹುದು.

ಭಾಷೆಯನ್ನು ಕುರಿತು ಕೇವಲ ಭಾಷಾ ಶಾಸ್ತ್ರಜ್ಞರಲ್ಲದೆ, ಸಮಾಜ ಶಾಸ್ತ್ರಜ್ಞರು, ಮನೋವಿಜ್ಞಾನಿಗಳು ಮತ್ತು ತತ್ವಶಾಸ್ತ್ರಜ್ಞರು ಶಾಸ್ತ್ರೀಯವಾಗಿ ವಿವೇಚಿಸಿದ್ದಾರೆ. ಸಮಾಜ ಶಾಸ್ತ್ರಜ್ಞರ ದೃಷ್ಟಿಯಲ್ಲಿ ಭಾಷೆ ಎಂದರೆ 'ಸಾಮಾಜಿಕ ಒಪ್ಪಂದದ ಕೊನೆಯ ಕ್ರಿಯೆ', ಮನೋವಿಜ್ಞಾನಿಗಳ ದೃಷ್ಟಿಯಲ್ಲಿ 'ಭಾಷೆ ಮಾನವನ ಆಂತರಿಕ ಜೀವನಕ್ಕೆ ಸಂಬಂಧಿಸಿದ್ದಾಗಿದೆ', ತತ್ವಶಾಸ್ತ್ರಜ್ಞರ ದೃಷ್ಟಿಯಲ್ಲಿ 'ಭಾಷೆ ಇಹ-ಪರಗಳ ನಡುವಿನ ಸೇತುವೆಯಾಗಿದೆ'. ಒಟ್ಟಿನಲ್ಲಿ '' ಭಾಷೆ ಧ್ವನಿ ಸಂಕೇತಗಳ ವ್ಯವಸ್ಥೆ'' ಎಂಬ ತೀರ್ಮಾನಕ್ಕೆ ನಾವೆಲ್ಲರೂ ಬರಬಹುದಾಗಿದೆ.

ಭಾಷೆಯ ಲಕ್ಷಣಗಳು

ಭಾಷಾಶಾಸ್ತ್ರಜ್ಞನಾದ ಹಾಕೆಟ್ ಎಂಬಾತ ಭಾಷೆಯಲ್ಲಿ ಏಳು ಲಕ್ಷಣಗಳನ್ನು ಗುರುತಿಸಿದ್ದಾನೆ. ಅವುಗಳೆಂದರೆ,

೧) ದ್ವಿರೂಪ:-ಪ್ರತಿಭಾಷೆಯೂ ಎರಡು ರೀತಿಯ ಧ್ವನಿಘಟಕಗಳ ವ್ಯವಸ್ಥೆಯನ್ನು ಹೊಂದಿರುತ್ತದೆ . ಅವು

ಅ) ಧ್ವನಿಮಾ:-ಇದು ಅರ್ಥವಿಲ್ಲದ ಘಟಕ. ವರ್ಣ ಮಾಲೆಯೇ ಇದಕ್ಕೆ ಉದಾಹರಣೆ.

ಆ) ಆಕೃತಿಮಾ:- ಅರ್ಥವಿರುವ ಘಟಕ.ಇಲ್ಲಿ ಧ್ವನಿಮಾಗಳ ಅರ್ಥ ಪೂರ್ಣ ಹೊಂದಾಣಿಕೆ ಇರುತ್ತದೆ. ಉದಾ:-ಪದಗಳು.

೨) ಉತ್ಪಾದಕತೆ:-ಭಾಷೆಯ ರಚನಾಂಗಗಳನ್ನು ಸೇರಿಸಿ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸಲು ಸಾಧ್ಯ.

ಉದಾ:-ನಿಸಾರ್‌ಅಹಮದ್‌ರವರ ದುಡ್ಡಸ್ತಿಕೆ, ಲತಾಕುಮಾರಿ ಎಂಬ ಶಬ್ದರೂಪಗಳು.

೩) ಯಾದೃಚ್ಛಿಕತೆ-ಪದ ಸೂಚಿಸುವ ಅರ್ಥಕ್ಕೂ ಆ ವಸ್ತು ಅಥವಾ ಕ್ರಿಯೆಗೂ ಸಹಜವಾದ

ಸಂಬಂಧವಿರುವುದಿಲ್ಲ. ಅದು ಯಾದೃಚ್ಛಿಕ ಅಂದರೆ ಇಚ್ಛೆಯಿಂದ ಸೂಚಿಸುವುದು.

ಉದಾ:-ನೀರು, ಜಲ, ಪಾನಿ, ವಾಟರ್.

೪) ಅಂತರ್‌ವಿನಿಮಯ ಕ್ಷಮತೆ :- ಒಂದು ಭಾಷೆಯನ್ನು ಬಳಸುವವರು ಆ ಚೌಕಟ್ಟಿನಲ್ಲಿಯೇ ಮಾತಿನ ಮೂಲಕ ಹೇಳುವುದರಿಂದಾಗಲಿ, ಕೇಳುವುದರಿಂದಾಗಲೀ ಸಂದೇಶವನ್ನು ರವಾನಿಸಬಹುದು.

೫) ಸಾಂಸ್ಕೃತಿಕ ಪ್ರಸಾರ:-ಅನುಕರಣೆಯಿಂದ ಭಾಷೆಯ ಮೂಲಕ ಕಲಿತ ಜ್ಞಾನವನ್ನು ಮಾತಿನ ಮೂಲಕ ಪ್ರಸರಿಸುತ್ತೇವೆ. ಹೀಗೆ ಭಾಷೆಯ ಮೂಲಕ ಸಂಸ್ಕೃತಿ ದಾಖಲಾಗುವುದು ಮತ್ತು ಪ್ರಸರಿಸುವುದು.

೬) ಪರ್ಯಾಯ ಬಳಕೆ :-ಉಲ್ಲೇಖಿಗೊಂಡ ವ್ಯಕ್ತಿ, ವಸ್ತು, ಸಂಗತಿ ನೇರವಾಗಿ ಎದುರಿಗಿದ್ದಾಗ ಮಾತ್ರವಲ್ಲದೆ ಪರ್ಯಾಯವಾಗಿಯೂ ಅವುಗಳನ್ನು ಸೂಚಿಸಲು ಭಾಷೆಯನ್ನು ಬಳಸಬಹುದು. ಉದಾ:-ಹಿಮಪಾತ, ಯುದ್ಧ, ಕ್ಷಾಮ, ಅನಾವೃಷ್ಟಿ,ಅತಿವೃಷ್ಟಿ.

೭) ವಿಶಿಷ್ಟತೆ:-ಪ್ರತಿ ಭಾಷೆಯೂ ತನ್ನ ರಚನೆ ಅಥವಾ ಅರ್ಥಗಳ ಕಟ್ಟಿನಲ್ಲಿ ಸಂದೇಶಗಳನ್ನು ಅಭಿವ್ಯಕ್ತಿಗೊಳಿಸಲು ಸಮರ್ಥವಾದ ಒಂದು ವಿಶಿಷ್ಟ ಪದ್ಧತಿಯನ್ನು ಹೊಂದಿದೆ. ಉಕ್ತವಾದ ಮಾತುಗಳಿಗೂ ಕ್ರಿಯೆಗಳಿಗೂ,ಅರ್ಥಕ್ಕೂ ನೇರವಾದ ಭೌತಿಕ ಸಂಬಂಧವಿಲ್ಲದಿದ್ದರೂ ರೂಢಿಯಿಂದ ಅರ್ಥಸಾಧ್ಯವಾಗುತ್ತದೆ.

ಹೀಗೆ ಭಾಷೆ ಪ್ರಮುಖವಾಗಿ ಏಳು ಲಕ್ಷಣಗಳನ್ನು ಹೊಂದಿರುತ್ತದೆ ಎಂಬ ವಿಚಾರವನ್ನು ಭಾಷಾವಿಜ್ಞಾನಿಗಳು ಅಂಗೀಕರಿಸಿದ್ದಾರೆ. ಹೀಗೆ ಭಾಷೆ ಮನುಷ್ಯನ ಬದುಕಿನ ಅನಿವಾರ್ಯವಾದ ಅವಿಭಾಜ್ಯವಾದ ಭಾಗವಾಗಿದೆ. ಅದು ಸಮಾಜದ ಸಂಸ್ಕೃತಿಯ ಹಾಗೂ ಮನುಷ್ಯನ ಸಕಲ ಚಿಂತನೆಗೂ ವ್ಯವಹಾರಕ್ಕೂ ಅಗತ್ಯವಾದ ಭಾಗವಾಗಿದೆ.

ಭಾಷೆಯ ಉಗಮದ ಸಿದ್ಧಾಂತಗಳು :

ಭಾಷೆ ನಿರ್ದಿಷ್ಟವಾಗಿ ಎಂದು, ಯಾವಾಗ, ಎಲ್ಲಿ ಹುಟ್ಟಿತು ಎಂಬುದನ್ನು ಹೇಳುವುದು ತುಂಬಾ ಕಷ್ಟಕರವಾದ ಕೆಲಸ. ಈ ಭಾಷೆಯ ಉಗಮದ ಬಗ್ಗೆ ಪ್ರಪಂಚದಾದ್ಯಂತ ಹಲವಾರು ಭಾಷಾ ವಿಜ್ಞಾನಿಗಳು ತಮ್ಮದೇ ಆದ ವಿವಿಧ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಆದರೆ ಅವುಗಳು ಪೂರ್ಣವಾಗಿ ಸ್ವೀಕರಿಸಲು ಯೋಗ್ಯವಲ್ಲದಿದ್ದರಿಂದ ಮತ್ತೂ ಚರ್ಚೆಗೆ ಒಳಪಡುತ್ತಿವೆ. ಭಾಷೆಯ ಉಗಮದ ವಿಷಯ ಬಹಳ ಕ್ಲಿಷ್ಟವೂ, ಗೊಂದಲಮಯವೂ ಆದುದರಿಂದ ಯೆಸ್ಪರ್ಸನ್ ಎಂಬ ಭಾಷಾ ವಿಜ್ಞಾನಿ ಇನ್ನು ಅವುಗಳ ಚರ್ಚೆಯೇ ಬೇಡ ಎಂದು ಹೇಳುತ್ತಾನೆ. ಮನುಷ್ಯ ಪ್ರಯತ್ನ ಪೂರ್ವಕವಾಗಿ ಸೃಷ್ಟಿಸಿಕೊಂಡುದು ಭಾಷೆ ಎಂಬುದು ಅವನ

ಖಚಿತ ಅಭಿಪ್ರಾಯ.

ಭಾಷೆಯ ಉಗಮದ ಬಗೆಗೆ ಹಲವಾರು ಸಿದ್ಧಾಂತಗಳಿವೆ ಅವುಗಳಲ್ಲಿ ಪ್ರಮುಖವಾದವುಗಳು ಈ ಮುಂದಿನಂತಿವೆ.

1. ಅನುಕರಣವಾದ :

ಇದನ್ನು 'ಲಿಬ್ನಿಜ್' ಎಂಬಾತ ಮಂಡಿಸಿದ, ನಿಸರ್ಗದ ನಡುವೆ ಬದುಕುತ್ತಿದ್ದ ಮನುಷ್ಯ ಪ್ರಾಣಿ- ಪಕ್ಷಿಗಳ ಧ್ವನಿ, ಚಲನ-ವಲನ ಇವುಗಳಿಂದ ಅನುಕರಣೆಗೊಂಡನು. ಇವುಗಳ ಅನುಕರಣೆಯಿಂದಲೇ ಮುಂದೆ ಶಬ್ದಗಳನ್ನು ಸೃಷ್ಟಿ ಮಾಡಿದ. ಕಾಕಾ-ಕಾಗೆ, ಗೂಗೂ - ಗೂಬೆ, ಕೊಕ್ಕೋ - ಕೋಳಿ, ಮೇಮೇ - ಮೇಕೆ ಇತ್ಯಾದಿ. ಆದರೆ ಈ ವಾದವನ್ನು ಹಲವು ವಿದ್ವಾಂಸರು ಒಪ್ಪಲಿಲ್ಲ ಈ ತರಹದ ಪದಗಳು ಒಂದು ಭಾಷೆಯಲ್ಲಿ ಎಷ್ಟು ಇರಲು ಸಾಧ್ಯ ಎಂಬುದು ಅವರ ಪ್ರಶ್ನೆ. ಮ್ಯಾಕ್ಸ್ ಮುಲ್ಲರ್‌ರಂತಹವರು ಈ ಅನುಕರಣವಾದವನ್ನು ''ಬೌಬೌ ಥಿಯರಿ'' ಎಂದು ಹಾಸ್ಯ ಮಾಡಿದರು. ಇದು ಅಷ್ಟಕ್ಕೇ ನಿಂತಿತು.

2. ಉದ್ಗಾರವಾದ :-

ಮನುಷ್ಯ ಭಾವೋದ್ವೇಗದ ಸಂದರ್ಭದಲ್ಲಿ ಕೆಲವು ಶಬ್ದಗಳನ್ನು ಹೊರಡಿಸುತ್ತಾನೆ. ಅದು ಥೂ!, ಛೀ! ಓಹೋ! ಇತ್ಯಾದಿ. ಇವುಗಳಿಂದ ಮುಂದೆ ಭಾಷೆ ಬೆಳೆಯಿತು ಎಂಬುದು ಈ ಸಿದ್ಧಾಂತದ ವಾದ, ಆದರೆ ಇದೂ ಯಶಸ್ವಿಯಾಗಲಿಲ್ಲ. ಇದನ್ನು 'ಪೊಹ್ ಪೊಹ್ ಥಿಯರಿ' ಎಂದು ವ್ಯಂಗ್ಯ ಮಾಡಿದರು.

3. ಅನುಕರಣನ ವಾದ : -

ಪ್ರತಿಯೊಂದು ವಸ್ತುವಿಗೂ ಪ್ರಕೃತಿದತ್ತವಾದ ಶಬ್ದ ಹೊರಡಿಸುವ ಸಾಮರ್ಥ್ಯವಿದೆ. ಘಂಟಾನಾದ, ಡಮರುಗ, ಜಾಗಟೆ ರಭಸ, ಲೋಹಗಳ ಘರ್ಷಣೆಯ ಶಬ್ದ ಇತ್ಯಾದಿ, ಇವುಗಳ ಅನುಕರಣೆಯಿಂದ ಭಾಷೆ ಸೃಷ್ಟಿಯಾಯಿತೆಂದು ಮ್ಯಾಕ್ಸ್‌ಮುಲ್ಲರ್ ಈ ಸಿದ್ಧಾಂತವನ್ನು ಪ್ರತಿಪಾದಿಸಿ ಅನಂತರ ಸಮಾಧಾನವಾಗದೆ ಸ್ವತಃ ಕೈ ಬಿಟ್ಟರು. ಇದೂ ಸಹ ತೀವ್ರ ಟೀಕೆಗೆ ಒಳಗಾಗಿದೆ. ಇದನ್ನು 'ಡಿಂಗ್ ಡಾಂಗ್ ಥಿಯರಿ' ಎಂದು ಹಾಸ್ಯ ಮಾಡಿದರು.

4. ಶ್ರಮ ಪರಿಹಾರವಾದ :-

ಕಷ್ಟಕರವಾದ ಕೆಲಸಗಳನ್ನು ಮಾಡುವಾಗ ಕೆಲವು ಧ್ವನಿಗಳನ್ನು ಹೊರಡಿಸುತ್ತಾರೆ. ಐಸಾ, ಉಸ್ಸ್, ಹೂಂ, ಹಾಂ ಇತ್ಯಾದಿ ಇವುಗಳಿಂದ ಭಾಷೆ ಸೃಷ್ಟಿಯಾಯಿತೆಂದು ನೋರಿ ಎಂಬಾತ ಪ್ರತಿಪಾದಿಸಿದ. ಇದೂ ಸಹ ಅಸಮರ್ಪಕ ವಿವರಣೆ ಎನಿಸಿಕೊಂಡಿತು. ಇದು ಯೋ - ಹೇ - ಹೋ ವಾದ ಎಂದು ಹೆಸರಾಯಿತು.

5. ಸಂಜ್ಞಾವಾದ :-

ಆಂಗಿಕ ಚಲನ-ವಲನಗಳ ಮೂಲಕ ಸಂಕೇತಗಳ ಮೂಲಕ ಮನುಷ್ಯ ವ್ಯವಹರಿಸುತ್ತಿದ್ದು, ಆನಂತರ ಭಾಷೆ ಅವುಗಳ ಸ್ಥಾನವನ್ನು ಆಕ್ರಮಿಸಿತು ಎಂಬುದು ಈ ಸಿದ್ಧಾಂತದ ವಾದ. ಸಂಜ್ಞಾಭಾಷೆ ಆಂಗಿಕ ಚಲನೆ ಸೂಚನೆಗಳಿಗೆ ಸಂಬಂಧಿಸಿದ್ದು. ಭಾಷೆ ಬೌದ್ಧಿಕವಾದದ್ದು. ಆಂಗಿಕ ಸಂಜ್ಞೆಗಳಿಂದ ಭಾಷೆ ವಿಕಾಸಗೊಂಡಿತು ಎನ್ನುವುದು ಸರಿಯಲ್ಲ ಎಂಬುದು ಈ ವಾದಕ್ಕಿರುವ ಮುಖ್ಯ ಆಕ್ಷೇಪ. ಇದು ಭಾಷಾ ವಿಜ್ಞಾನಿ ವುಂಡ್ಸ್‌ನ ವಾದ.

ಇವಿಷ್ಟೇ ಅಲ್ಲದೇ ಸಂಪರ್ಕವಾದ, ಬಾಬಾ ಸಿದ್ಧಾಂತ, ಸಿಂಗ್-ಸಾಂಗ್ ಥಿಯರಿ, ಮುಂತಾದ ವಾದ - ಸಿದ್ಧಾಂತಗಳೂ ಪ್ರತಿಪಾದಿತವಾಗಿವೆ.

ಒಟ್ಟನಲ್ಲಿ ಭಾಷೆಯ ಉಗಮದ ವಿಚಾರ ಗೊಂದಲಮಯವಾಗಿದೆ. ಮೇಲ್ಕಂಡ ವಿದ್ವಾಂಸರ ವಾದಗಳು ಒಂದು ದೃಷ್ಟಿಯಲ್ಲಿ ಪರಿಪೂರ್ಣವೆನಿಸಿದರೆ ಮತ್ತೊಂದು ದೃಷ್ಟಿಯಲ್ಲಿ ಅಪರಿಪೂರ್ಣವೆನಿಸುತ್ತವೆ.

ಭಾಷಾ ವಿಜ್ಞಾನ :

ಭಾಷೆಯನ್ನು ಕುರಿತ ಅಧ್ಯಯನ ವೇದಗಳ ಕಾಲದಿಂದಲೇ ಪ್ರಾರಂಭವಾಗುತ್ತದೆ. ಅಷ್ಟಾಧ್ಯಾಯಿ, ಪಾಣಿನಿ, ಪತಂಜಲಿ ಮೊದಲಾದವರು ವ್ಯಾಕರಣ ಬರೆದರೂ, ಭಾಷೆಯನ್ನು ಅಧ್ಯಯನ ಮಾಡಿ ವಿವರಿಸಿ, ನಿಯಮಗಳನ್ನು ಹಾಕದ ಕಾರಣ ಭಾಷೆಯ ಸ್ವರೂಪ, ಬೆಳವಣಿಗೆಯ ವಿಧಾನ, ಇತ್ಯಾದಿಗಳ ಕಡೆ ಅವರ ಗಮನ ಹರಿಯಲಿಲ್ಲ. ಅಲ್ಲದೇ ಸಂಸ್ಕೃತ ಮಾತ್ರವೇ ಅವರ ಅಧ್ಯಯನಕ್ಕೆ ಒಳಗಾದ ಭಾಷೆ, ಹಾಗೆ ಪ್ರತ್ಯೇಕವಾಗಿ ಗ್ರೀಕ್ ಹಾಗೂ ರೋಮನ್ನರಲ್ಲೂ ಭಾಷಾ ವಿಷಯಕ್ಕೆ ವಿವೇಚನೆಗಳು ನಡೆದವು. ಅವರಿಗೂ ತಮ್ಮ ತಮ್ಮ ಭಾಷೆಯೇ ಮುಖ್ಯವಾಯಿತು. ಭಾರತದಲ್ಲಿ ಸಂಸ್ಕೃತ ಭಾಷೆಯು ಕಟ್ಟು-ಪಾಡುಗಳಿಗೆ ಒಳಗಾಗಿ, ಬೆಳವಣಿಗೆ ಕುಂಠಿತವಾಗಿ ವ್ಯವಹಾರದಿಂದ ಮರೆಯಾಗಿ ಕೇವಲ ವಿದ್ವಾಂಸರ ಭಾಷೆಯಾಗಿ ಉಳಿಯಿತು. ಬೇರೆ ಭಾಷೆಗಳು ಕಾಣಿಸಿಕೊಂಡಂತೆ ಆ ಭಾಷೆಯ ವೈಯಾಕರಣರೂ ಸಂಸ್ಕೃತ ಮಾದರಿಯನ್ನೇ ಅನುಕರಿಸಿದರು. ಕನ್ನಡದಲ್ಲಿ ನಾಗವರ್ಮ, ಕೇಶಿರಾಜ, ಭಟ್ಟಕಳಂಕರು ಪ್ರಖ್ಯಾತರಾಗಿದ್ದಾರೆ. ಆದರೆ ಭಾಷೆಯನ್ನು ಕುರಿತ ಸಾಮಾನ್ಯ ಅಧ್ಯಯನ ಪ್ರಾರಂಭವಾದದ್ದು 19ನೇ ಶತಮಾನದಿಂದೀಚೆಗೆ.

ಭಾಷೆಯನ್ನು ಕುರಿತಂತೆ ತುಂಬಾ ವೈಜ್ಞಾನಿಕವಾಗಿ, ಸೋದಾಹರಣವಾಗಿ, ವಿಸ್ತೃತವಾಗಿ ಅಧ್ಯಯನ ಮಾಡುವ ವಿಧಾನಕ್ಕೆ ಭಾಷಾ ವಿಜ್ಞಾನ ಎನ್ನುವರು. 19ನೇ ಶತಮಾನದಿಂದೀಚೆಗೆ ಯೂರೋಪಿನ ಹಾಗೂ ಭಾರತೀಯ ಭಾಷೆಗಳ ಅಧ್ಯಯನವೂ ಪ್ರಾರಂಭವಾಯಿತು. ದ್ರಾವಿಡ ಭಾಷಾ ವರ್ಗವು ಪ್ರತ್ಯೇಕ ಭಾಷಾ ವರ್ಗವೆಂದು ಗುರುತಿಸಿದವರಲ್ಲಿ ರ್‍ಯಾಸ್ಮಸ್ ರಾಸ್ಕ್ ಎಂಬಾತ ಮೊದಲಿಗ. ಜಾಕಬ್ ಗ್ರೀಮ್ ತೌಲನಿಕ

ಭಾಷಾ ವಿಜ್ಞಾನಕ್ಕೆ ಸೂತ್ರಗಳನ್ನು ರೂಪಿಸಿದ. ಅವನ ಅನಂತರದ ಘಟ್ಟಗಳಲ್ಲಿ ಭಾಷಾ ವಿಜ್ಞಾನದ ಸ್ವರೂಪವೇ ಬದಲಾಯಿತು.

ಇಂದು ಭಾಷೆಯ ಹುಟ್ಟಿನಿಂದ ಆರಂಭಿಸಿ ವಿವಿಧ ಭಾಷಾ ವರ್ಗಗಳ ವಿವೇಚನೆ, ಅವುಗಳ ಇತಿಹಾಸ ಭಾಷೆಯ ವಿವಿಧ ರಚನಾ ವಿನ್ಯಾಸ, ಇತ್ಯಾದಿ, ಸಮಗ್ರ ಶಾಸ್ತ್ರೀಯ ವಿವೇಚನೆ ಭಾಷಾ ವಿಜ್ಞಾನದಲ್ಲಿ ಸೇರುತ್ತದೆ. ಸಾಮಾಜಿಕ, ಸಾಂಸ್ಕೃತಿಕ, ಮನೋವೈಜ್ಞಾನಿಕ ಮೊದಲಾದ ವಿಜ್ಞಾನ ವಿಭಾಗಗಳ ಸಂಬಂಧ ಹೊಂದಿ ಹಲವು ಶಿಸ್ತುಗಳನ್ನು ಕೂಡಿಸಿಕೊಂಡು ಭಾಷಾ ವಿಜ್ಞಾನ ಬೆಳೆದಿದೆ, ಈ ದೊಡ್ಡ ಭಾಷಾ ವಿಜ್ಞಾನ ಕ್ಷೇತ್ರವನ್ನು ಅಧ್ಯಯನ ಮಾಡಲಿಕ್ಕೆ ಪ್ರಮುಖವಾಗಿ ಭಾಷಾ ವಿಜ್ಞಾನಿಗಳು ಮೂರು ವಿಭಾಗಗಳನ್ನು ಮಾಡಿಕೊಂಡಿದ್ದಾರೆ. ಅವುಗಳಲ್ಲಿ :

1. ವಿವರಣಾತ್ಮಕ ಭಾಷಾ ವಿಜ್ಞಾನ :

ಒಂದು ಭಾಷೆ ಪ್ರಸ್ತುತದಲ್ಲಿ ಹೇಗಿದೆಯೋ, ಹಾಗೆಯೇ ಪೂರ್ಣವಾಗಿ ವಿವರಣಾತ್ಮಕವಾಗಿ ಅಧ್ಯಯನ ಮಾಡುವುದು, ಒಂದು ಭಾಷೆಯ ಧ್ವನಿಗಳು ಹುಟ್ಟುವ ಸ್ಥಾನ. ಧ್ವನಿಗಳ ವ್ಯವಸ್ಥೆ, ವರ್ಗೀಕರಣ, ಪದಕೋಶ, ಅಂತರರಾಷ್ಟ್ರೀಯ ಧ್ವನಿಲಿಪಿಗಳ ನಕ್ಷೆ ಇತ್ಯಾದಿ ವಿವರಗಳ ಅಧ್ಯಯನವೇ ವಿವರಣಾತ್ಮಕ ಭಾಷಾ ವಿಜ್ಞಾನ ಇದರಲ್ಲಿ ವಿವಿಧ ಶಾಖೆಗಳಿದ್ದು, ಧ್ವನಿ ವಿಜ್ಞಾನ, ಧ್ವನಿಮಾ ವಿಜ್ಞಾನ, ಆಕೃತಿಮಾ ವಿಜ್ಞಾನ, ವಾಕ್ಯ ವಿಜ್ಞಾನ ಇತ್ಯಾದಿ ಪ್ರತ್ಯೇಕ ಅಧ್ಯಯನ ವಿಷಯಗಳಾಗುತ್ತವೆ.

2. ತೌಲನಿಕ ಭಾಷಾ ವಿಜ್ಞಾನ :-

ಇದರಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡುವುದಾಗಿದೆ. ಬೇರೆ ಬೇರೆ ಭಾಷೆಗಳನ್ನು ಸಮಾನವಾಗಿ ಅಧ್ಯಯನ ಮಾಡುವುದರಿಂದ ಪರಸ್ಪರ ಅವುಗಳ ಗುಣ-ರೀತಿ, ಸ್ವಭಾವ ಇವುಗಳನ್ನು ತಿಳಿಯಬಹುದಾಗಿದೆ. ಅಲ್ಲದೆ ಯಾವ ಭಾಷಾ ವರ್ಗಕ್ಕೆ ಸೇರಿದ್ದವು ಎಂಬುದನ್ನು ನಿರ್ಧರಿಸಲು ಅನುಕೂಲಕರವಾಗಿದೆ.

3. ಚಾರಿತ್ರಿಕ/ಐತಿಹಾಸಿಕ ವಿಜ್ಞಾನ :

ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ಚರಿತ್ರೆ ಇರುತ್ತದೆ. ಹಾಗೆಯೇ ಭಾಷೆಗೂ ಒಂದು ಚರಿತ್ರೆ ಇರುತ್ತದೆ. ಏಕೆಂದರೆ ನೂರಾರು, ಸಾವಿರಾರೂ ವರ್ಷದಷ್ಟು ಹಳೆಯದಾದ ಭಾಷೆ ವಿವಿಧ ಕಾಲಗಳಲ್ಲಿ ಬದಲಾವಣೆ ಹೊಂದುತ್ತಾ, ಬೆಳೆಯುತ್ತಾ ಬರುತ್ತದೆ. ಭಾಷೆಗಳಲ್ಲಿನ ಧ್ವನಿ ವ್ಯತ್ಯಾಸ, ಅರ್ಥ ವ್ಯತ್ಯಾಸ ಅನ್ಯಭಾಷಾ ಸ್ವೀಕರಣ, ಕೊಡು-ಕೊಳ್ಳು ಇತ್ಯಾದಿಗಳನ್ನು ಕುರಿತಂತೆ ಈ ವಿಭಾಗದಲ್ಲಿ ಅಧ್ಯಯನ ಮಾಡಲಾಗುತ್ತದೆ.

ಭಾಷಾ ವೈವಿಧ್ಯ :-

ಮಾನವ ಕುಲಕ್ಕೆ ಪರಿಮಿತಗೊಂಡಿರುವ ವಿಶಿಷ್ಟ ಸಂಪರ್ಕ ಮಾಧ್ಯಮವಾದ ಭಾಷೆ ಬೇರಾವ ಪ್ರಾಣಿಗಳಲ್ಲಿಯೂ ಇಷ್ಟು ವ್ಯವಸ್ಥಿತವಾಗಿ ಬಳಕೆಯಾಗುತ್ತಿಲ್ಲ. ಇದು ಅನುವಂಶಿಕವಾಗಿ ಸಾಗುವುದರ ಬದಲು

ಸಾಂಸ್ಕೃತಿಕವಾಗಿ, ಸಂಸ್ಕೃತಿಯ ಶಾಖೆಯಾಗಿ ಮಾನವ ಜನಾಂಗದಲ್ಲಿ ಪ್ರವಹಿಸುತ್ತಾ ಬಂದಿದೆ. ಇಂತಹ ಭಾಷಾ ಪ್ರಪಂಚವನ್ನು ಗಮನಿಸಿದಾಗ ಭಾಷೆಯ ವೈವಿಧ್ಯಗಳು ನಮಗೆ ಗೋಚರಿಸುತ್ತವೆ.

ಮಾತೃಭಾಷೆ :-

ಹೆತ್ತವರಿಂದ ಸಹಜವಾಗಿ ಕಲಿತುಕೊಂಡು, ಹುಟ್ಟಿನಿಂದ ಕೇಳಿಕೊಂಡು, ಗೆಳೆಯರೊಡನೆ ಆಡಿಕೊಂಡು ಗಳಿಸಿಕೊಂಡ ಭಾಷೆಯನ್ನು ಮಾತೃಭಾಷೆ ಎನ್ನಬಹುದು. ಮಾತೃಭಾಷೆಯನ್ನು ವ್ಯಕ್ತಿ ಸಹಜವಾಗಿ ಕಲಿಯುತ್ತಾನೆ. ಹೆಚ್ಚಾಗಿ ಬಾಲ್ಯಾವಸ್ಥೆಯಿಂದಲೇ ತನ್ನ ತಂದೆ-ತಾಯಿಗಳಿಂದ, ಅದರಲ್ಲೂ ತಾಯಿಯ ಮಡಿಲಿನಿಂದಲೇ ಈ ಭಾಷೆಯನ್ನು ವ್ಯಕ್ತಿ ಕಲಿಯುವುದರಿಂದ ಇದಕ್ಕೆ ಮಾತೃಭಾಷೆ ಎಂಬ ಹೆಸರು ಬಂದಿದೆ.

ಸ್ವಭಾಷೆ :-

ಒಬ್ಬ ವ್ಯಕ್ತಿ ಯಾವ ಸಮಾಜದ ಸದಸ್ಯನಾಗಿ ಬಾಳುತ್ತಿರುತ್ತಾನೋ ಆ ಸಮಾಜ ರೂಪಿಸಿಕೊಂಡಿರುವ ಭಾಷೆಯೇ ಅವನ ಸ್ವಭಾಷೆಯೂ ಆಗುತ್ತದೆ. ಸ್ವಭಾಷೆಯನ್ನು 'ಪ್ರಥಮ ಭಾಷೆ' ಎಂದೂ ಕೆಲವರು ಕರೆಯುತ್ತಾರೆ. ಕರ್ನಾಟಕದಲ್ಲಿರುವ ಮುಸ್ಲಿಮರು ಉರ್ದು ಮಾತೃಭಾಷೆಯ ಜೊತೆಗೆ ಕನ್ನಡವನ್ನು ಸ್ವಭಾಷೆಯಾಗಿ ಕಲಿಯಬೇಕಾಗುತ್ತದೆ. ಆದ್ದರಿಂದ ಉರ್ದು ಅವರ ಮಾತೃಭಾಷೆ, ಕನ್ನಡ ಸ್ವಭಾಷೆ ಆಗಿರುತ್ತದೆ.

ಪರಭಾಷೆ ಅಥವಾ ಅನ್ಯಭಾಷೆ :-

ಸ್ವಭಾಷೆ, ಮಾತೃಭಾಷೆಯನ್ನು ಬಿಟ್ಟು ಉಳಿದ ಭಾಷೆಗಳು ಪರಭಾಷೆ ಅಥವಾ ಅನ್ಯಭಾಷೆಯಾಗುತ್ತವೆ. ವ್ಯಕ್ತಿ ತನ್ನ ಪರಿಸರದಿಂದ ಹೊರತಾದ ಭಾಷೆಯನ್ನು ಒಂದು ನಿರ್ದಿಷ್ಟ ಉದ್ದೇಶದಿಂದ ಕಲಿತುಕೊಂಡರೆ ಅದು ಅವನ ಪರಭಾಷೆ ಆಗುತ್ತದೆ.

ವ್ಯಕ್ತಿಭಾಷೆ :

ಒಬ್ಬ ವ್ಯಕ್ತಿ ಒಂದು ಭಾಷೆಯನ್ನು ಒಂದು ಅವಧಿಯಲ್ಲಿ ಆಡುವುದು ವ್ಯಕ್ತಿ ಭಾಷೆ ಎನಿಸಿಕೊಳ್ಳುತ್ತದೆ. ಒಂದು ಭಾಷೆಯನ್ನು ಆಡುವ ಒಬ್ಬ ವ್ಯಕ್ತಿ ಎಲ್ಲಾ ವೇಳೆಯಲ್ಲಿಯೂ ಒಂದೇ ಬಗೆಯಲ್ಲಿ ಮಾತನಾಡಲಾರ. ಅವನ ಪ್ರತಿ ಉಚ್ಚಾರವು ವ್ಯತ್ಯಾಸದಿಂದ ಕೂಡಿರುತ್ತದೆ ಎಂದರ್ಥ. ಇದು ಅವನ ಪರಿಸರ ಹಾಗೂ ಪರಿಸ್ಥಿತಿಗೂ ವ್ಯತ್ಯಾಸವಾಗಲೂಬಹುದು. ಆಗ ವ್ಯಕ್ತಿಭಾಷಾ ರೂಪ ಒಂದು ಅತಿ ಸೂಕ್ಷ್ಮ ರೂಪವಾಗಿ ಕಾಣಿಸಿಕೊಳ್ಳುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಉಪಭಾಷೆ :

ಒಂದು ಭಾಷೆಯ ಒಂದು ಪ್ರಭೇದವನ್ನು ಉಪಭಾಷೆ ಎನ್ನಬಹುದು. ಒಂದೇ ಸಮುದಾಯಕ್ಕೆ ಸೇರಿದ ಜನರು ಆಡುವ ನಾನಾ ವೈವಿಧ್ಯಗಳಿಂದ ಕೂಡಿರುವ ಒಂದು ಭಾಷಾ ಪ್ರಭೇದವನ್ನೇ ಉಪಭಾಷೆ ಎನ್ನುವರು.

ಉಪಭಾಷೆ ಎನ್ನುವುದು ಒಂದು ಭಾಷೆಯ ಒಂದು ಭಾಷಾ ಪ್ರಬೇಧ ಅಷ್ಟೇ. ಪರಸ್ಪರ ಅರಿವಿಗೆ ಸಾಮಾನ್ಯ ಭಾಷಿಕಾಂಶಗಳನ್ನು ತಕ್ಕಮಟ್ಟಿಗೆ ಹೊಂದಿರುವ, ಅನೇಕ ಅಂಶಗಳಲ್ಲಿ ವ್ಯತ್ಯಾಸ ಹೊಂದಿರುವ ಹಲವು ಉಪಭಾಷೆಗಳ ಸಮುದಾಯವನ್ನೇ ಭಾಷೆ ಎಂದು ಕರೆಯಲಾಗುತ್ತದೆ.

ಶಿಷ್ಟಭಾಷೆ :

ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಪ್ರಾದೇಶಿಕ ಮುಂತಾದವುಗಳ ಮಹತ್ವ ಹೊಂದಿರುವ ಒಂದು ಪ್ರದೇಶದ ಭಾಷೆಯನ್ನು ಸಾಮಾನ್ಯವಾಗಿ ಶಿಷ್ಟಭಾಷೆ ಎಂದು ಕರೆಯುವುದು ರೂಢಿ. ಯಾವ ಪ್ರದೇಶದಲ್ಲಿ ನಾಗರೀಕತೆ ಹೆಚ್ಚಿರುತ್ತದೆಯೋ, ರಾಜಕೀಯ ದೃಷ್ಟಿಯಿಂದ ಯಾವ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವವಿದೆಯೋ, ಅಂತಹ ಮಹತ್ವವುಳ್ಳ ಪ್ರದೇಶದ ಭಾಷೆ ಸಾಮಾನ್ಯವಾಗಿ ಸರ್ವಸಮ್ಮತವಾಗಿ ಶಿಷ್ಟಭಾಷೆ ಎನಿಸಿಕೊಳ್ಳುತ್ತದೆ. ನ್ಯಾಯಾಲಯ, ದೂರದರ್ಶನ, ವೃತ್ತಪತ್ರಿಕೆಗಳು, ಆಡಳಿತ, ಶಿಕ್ಷಣ ಮುಂತಾದವುಗಳಲ್ಲಿ ಸಾಮಾನ್ಯವಾಗಿ ಶಿಷ್ಟಭಾಷೆಯನ್ನು ಬಳಸುವುದು ರೂಢಿ.

■

ಅಧ್ಯಾಯ -೩

ದ್ರಾವಿಡ ಭಾಷೆಗಳ ಸ್ವರೂಪ ಮತ್ತು ವೈಶಿಷ್ಟ್ಯ:

ಭಾರತ ಬಹು ಭಾಷೆಗಳ ಭಾಷೆಗಳ ದೇಶ. ಇದರಲ್ಲಿ ಸುಮಾರು 1800ಕ್ಕೂ ಹೆಚ್ಚು ಭಾಷೆ ಮತ್ತು ಉಪಭಾಷೆಗಳು ಬಳಕೆಯಲ್ಲಿರಬಹುದೆಂದು ಕೆಲವರು ಅಂದಾಜು ಮಾಡಿದ್ದಾರೆ. ಇವುಗಳ ಜೊತೆಗೆ ಬೆಳಕು ಕಾಣದ ಇನ್ನೂ ಬೇರೆ ಬೇರೆ ಭಾಷೆಗಳು ಇರಬಹುದು. ಭಾರತದಲ್ಲಿ ಬೇರೆ ಬೇರೆ ಜನಾಂಗ, ಜಾತಿ, ಸಮಾಜ, ಸಂಸ್ಕೃತಿ, ಧರ್ಮ ಇತ್ಯಾದಿಗಳಿಗೆ ಸಂಬಂಧಿಸಿದ ಸುಮಾರು 100 ಕೋಟಿಗೂ ಹೆಚ್ಚು ಜನರಿದ್ದಾರೆ. ಇವರೆಲ್ಲರೂ ಒಂದೇ ಭಾಷೆ ಆಡುತ್ತಿಲ್ಲ. ಇವರು ತಮ್ಮ ತಮ್ಮ ಪರಿಸ್ಥಿತಿ ಹಾಗೂ ಪರಿಸರಗಳಿಗೆ ಅನುಗುಣವಾಗಿ ತಮ್ಮ ತಮ್ಮ ಮಾತೃ ಭಾಷೆಗಳ ಜೊತೆಗೆ ಅನಿವಾರ್ಯವಾಗಿ ಬೇರೆ ಬೇರೆ ಭಾಷೆಗಳನ್ನು ಆಡುತ್ತಿದ್ದಾರೆ. ಭಾರತದಾದ್ಯಂತ ಬಳಕೆಯಲ್ಲಿರುವ ಈ ಎಲ್ಲಾ ಭಾಷೆ, ಉಪಭಾಷೆಗಳನ್ನು ಅವುಗಳ ಬರಹವನ್ನು ಆಧರಿಸಿ, ಬರಹದ ಭಾಷೆಗಳು ಮತ್ತು ಆಡುಭಾಷೆಗಳು ಎಂದು ಎರಡು ವಿಧಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ಹೀಗೆ ಕಂಡುಬರುವ ಭಾರತದ ಎಲ್ಲಾ ಭಾಷೆ ಮತ್ತು ಉಪಭಾಷೆಗಳನ್ನು ಅವುಗಳ ಆಂತರಿಕ ಸಂಬಂಧವನ್ನು ಆಧರಿಸಿ ಬೇರೆ ಬೇರೆ ಪರಿವಾರ, ಉಪಪರಿವಾರ, ವರ್ಗ, ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ಭಾರತದ ಕೆಲವು ಭಾಷೆಗಳು ತುಂಬಾ ಸಂಪದ್ಭರಿತ ಭಾಷೆಗಳಾಗಿ ಕಾಣಿಸಿಕೊಂಡರೆ, ಮತ್ತೆ ಕೆಲವು ಭಾಷೆಗಳು ತುಂಬಾ ಹಿಂದುಳಿದ ಭಾಷೆಗಳಾಗಿ ಕಾಣಿಸಿಕೊಂಡಿವೆ.

ಭಾರತದಲ್ಲಿ ಇಂಡೋ - ಆರ್ಯನ್ ಭಾಷಾ ಪರಿವಾರವೇ ಬಹು ದೊಡ್ಡ ಭಾಷಾ ಪರಿವಾರ. ಇದರಲ್ಲಿ ಸುಮಾರು 800ಕ್ಕೂ ಹೆಚ್ಚು ಭಾಷೆ ಮತ್ತು ಉಪಭಾಷೆಗಳು ಸೇರಿವೆ. ಈ ಭಾಷೆಗಳು ಭಾರತದ ಮುಕ್ಕಾಲು ಭಾಗ ಪ್ರದೇಶವನ್ನೂ ಆವರಿಸಿಕೊಂಡಿವೆ. 1971ನೆಯ ಜನಗಣತಿಯ ಪ್ರಕಾರ ಸುಮಾರು 35 ಕೋಟಿಗಳೂ ಹೆಚ್ಚು ಜನರು ಈ ಭಾಷೆಗಳನ್ನು ಆಡುತ್ತಾರೆ ಎಂದು ಅಂದಾಜಿಸಲಾಗಿತ್ತಾದರೂ, ಈಗ 40 ಕೋಟಿಗೂ ಹೆಚ್ಚು ಜನರು ಈ ಭಾಷೆಗಳನ್ನು ಆಡುತ್ತಾರೆ ಎನ್ನಲಾಗಿದೆ. ಇವರಲ್ಲಿ ಸುಮಾರು 25 ಕೋಟಿಗೂ ಹೆಚ್ಚು ಜನರು ಹಿಂದಿ ಭಾಷೆಯನ್ನು ಆಡುವವರಿದ್ದಾರೆ.[೧]

ಭಾರತದಲ್ಲಿ ಇಂಡೋ - ಆರ್ಯನ್ ಭಾಷಾ ಪರಿವಾರವನ್ನು ಬಿಟ್ಟರೆ ದ್ರಾವಿಡ ಭಾಷಾ ಪರಿವಾರವೇ ಎರಡನೆಯ ಬಹು ದೊಡ್ಡ ಭಾಷಾ ಪರಿವಾರ. ಇವುಗಳಲ್ಲಿ ಬ್ರಾಹುಈ ಮತ್ತು ಧಾಂಗರ್ ಭಾಷೆಗಳನ್ನು ಬಿಟ್ಟರೆ ಉಳಿದೆಲ್ಲಾ ದ್ರಾವಿಡ ಭಾಷೆಗಳು ಭಾರತದಲ್ಲಿಯೇ ಬಳಕೆಯಲ್ಲಿವೆ. ಸುಮಾರು 25 ಕೋಟಿಗೂ ಹೆಚ್ಚು ಜನರು ಭಾರತದಲ್ಲಿ ದ್ರಾವಿಡ ಭಾಷೆಗಳನ್ನು ಆಡುವವರಿದ್ದಾರೆ. ದ್ರಾವಿಡ ಭಾಷೆಗಳಲ್ಲಿ ತಮಿಳು,

ಕನ್ನಡ, ತೆಲುಗು, ಮಲೆಯಾಳಂ ಭಾಷೆಗಳನ್ನು ಬಿಟ್ಟರೆ ಉಳಿದೆಲ್ಲ ದ್ರಾವಿಡ ಭಾಷೆಗಳು ಆಡು ಭಾಷೆಗಳಾಗಿವೆ. ತುಳು ಇತ್ತೀಚೆಗೆ ಲಿಪಿಗೆ ಒಳಪಡುತ್ತಿದೆ. ಇವುಗಳು ತಮ್ಮದೇ ಆದ ಬೇರೆ ಬೇರೆ ಉಪಭಾಷೆಗಳನ್ನು ಸಂಪಾದಿಸಿಕೊಂಡಿವೆ. ಈ ರೀತಿಯ ಮಹತ್ವವನ್ನು ಹೊಂದಿರುವ ದ್ರಾವಿಡ ಭಾಷೆಯ ಸ್ವರೂಪ ಮತ್ತು ವೈಶಿಷ್ಟ್ಯಗಳನ್ನು ಹಲವು ರೀತಿಯಲ್ಲಿ ನಿರೂಪಿಸಬಹುದು.

ದ್ರಾವಿಡ ಪದದ.ನಿಷ್ಪತ್ತಿ :

ದ್ರಾವಿಡ ನಿಷ್ಪತ್ತಿಯನ್ನು ವೈಜ್ಞಾನಿಕವಾಗಿ ಗಮನಿಸಿದಾಗ 'ದ್ರಾವಿಡ' ಪದ ದ್ರಾವಿಡ ಭಾಷೆಯದಲ್ಲ. ದ್ರಾವಿಡ ಭಾಷೆಯನ್ನು ರಚನಾ ದೃಷ್ಟಿಯಿಂದ ನೋಡಿದಾಗ ದ್ರಾವಿಡ ಭಾಷೆಯ ಪದಗಳು ಆರಂಭದಲ್ಲಿ ದ್ವಿತ್ವಾಕ್ಷರಗಳು ಬರುವುದಿಲ್ಲ. ಅಂದರೆ, ಆರಂಭದ ಘೋಷ ಅಕ್ಷರಗಳಾಗಲೀ, ರೇಫೆ ಸಹಿತ ಸಂಯುಕ್ತಾಕ್ಷರಗಳಾಗಲೀ ಬರುವುದಿಲ್ಲ. ಇವು ದೇಶ್ಯ ಪದಗಳ ರಚನೆಯ ದೃಷ್ಟಿಯಿಂದ ವಿಭಿನ್ನ ಹಾಗೂ ನಿಷಿದ್ಧ. ಸಾಮಾನ್ಯವಾಗಿ ಇಂಡೋ - ಆರ್ಯನ್ ಭಾಷೆಗಳಲ್ಲಿ ಪದದ ಆರಂಭದಲ್ಲಿ ದ್ವಿತ್ವಗಳು ಬರುತ್ತವೆ. ಇದಕ್ಕೆ ಸಂಸ್ಕೃತ ಭಾಷೆ ಉದಾಹರಣೆ.

ಸಂಸ್ಕೃತದಲ್ಲಿ ದ್ರಾವಿಡ, ದ್ರವಿಡ, ದ್ರಮಿಡ – ಈ ಮೂರು ರೂಪಗಳಿವೆ. ದ್ರಾವಿಡ ಪದ ದ್ರಮಿಳ ಪದದ ಸಂಸ್ಕೃತ ರೂಪ. ಪಾಳಿ ಭಾಷೆಯಲ್ಲಿ ರಚಿಸಲಾದ ಮಹಾವಂಶದಲ್ಲಿ ತಮಿಳರನ್ನು ದಮಿಳರೆಂದು ಕರೆಯಲಾಗಿದೆ. 'ದ್ರಾವಿಡ'ಕ್ಕೆ ಸಂಬಂಧಿಸಿದಂತೆ ಇತರ ಆಧಾರಗಳನ್ನು ಗಮನಿಸಿದಾಗ, ಪ್ರಾಕೃತ ಭಾಷೆಯಲ್ಲಿ ದವಿಳ ಹಾಗೂ ದವಿಡ ಪ್ರಯೋಗ ಕಂಡುಬರುತ್ತದೆ. ಬೌದ್ಧರನ್ನು ಕುರಿತು ಬರೆದ ತಾರಾನಾಥರವರ "History of Buddism in India " ಕೃತಿಯಲ್ಲಿ 'ದ್ರಮಿಳ'ರನ್ನು ಹೆಸರಿಸಿದ್ದಾರೆ.[2] ಮಲೆಯಾಳಂನ ಪುರಾಣ ಕೃತಿಗಳಲ್ಲಿ 'ದ್ರಮಿಳ'ರೂಪ ಕಂಡುಬಂದಿದೆ. ಅಂತೆಯೇ ಬಾದಾಮಿಯ ಮಹಾಕೂಟ ಮಂಗಳೇಶನ ಸ್ತಂಭ ಶಾಸನದಲ್ಲೂ 'ದ್ರಮಿಳ' ಪದದ ಉಲ್ಲೇಖವಿದೆ. ಆರ್. ನರಸಿಂಹಾಚಾರ್ಯ ಅವರು ಪಾಶ್ಚಾತ್ಯ ಪ್ರವಾಸಿಗಳ ಪುರಾತನ ಕೃತಿಗಳಲ್ಲಿ 'ದಮಲಿಕ', 'ದಮಲಿಚೆ' ಪ್ರಯೋಗಗಳಿರುವುದೆಂದು ಉಲ್ಲೇಖಿಸಿದ್ದಾರೆ. 'ದ್ರಾವಿಡ' ನಿಷ್ಪತ್ತಿ ಕುರಿತು ಹೇಳುವಾಗ ಸಂಸ್ಕೃತದಲ್ಲಿ 'ದ್ರಮಿಳ', 'ದಮಿಳ' ಗಳಿಂದಾಗಿ ದ್ರಾವಿಡ ಪದ ಸಿದ್ಧಿಸಿದೆ ಎಂಬುದಕ್ಕೆ 'ಮ್' ಧ್ವನಿಮಾ 'ವ್' ಆಗಿ ಪರಿವರ್ತಿಸಿರುವುದಕ್ಕೆ ಪಾಳಿಯಲ್ಲಿ ದೊರೆತ 'ದಮಿಳ' ರೂಪ ಹಾಗೂ ಜೈನರ ಪ್ರಾಕೃತ ಸಾಹಿತ್ಯದಲ್ಲಿ ಉಲ್ಲೇಖಿತವಾದ 'ದಮಿಳ' 'ದವಿಡ' ಪದಗಳನ್ನು ನೀಡಿದ್ದಾರೆ. 'ದ್ರಮಿಡ' ರೂಪ ಮಲೆಯಾಳಿ ಕೃತಿ ಮತ್ತು ಮಂಗಳೇಶನ ಶಾಸನದಲ್ಲಿ 'ದ್ರಮಿಳ' ಆಗಿರುವುದನ್ನು ವಿವರಿಸುತ್ತಾ, ಇದು ಮತ್ತೆ ತಮಿಳಿಗೆ ಹಿಂತಿರುಗುವಾಗ 'ತಿರವಿಡ' ಆಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಸುನೀತ ಕುಮಾರ ಚಟರ್ಜಿಯವರು 'ದ್ರಾವಿಡ'ಕ್ಕೆ ಸಂವಾದಿಯಾಗಿ ಮೆಡಿಟರೇನಿಯನ್ ತೀರದ ಮೂಲ ನಿವಾಸಿಗಳು ತಮ್ಮನ್ನು 'ತೆರ್ಮಿಲೈ' ಎಂದು ಕರೆದುಕೊಂಡಿರುವರು. ಲಿಸಿಯನ್ನರು ತಮ್ಮನ್ನು 'ತ್ರಮಿಲಿ' ಎಂದು ಕರೆದುಕೊಂಡ ಕಾರಣ 'ತೆರ್ಮಿಲೈ' ಮತು 'ತ್ರಮಿಲಿ'ಗಳು 'ತಮಿಳು' ಪದದ ಮೂಲ ರೂಪಗಳಿರಬೇಕೆಂದು ಊಹಿಸಿ, ಆ ಜನರೇ ಪೂರ್ವದ್ರಾವಿಡರಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ತಮಿಳು ಗ್ರೀಕರಲ್ಲಿ

'ದಮಿರ್ಝ್' ಅಥವಾ 'ತಮಿರ್ಝ್' ಗಳಿಗೆ ಒಂದೇ ಮೂಲವಾದ ಪೂರ್ವ ದ್ರಾವಿಡದ ದ್ರಮಿರ್ಝ್ ಇರಬೇಕೆಂದೂ ತಿಳಿಸುತ್ತಾ ನಿಷ್ಪತ್ತಿಯನ್ನು ಹೀಗೆ ನಿರೂಪಿಸಿದ್ದಾರೆ.

ತಮಿರ್ಝ್- ದಮಿರ್ಝ್-ದಮಿಳ-ದ್ರಮಿರ್ಝ್-ದ್ರಮಿಳ - ದ್ರಮಿಡ - ದ್ರವಿಡ - ತ್ರಿಮ್ಮಲಿ ಎಂದು ವಿವರಿಸಿದ್ದಾರೆ. ಇದರಿಂದ ದ್ರವಿಳ - ದ್ರವಿಡ ರೂಪಗಳು ಜನಾಂಗಕ್ಕೆ ಅನ್ವಯಿಸದೆ ಮೂಲ ತಮಿಳರಿಗೆ ಮಾತ್ರ ಅನ್ವಯವಾಗಿದೆ ಎಂಬ ಅಭಿಪ್ರಾಯವಿದೆ.[5]

'ದ್ರಾವಿಡ' ಶಬ್ದದ ಬಗ್ಗೆ ಭಾಷಾ ವಿಜ್ಞಾನಿಗಳಲ್ಲೇ ಭಿನ್ನಾಭಿಪ್ರಾಯಗಳಿವೆ. ಕಾಲ್ಡ್‌ವೆಲ್‌ರವರು ಈ ಸಮಸ್ಯೆಗಳನ್ನು ಪರಿಗಣಿಸಿ 'ತಮಿಟಿ' ಮತ್ತು ' ದ್ರಾವಿಡ' ರೂಪಗಳು ಸಮನಾರ್ಥಕಗಳು, 'ತಮಿಟಿ'ನಿಂದ ದ್ರಾವಿಡ ರೂಪ ನಿಷ್ಪತ್ತಿಯಾಯಿತು ಎಂಬುದಕ್ಕಿಂತಲೂ ದ್ರಾವಿಡದಿಂದ 'ತಮಿಟಿ' ರೂಪ ನಿಷ್ಪತ್ತಿ ಮಾಡುವುದೇ ಸೂಕ್ತ ಎಂದು ಹೇಳುತ್ತಾ, ಚೋಳ, ಕೇರಳ, ಆಂಧ್ರ ಮೊದಲಾದ ಸಂಸ್ಕೃತ ದೇಶವಾಚಕಗಳಂತೆಯೇ ಆರ್ಯರು ತಮಿಳರನ್ನು, 'ದ್ರವಿಡ' ಇಲ್ಲವೇ 'ದ್ರಾವಿಡ' ಎಂದು ಕರೆದಿರಬಹುದೆಂಬ ಅಭಿಪ್ರಾಯ ವ್ಯಕ್ತವಾಗಿದೆ.

ಒಟ್ಟನಲ್ಲಿ ಈ ಮೇಲಿನ ಭಾಷಿಕ ಕಾರಣಗಳಿಂದ 'ದ್ರಾವಿಡ' ಪದ ನಿಷ್ಪತ್ತಿಯನ್ನು ಹೀಗೆ ವಿವರಿಸಬಹುದು.

- ★ 'ದ್ರಾವಿಡ' ಪದ ವಿಶಾಲಾರ್ಥದಲ್ಲಿ ಭಾಷಾ ವರ್ಗಕ್ಕೆ ಹಾಗೂ ಜನಾಂಗಕ್ಕೆ ಅನ್ವಯವಾಗಿದ್ದು, ಸಂಕುಚಿತಾರ್ಥದಲ್ಲಿ ತಮಿಳು ಭಾಷೆಗೆ ಅನ್ವಯಿಸುತ್ತವೆ.
- ★ ದ್ರಾವಿಡ ಪದ ದ್ರಮಿಳ, ದಮಿಳ, ದ್ರಮಿಡ, ದ್ರವಿಡ ಎಂಬಿತ್ಯಾದಿ ರೂಪಗಳಲ್ಲಿ ನಿಷ್ಪನ್ನಗೊಂಡಿದೆ.
- ★ 'ದ್ರಾವಿಡ' ಪದ ಮೂಲತಃ ದ್ರಾವಿಡದ್ದಲ್ಲ ; ಅದು ಸಂಸ್ಕೃತ ರೂಪ.
- ★ ದ್ರವಿಡ, ದ್ರಾವಿಡ ಪದಗಳು ದ್ರಮಿಡ ಪದದ ಇತ್ತೀಚೆಗೆ ಬದಲಾದ ವಿಸ್ತೃತ ರೂಪಗಳು.
- ★ ತಮಿಳಿನಲ್ಲಿ 'ದ್ರಾವಿಡ' ಪದವನ್ನು 'ತಿರಮಿಡ' 'ತಿರವಿಡ' ಎಂದು ಬಳಸುತ್ತಾರೆ.

ದ್ರಾವಿಡ ಭಾಷೆಗಳ ವರ್ಗೀಕರಣ :

ದ್ರಾವಿಡ ಭಾಷೆಗಳನ್ನು ಭೌಗೋಳಿಕ ದೃಷ್ಟಿಗಿಂತ ಹೆಚ್ಚಾಗಿ ಭಾಷಾಸ್ವಾಮ್ಯದ ದೃಷ್ಟಿಯಿಂದ ಮೂರು ಪಂಗಡಗಳಾಗಿ ವಿಂಗಡಿಸಬಹುದು. ಅವುಗಳೆಂದರೆ

1. ದಕ್ಷಿಣ ದ್ರಾವಿಡ
2. ಮಧ್ಯ ದ್ರಾವಿಡ
3. ಉತ್ತರ ದ್ರಾವಿಡ

1. ದಕ್ಷಿಣ ದ್ರಾವಿಡ :

ದಕ್ಷಿಣ ದ್ರಾವಿಡದಲ್ಲಿ ಪ್ರಧಾನವಾಗಿ ಬರುವ ಭಾಷೆಗಳು ತಮಿಳು, ಕನ್ನಡ, ಮಲೆಯಾಳಂ, ಕೋತ, ತೊದ, ಬಡಗ, ಕೊಡವ, ಕುಱ ಇತ್ಯಾದಿಗಳು. ಈ ಭಾಷೆಗಳನ್ನಾಡುವ ಪ್ರದೇಶಗಳು ಕರ್ನಾಟಕ, ತಮಿಳುನಾಡು ರಾಜ್ಯಗಳನ್ನು ಒಳಗೊಳ್ಳುತ್ತವೆ. ನೀಲಗಿರಿಯ ಆದಿವಾಸಿಗಳಲ್ಲಿ ಕೋತಾ ಮತ್ತು ತೊದ ಭಾಷೆಗಳು ಬಳಕೆಯಲ್ಲಿವೆ. ಕುರುಬ ಭಾಷೆಯು ಕೊಡಗಿನ ಕಾಡು ಪ್ರದೇಶಗಳಲ್ಲಿ ಬಳಕೆಯಲ್ಲಿದೆ. ಕೊಡವ ಮತ್ತು ಬಡಗಗಳು ಕನ್ನಡದ ಪ್ರಮುಖ ಉಪಭಾಷೆಗಳಾಗಿವೆ. ಕರ್ನಾಟಕದ ಕನ್ನಡ, ತಮಿಳುನಾಡಿನ ತಮಿಳು, ಪ್ರಾಚೀನ ದ್ರಾವಿಡ-ಭಾಷೆಗಳಾಗಿವೆ. ಒಂದು ಹಂತದವರೆಗೆ ಕನ್ನಡ ಮತ್ತು ತಮಿಳುಗಳು ಒಂದಾಗಿದ್ದು (ಕಂದಮಿಳು) ನಂತರ ಭಿನ್ನ ಭಾಷೆಗಳಾಗಿ ಬೆಳವಣಿಗೆ ಹೊಂದಿದವು. ತಮಿಳು ಮತ್ತು ಕನ್ನಡಕ್ಕೆ ಲಿಪಿಯಲ್ಲಿ ಸಾಮ್ಯವಿಲ್ಲದಿದ್ದರೂ, ಕೆಲವು ಪದಗಳು ಸಮಾನ ಅರ್ಥದಲ್ಲಿ ಬಳಕೆಯಾಗುತ್ತವೆ. ಕನ್ನಡದ ಪ್ರಾದೇಶಿಕ ವಿಶಾಲತೆಗಿಂತ ತಮಿಳಿನ ವ್ಯಾಪ್ತಿ ಹೆಚ್ಚಿನದು. ಸಿಂಗಾಪುರ, ಮಲೇಷಿಯಾ, ಶ್ರೀಲಂಕಾ, ಇಂಡೋನೇಷಿಯ ಇತ್ಯಾದಿ ರಾಷ್ಟ್ರಗಳಲ್ಲಿ ಈ ದ್ರಾವಿಡ ಭಾಷೆ ಬಳಕೆಯಲ್ಲಿದೆ.

2. ಮಧ್ಯ ದ್ರಾವಿಡ :-

ಮಧ್ಯದ್ರಾವಿಡದಲ್ಲಿ ಬರುವ ಮುಖ್ಯ ಭಾಷೆಗಳೆಂದರೆ, ತೆಲುಗು, ತುಳು,ಗೋಂಡಿ, ಕಲರಿ, ನಾಯ್ಕಿ, ಕೊಲಾಮಿ, ಕೊಂಡ ಮತ್ತು ಕುವಿ ಇತ್ಯಾದಿ ಭಾಷೆಗಳು. ಆಂಧ್ರಪ್ರದೇಶ, ಕರ್ನಾಟಕದ ದಕ್ಷಿಣ ಕನ್ನಡ, ಮಧ್ಯ ಪ್ರದೇಶ, ಬಿಹಾರ, ಒರಿಸ್ಸಾ ಇನ್ನೂ ಮುಂತಾದ ರಾಜ್ಯಗಳಲ್ಲಿ ಈ ಭಾಷೆಗಳು ಚಾಲ್ತಿಯಲ್ಲಿವೆ. ತೆಲುಗು ಮತ್ತು ತುಳು ಹೆಚ್ಚು ಜನರಾಡುವ ನಾಗರೀಕ ಭಾಷೆಗಳಾಗಿದ್ದರೆ, ಇನ್ನುಳಿದ ಭಾಷೆಗಳೆಲ್ಲವೂ ಬೇರೆ ಬೇರೆ ರಾಜ್ಯಗಳಲ್ಲಿನ ಆದಿವಾಸಿಗಳು ಮಾತನಾಡುವ ಭಾಷೆಗಳಾಗಿವೆ.

3. ಉತ್ತರ ದ್ರಾವಿಡ :-

ಪಶ್ಚಿಮ ಕರಾವಳಿಯಲ್ಲಿ ಮಾತನಾಡುವ ಕುರುಖ್, ಕೊರಗ ಈಗಿನ ಪಾಕಿಸ್ತಾನದಲ್ಲಿ ಮಾತನಾಡುವ ಬ್ರಾಹೂಈ, ಬಿಹಾರ ಮತ್ತು ಪಶ್ಚಿಮ ಬಂಗಾಳದ ಕೆಲವು ಪ್ರದೇಶಗಳಲ್ಲಿ ಮಾತನಾಡುವ ಮಾಲ್ತೋ ಈ ಪಂಗಡದಲ್ಲಿ ಬರುವ ಮುಖ್ಯ ಭಾಷೆಗಳಾಗಿವೆ.

ಈ ಭಾಷೆಗಳು ಇಂದು ದ್ರಾವಿಡ ಮೂಲ ರೂಪವನ್ನು ಕಳೆದುಕೊಳ್ಳುತ್ತಾ ಬದಲಾವಣೆಯ ಕ್ರಿಯೆಗೆ ಒಳಪಟ್ಟಿದೆ. ಪ್ರಾಚೀನ ಕಾಲದಲ್ಲಿ ದ್ರಾವಿಡರು ಭಾರತದಲ್ಲೆಲ್ಲಾ ವ್ಯಾಪಿಸಿದ್ದ ಸಂದರ್ಭದಲ್ಲಿ ಈ ಭಾಷೆಯು ಉಗಮಗೊಂಡಿತು ಮತ್ತು ಹಾಗೆಯೇ ಉಳಿದಿದೆ. ಇಂದು ದ್ರಾವಿಡರು ಈ ಪ್ರದೇಶಗಳಲ್ಲಿಲ್ಲದಿದ್ದರೂ, ಅಲ್ಲಿನ ಜನಗಳ ಭಾಷೆಗಳಾಗಿ ಬಳಕೆಯಲ್ಲಿವೆ.

ದ್ರಾವಿಡ ಭಾಷೆಯ ವೈಶಿಷ್ಟ್ಯತೆಗಳು

ಭಾಷಾ ವಿಜ್ಞಾನ ಪೂರ್ಣವಾಗಿ ಬೆಳೆಯದಿದ್ದ ಕಾಲದಲ್ಲಿ ದ್ರಾವಿಡ ಭಾಷೆಗಳು ಆರ್ಯನ್ ಭಾಷೆಯಿಂದ ಹುಟ್ಟಿವೆ ಎಂಬ ತಪ್ಪು ಕಲ್ಪನೆ ಜನರಲ್ಲಿತ್ತು. ಭಾಷಾ ವಿಜ್ಞಾನದ ಕ್ಷೇತ್ರ ವಿಸ್ತಾರವಾಗಿ ಬೆಳೆಯುತ್ತಾ, ಹೊಸ ಹೊಸ ಸಂಶೋಧನೆಗಳು ನಡೆದಂತೆ ಕೆಲವು ಮುಖ್ಯ ವಿಚಾರಗಳು ಬೆಳಕಿಗೆ ಬಂದಿವೆ. ಅದೆಂದರೆ, ದ್ರಾವಿಡ ಭಾಷೆಗಳು ಆರ್ಯನ್ ಭಾಷೆಗಳಿಗಿಂತ ಸ್ವತಂತ್ರ ಎಂಬುದು.

ಭಾಷೆ ಭಾಷೆಗಳ ನಡುವೆ ಕೊಡು ಕೊಳ್ಳುವಿಕೆ ಸಾಮಾನ್ಯವಾಗಿ ನಡೆಯುವ ಪ್ರಕ್ರಿಯೆ. ದ್ರಾವಿಡ ಭಾಷೆಗಳು ಆರ್ಯನ್ ಭಾಷೆಗಳಿಗೆ ಕೊಟ್ಟದ್ದಕ್ಕಿಂತ ಹೆಚ್ಚಾಗಿ ಸ್ವೀಕರಿಸಿದವು. ಈ ಕಾರಣಗಳಿಂದಲೇ ಆರ್ಯನ್ ಭಾಷೆಗಳ ಸಾಲಿಗೆ ದ್ರಾವಿಡದ ಭಾಷೆಗಳನ್ನು ಸೇರಿಸುವ ಚಿಂತನೆ ಪ್ರಾರಂಭವಾಯಿತು. ಆದರೆ ಹಲವಾರು ಅಂಶಗಳ ಮುಖಾಂತರ ದ್ರಾವಿಡ ಭಾಷೆಗಳು ಸಂಪೂರ್ಣವಾಗಿ ಆರ್ಯನ್ ಭಾಷೆಗಳಿಗಿಂತ ಭಿನ್ನ ಎಂದು ನಿರೂಪಿಸಿದರು. ಆ ಅಂಶಗಳನ್ನು ವೈಶಿಷ್ಟ್ಯತೆ ಎಂದು ಬಗೆದು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

1. ಪ್ರತಿಯೊಂದು ಭಾಷೆಯೂ ಅಂಗಗಳನ್ನು ಸೂಚಿಸುವ ಶಬ್ದಗಳನ್ನು, ಸಂಖ್ಯಾಸೂಚಕ, ಸರ್ವನಾಮ, ಸಂಬಂಧ ಸೂಚಕಗಳನ್ನು, ಕ್ರಿಯಾ ವಾಚಕಗಳನ್ನು ಸ್ವತಂತ್ರವಾಗಿ ಹೊಂದಿರುತ್ತವೆ. ಅನ್ಯಭಾಷೆಗಳಿಂದ ಅದು ಸ್ವೀಕರಿಸುವುದಿಲ್ಲ. ಆರ್ಯಭಾಷೆಗಳಾದ ಇಂಗ್ಲಿಷ್, ಸಂಸ್ಕೃತಗಳಿಂದ ದ್ರಾವಿಡ ಭಾಷೆಗಳು ಭಿನ್ನವಾಗಿದೆ ಎಂಬುದನ್ನು ಕೆಳಗಿನ ಪಟ್ಟಿಯಿಂದ ಸ್ಪಷ್ಟವಾಗಿ ತಿಳಿಯಬಹುದು.

ಇಂಗ್ಲಿಷ್	ಸಂಸ್ಕೃತ	ಕನ್ನಡ	ತಮಿಳು	ತೆಲುಗು	ಮಲೆಯಾಳಂ	ತುಳು
One	ಏಕ	ಒಂದು	ಒನ್ನು	ಒಕಟಿ	ಒನ್ನು	ಒನಿ
Three	ತ್ರಯಂ	ಮೂರು	ಮೂನ್ರು	ಮೂಡು	ಮೂನ್ನು	ಮೂಜಿ
Mother	ಮಾತೃ	ತಾಯಿ	ತಾಯ್	ತಲ್ಲಿ	ಅಮ್ಮ	ಅಬ್ಬೆ
Eye	ಅಕ್ಷಿ	ಕಣ್ಣು	ಕಣ್	ಕನ್ನು	ಕಣ್ಣು	ಕಣ್
Ear	ಕರ್ಣ	ಕಿವಿ	ಶೆವಿ	ಚೆವಿ	ಚೆವಿ	ಕೆವಿ

2. ಕೇಶಿರಾಜ ತನ್ನ 'ಶಬ್ದಮಣಿದರ್ಪಣ'ದಲ್ಲಿ ಹೇಳಿರುವ ಕನ್ನಡದ ಅಸಾಧಾರಣ ಲಕ್ಷಣಗಳಾದ ಗಮಕ ಸಮಾಸ, ಱಳ, ಕುಳ-ಕ್ಷಳ, ಶೃತಿ ಸಹ್ಯಸಂಧಿ, ಸತಿಸಪ್ತಮಿ, ಸಮಸಂಸ್ಕೃತ, ವಮಹಪ- ಭೇದ, ವಿರಹಿತಾವ್ಯಯ ಸಂಸ್ಕೃತ ಲಿಂಗ, ಶಿಥಿಲ ದ್ವಿತ್ವ, ಯತಿ ವಿಲಂಘನ ಇವುಗಳೆಲ್ಲಾ ದ್ರಾವಿಡ ಭಾಷೆಗಳಲ್ಲಿ ಇರುವಂತಹವು. ಆದರೆ ಆರ್ಯನ್ ಭಾಷೆಗಳಲ್ಲಿ ಇವುಗಳು ಇಲ್ಲ.

3. ದ್ರಾವಿಡ ಭಾಷೆಗಳಲ್ಲಿ ಸ್ವರಾಂತ ಶಬ್ದಗಳಿವೆ. ಆದರೆ ಆರ್ಯನ್ ಭಾಷೆಗಳಲ್ಲಿ ಸ್ವರಾಂತ ಶಬ್ದಗಳಿಲ್ಲ, ವ್ಯಂಜನಾಂತ ಶಬ್ದಗಳೇ ಅಧಿಕ.

4. ದ್ರಾವಿಡ ಭಾಷೆಗಳಲ್ಲಿ ಲಿಂಗ ವ್ಯವಸ್ಥೆ ಸುವ್ಯವಸ್ಥಿತ ಮತ್ತು ಕ್ರಮಬದ್ಧ. ಆದರೆ, ಆರ್ಯನ್ ಭಾಷೆಗಳಲ್ಲಿ ಅದು ಶಬ್ದದ ಸ್ವರೂಪವನ್ನು ಆಧರಿಸಿರುತ್ತದೆ.

5. ದ್ರಾವಿಡ ಭಾಷೆಗಳಲ್ಲಿ ವಚನ ವ್ಯವಸ್ಥೆ ಸರಳ ಮತ್ತು ಸುಲಭ. ಏಕವಚನ, ಬಹುವಚನ ಮಾತ್ರ ಅಸ್ತಿತ್ವದಲ್ಲಿವೆ. ಆದರೆ ಸಂಸ್ಕೃತದಲ್ಲಿ ದ್ವಿವಚನ ಇದೆ.

6. ಹಾಗೆಯೇ ದ್ರಾವಿಡ ಭಾಷೆಗಳಲ್ಲಿ ಸಂಬಂಧ ಸೂಚಕ ಶಬ್ದಗಳು ಸ್ಪಷ್ಟ ಮತ್ತು ನಿಖರವಾಗಿರುತ್ತವೆ. ಆದರೆ ಸಂಸ್ಕೃತ ಭಾಷೆಯಲ್ಲಿ ಹಾಗೂ ಇಂಗ್ಲಿಷ್‌ನಲ್ಲಿ ಅಸ್ಪಷ್ಟ.
   ಉದಾ : ಸಂಸ್ಕೃತದಲ್ಲಿ ಭ್ರಾತೃ, ಇಂಗ್ಲಿಷಿನಲ್ಲಿ ಬ್ರದರ್.

7. ದ್ರಾವಿಡ ಭಾಷೆಗಳಲ್ಲಿ ಕರ್ಮಣಿ ಪ್ರಯೋಗವಿಲ್ಲ. ಆರ್ಯಭಾಷೆಗಳಲ್ಲಿ ಇದುವೇ ಪ್ರಧಾನವಾಗಿರುತ್ತದೆ.
   ಉದಾ ; ಹಣ್ಣು ನನ್ನಿಂದ ತಿನ್ನಲ್ಪಟ್ಟಿತು ಎಂಬ ಪ್ರಯೋಗ ಕನ್ನಡದಲಿಲ್ಲ. ಹಣ್ಣು ತಿಂದೆನು ಎಂಬ ರೂಪ ಕನ್ನಡದಲ್ಲಿದೆ.

8. ಕೆಲವು ವಿಶೇಷಣಗಳನ್ನು ಹೇಳುವ ಸಂದರ್ಭದಲ್ಲಿ ತರತಮ ಭಾವಗಳು ಆರ್ಯನ್ ಭಾಷೆಯಲ್ಲಿ ಬರುತ್ತವೆ ಆದರೆ ದ್ರಾವಿಡ ಭಾಷೆಗಳಲ್ಲಿ ಇಲ್ಲ.

■

ಅಡಿ ಟಿಪ್ಪಣಿಗಳು

1. ಡಾ|| ಕೆ. ಕೆಂಪೇಗೌಡ - ಕನ್ನಡ ಭಾಷಾ ಚರಿತ್ರೆ - ಪು - 22
2. ರಾ.ಯ ಧಾರವಾಡಕರ - ಕನ್ನಡ ಭಾಷಾ ಶಾಸ್ತ್ರ -ಪುಟ -99

ಅಧ್ಯಾಯ - ೪

ಪಂಚದ್ರಾವಿಡ ಭಾಷೆಗಳು

ದ್ರಾವಿಡ ಭಾಷೆಗಳನ್ನು ಪ್ರಮುಖವಾಗಿ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ,

1) ಉತ್ತರ ದ್ರಾವಿಡ ಭಾಷೆಗಳು

2) ಮಧ್ಯ ದ್ರಾವಿಡ ಭಾಷೆಗಳು

3) ದಕ್ಷಿಣ ದ್ರಾವಿಡ ಭಾಷೆಗಳು

ಈ ಮೂರು ವರ್ಗಗಳಲ್ಲಿ ಪ್ರಮುಖವಾದುದು ದಕ್ಷಿಣ ದ್ರಾವಿಡ ಭಾಷೆಗಳು. ಇದರಲ್ಲಿ ಪ್ರಮುಖವಾಗಿ ತಮಿಳು, ಕನ್ನಡ, ಮಲೆಯಾಳಂ, ತುಳು ಭಾಷೆಗಳು ಕಂಡು ಬರುತ್ತದೆ. ತೆಲುಗು ಭಾಷಾಪ್ರದೇಶ ಭೌಗೋಳಿಕವಾಗಿ ದಕ್ಷಿಣ ಭಾರತಕ್ಕೆ ಸೇರಿದ್ದರೂ ತೆಲುಗು ಭಾಷೆಯನ್ನು ಮಧ್ಯ ದ್ರಾವಿಡದಲ್ಲಿ ತರಲಾಗಿದೆ.ಕಾರಣ ತೆಲುಗು ಭಾಷಾ ರಚನೆಯಲ್ಲಿ ದಕ್ಷಿಣ ದ್ರಾವಿಡಗಳಿಗಿಂತ ಹೆಚ್ಚಾಗಿ ಮಧ್ಯ ದ್ರಾವಿಡ ಭಾಷೆಗಳಿಗೆ ಬಹು ಹತ್ತಿರವಾಗಿ ಕಂಡು ಬಂದಿದೆ. ಹಾಗಾಗಿ ತಮಿಳು, ಕನ್ನಡ, ಮಲೆಯಾಳಂಗಳಿಂದ ಹಲವು ಭಿನ್ನತೆ ತೋರುವ ಕಾರಣ ಮಧ್ಯ ದ್ರಾವಿಡ ಭಾಷೆಗೆ ಸೇರಿಸಲಾಗಿದೆ.ಒಟ್ಟಿನಲ್ಲಿ ತಮಿಳು, ಕನ್ನಡ, ಮಲೆಯಾಳಂ, ತೆಲುಗು, ತುಳು ಈ ಐದು ಭಾಷೆಗಳನ್ನು 'ಪಂಚ ದ್ರಾವಿಡ ಭಾಷೆಗಳು' ಎನ್ನಲಾಗುತ್ತದೆ.

ವಿದೇಶಿ ವಿದ್ವಾಂಸರಿಂದ 18ನೇ ಶತಮಾನದಲ್ಲಿ ಭಾರತೀಯ ವಿವಿಧ ಭಾಷಾ ವರ್ಗಗಳ ತೌಲನಿಕ ಅಧ್ಯಯನ ಆರಂಭವಾಗುವ ಮೊದಲೇ ಪೂರ್ವಜರು ಭಾರತೀಯ ಭಾಷೆಗಳನ್ನು '' ಪಂಚದ್ರಾವಿಡ'' ಹಾಗೂ ''ಪಂಚಗೌಡ'' ಎಂದು ವಿಭಜಿಸಿದ್ದರು. ಆದರೆ ಈ ವಿಭಜನೆ ವೈಜ್ಞಾನಿಕ ರೀತಿಯಲ್ಲಿ ಆಗಿರಲಿಲ್ಲ.ಅವರ ದೃಷ್ಟಿಯಲ್ಲಿ ಈ ಎರಡು ಗುಂಪಿನ ಭಾಷೆಗಳು ಇಂತಿದ್ದವು.

ಪಂಚದ್ರಾವಿಡ: ತಮಿಳು,ತೆಲುಗು, ಕನ್ನಡ,ಗುಜರಾತಿ ಮತ್ತು ಮರಾಠಿ.

ಪಂಚಗೌಡ: ಸಾರಸತ್ವ, ಕಾನ್ಯಕುಬ್ಜ,ಗೌಡ, ಮೈಥಿಲಿ ಮತ್ತು ಉತ್ಕಲ.

ಈ ವರ್ಗಗಳ ಮುಖ್ಯ ಆಶಯ ಭಾರತದ ಉತ್ತರದ ಹಾಗೂ ದಕ್ಷಿಣ ಭಾಗಗಳಲ್ಲಿ ಪ್ರಚಲಿತದಲ್ಲಿರುವ ಭಾಷೆಗಳನ್ನು ಪ್ರತ್ಯೇಕವಾಗಿ ವಿಭಾಗಿಸುವುದು. ಕೆಲವರು ಇದು ಆಯಾ ಪ್ರದೇಶಗಳ ಜನರ ಆಚಾರ-ಸಂಸ್ಕೃತಿಗಳ ಪ್ರಭೇದಗಳನ್ನು ಬಿಂಬಿಸಲು ವರ್ಗೀಕರಣ ಮಾಡಿರಬಹುದೆಂದು ಅಭಿಪ್ರಾಯಪಟ್ಟರೆ, ನರಸಿಂಹಾಚಾರ್ಯ ಅವರು 'ಪಂಚದ್ರಾವಿಡ'ದಲ್ಲಿ ಗುಜರಾತಿ ಮತ್ತು ಮರಾಠಿ ಭಾಷೆಗಳು ಸೇರಿರುವುದಕ್ಕೆ

ಅವುಗಳಲ್ಲಿ ದ್ರಾವಿಡ ಭಾಷೆಗಳ ಕೆಲ ಸಾದೃಶ್ಯಗಳು ಗೋಚರಿಸುವುದೇ ಮುಖ್ಯ ಕಾರಣ ಎಂದಿದ್ದಾರೆ. ಭಾಷಿಕ ಹಿನ್ನೆಲೆಯಲ್ಲಿ ಈ ಎರಡು ಭಾಷೆಗಳು ಇಂಡೋ-ಆರ್ಯನ್ ಭಾಷಾ ವರ್ಗಕ್ಕೆ ಸೇರಿದವು. ವಿದೇಶಿಯರು ದ್ರಾವಿಡ ಭಾಷೆಗಳ ಅಧ್ಯಯನ ಕೈಗೊಳ್ಳುವ ಮೊದಲೇ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ ಅವರು ತಮ್ಮ ಹೊಸಗನ್ನಡ ವ್ಯಾಕರಣ ಕೃತಿ ರಚಿಸಿ ಪ್ರಕಟಿಸಿದರು. ಇದರಲ್ಲಿ ದ್ರಾವಿಡ, ಕೇರಳ, ತಾಳವ, ಕರ್ಣಾಟಕಾಂಧ್ರ, ಭಾಷೆಗಳನ್ನು ಒಟ್ಟುಗೂಡಿಸಿ 'ಪಂಚದ್ರಾವಿಡ' ಎಂದು ನಿರ್ದೇಶಿಸಿದ್ದಾರೆ. ಇದು ಕಾಲದ ದೃಷ್ಟಿಯಿಂದ ಮಹತ್ವ ಪೂರ್ಣವಾದ ಸಂಗತಿಯಾಗಿದೆ. ಹಾಗೆಯೇ ದಕ್ಷಿಣ ಭಾರತದ ಭಾಷೆಗಳು ಸಂಸ್ಕೃತ ಜನ್ಯವಲ್ಲ, ಅವು ದ್ರಾವಿಡ ಮೂಲದವು ಎಂಬ ಅಭಿಪ್ರಾಯವನ್ನು ಸಹ ವ್ಯಕ್ತಪಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಪಂಚ ದ್ರಾವಿಡ ಭಾಷೆಗಳಲ್ಲಿ ಪ್ರಮುಖವಾದ, ಪ್ರಾಚೀನವಾದ ಭಾಷೆಯೆಂದರೆ ತಮಿಳು. ಅದು ಐತಿಹಾಸಿಕ ಅಂಶಗಳನ್ನೊಳಗೊಂಡು ತನ್ನ ಪಾರಂಪರಿಕ ವೈಶಿಷ್ಟ್ಯ, ಗುಣಲಕ್ಷಣಗಳನ್ನು ಬಿಡದೆ ಕಾಪಾಡಿಕೊಂಡು ಬಂದಿರುವುದರಿಂದ ತಮಿಳಿಗೆ ಈ ಕೀರ್ತಿ ಸಲ್ಲುತ್ತದೆ. ವಾಸ್ತವವಾಗಿ ಸಂಸ್ಕೃತ ಪ್ರಾಕೃತದಲ್ಲಿನ ಸಾಹಿತ್ಯವನ್ನು ಬಿಟ್ಟರೆ ತಮಿಳಿನ ಸಾಹಿತ್ಯ ಭಾರತೀಯ ಸಾಹಿತ್ಯದಲ್ಲಿ ಪ್ರಾಚೀನ ಮತ್ತು ಭವ್ಯ ಸಂಪತ್ತುಳ್ಳದ್ದಾಗಿದೆ. ತಮಿಳುನಾಡಿನಲ್ಲಿ ಈ ಸಾಹಿತ್ಯದ ಬೇರು ಇದ್ದರೂ ತಮಿಳರು ಜಗತ್ತಿನ ಅನೇಕ ದೇಶಗಳಲ್ಲಿ ನೆಲೆಸಿ ತಮ್ಮ ಭಾಷೆ ಹಾಗೂ ಸಂಸ್ಕೃತಿಗಳನ್ನು ಇತರೆಡೆಯಲ್ಲಿ ಹರಡಿದ್ದಾರೆ.

ತಮಿಳನ್ನು ಬಿಟ್ಟರೆ ಪ್ರಾಚೀನತೆ, ಸಾಹಿತ್ಯ, ಸಮೃದ್ಧಿ ಹಾಗೂ ವೈವಿಧ್ಯತೆಯ ದೃಷ್ಟಿಯಿಂದ ಕನ್ನಡ ಮುಖ್ಯ ಸ್ಥಾನಗಳಿಸಿಕೊಳ್ಳುತ್ತದೆ. ಎರಡು ಸಾವಿರ ವರ್ಷಗಳಷ್ಟು ದೀರ್ಘ ಇತಿಹಾಸವಿರುವ ಕನ್ನಡ ಭಾಷೆ ಚಾರಿತ್ರಿಕವಾಗಿಯೂ, ಸಾಹಿತ್ಯಿಕವಾಗಿಯೂ ಅತ್ಯಂತ ಸಮೃದ್ಧ ನಾಡಾದ ಕರ್ನಾಟಕದ ಅಧಿಕೃತ ಭಾಷೆ. ಆದರೆ ಇಂತಹ ಭಾಷೆ ಹಾಗೂ ಸಾಹಿತ್ಯಗಳ ಪರಿಚಯ ನಮ್ಮ ನಾಡಿನ ಹೊರಗಡೆ ಇನ್ನೂ ಸರಿಯಾಗಿ ಆಗಿಯೇ ಇಲ್ಲವೆಂಬುದು ಶೋಚನೀಯ.

ತೆಲುಗು ಭಾಷೆಯು ದ್ರಾವಿಡ ಭಾಷೆಗಳಲೆಲ್ಲಾ ತೀರ ಮಧುರವಾದ ಭಾಷೆಯೆಂಬ ಅಭಿಪ್ರಾಯವಿದೆ. ಸಂಸ್ಕೃತದವರು ಇವರನ್ನು ಆಂಧ್ರದವರೆಂದು ಕರೆಯುತ್ತಾರೆ. ಆಂಧ್ರ ಪ್ರದೇಶದ ಅಧಿಕೃತ ಮತ್ತು ಆಡಳಿತ ಭಾಷೆ ನಾಲ್ಕು ಕೋಟಿಗೂ ಮಿಗಿಲು ತೆಲುಗು ಭಾಷಿಕರನ್ನು ಹೊಂದಿದೆ.

ದ್ರಾವಿಡ ವರ್ಗದಲ್ಲಿ ಅತಿ ಯಥೇಚ್ಛ ಸಂಸ್ಕೃತ ಪದಗಳನ್ನು ಹೊಂದಿರುವ ಭಾಷೆ ಮಲೆಯಾಳಂ. ಇದು ಬಹುಮಟ್ಟಿಗೆ ತಮಿಳು ಭಾಷೆಯನ್ನೇ ಹೋಲುವುದರಿಂದ ತಮಿಳಿನ ಪ್ರಭೇದ ಎಂದೇ ಭಾವಿಸಲಾಗಿತ್ತು. ಆದರೆ ತನ್ನದೇ ಆದ ವೈಶಿಷ್ಟ್ಯತೆಗಳಿಂದಾಗಿ ಸ್ವತಂತ್ರ ಅಸ್ತಿತ್ವವನ್ನು ಪಡೆದಿದೆ. ಮಲೆಯಾಳಂ ಕೇರಳದ ರಾಜ್ಯದ ಅಧಿಕೃತ ಮತ್ತು ಆಡಳಿತ ಭಾಷೆಯಾಗಿದೆ. ಅತಿ ಹೆಚ್ಚಿನ ವಿದ್ಯಾವಂತರಿರುವ ಭಾಷೆ ಮಲೆಯಾಳಂ.

ತುಳು ಲಿಪಿ ರಹಿತ ಗುಂಪಿಗೆ ಸೇರಿರುವುದಾದರೂ ಇತ್ತೀಚಿನ ದಿನಗಳಲ್ಲಿ ಲಿಪಿ ಹೊಂದುತ್ತಿರುವುದರಿಂದ ಲಿಪಿ ಸಹಿತ ಭಾಷೆಯಾಗಿ ಬಡ್ತಿ ನೀಡಲಾಗಿದೆ. ಈ ಭಾಷೆಯನ್ನು ಆಡುವವರು ತುಳುವರು. ಕರ್ನಾಟಕದ

ಉಡುಪಿ,ಕಾರ್ಕಳ, ಮಂಗಳೂರು,ಪುತ್ತೂರು ಹಾಗೂ ಕೇರಳದ ಕಾಸರಗೋಡು ಪ್ರಾಂತ್ಯದಲ್ಲಿ ತುಳು ಭಾಷಿಕರಿದ್ದಾರೆ. ಕನ್ನಡ ಅಥವಾ ಮಲೆಯಾಳಂ ಲಿಪಿ ಶೈಲಿಯೇ ತುಳುವಿಗೆ ಆಧಾರ.

ಒಟ್ಟಾರೆಯಾಗಿ ಮೇಲ್ಕಂಡ ಐದು ಭಾಷೆಗಳನ್ನು ಸೇರಿಸಿ 'ಪಂಚದ್ರಾವಿಡ ಭಾಷೆಗಳು' ಎಂದು ಕರೆಯಲಾಗಿದೆ. ಈ ಭಾಷೆಗಳು ತಮ್ಮದೇ ಆದ ವಿಶಿಷ್ಟ ಲಕ್ಷಣಗಳನ್ನು, ಪರಸ್ಪರ ಸಾಮ್ಯ-ವ್ಯತ್ಯಾಸಗಳನ್ನು ಹೊಂದಿವೆ. ಅವುಗಳನ್ನು ಒಂದೊಂದಾಗಿ ತಿಳಿಯಬಹುದು.

ತಮಿಳು ಭಾಷೆ

ಭಾರತೀಯ ಭಾಷೆಗಳಲ್ಲೆಲ್ಲಾ ಸಂಸ್ಕೃತ ಭಾಷೆಯನ್ನು ಬಿಟ್ಟರೆ ತಮಿಳು ಬಹಳ ಪ್ರಾಚೀನ ಭಾಷೆ. ತಮಿಳು ಹಳೆಯ ಭಾಷೆಯಾಗಿರುವುದರ ಜೊತೆಗೆ ಸಂಪನ್ನ ಭಾಷೆಯೂ ಹೌದು. ಹೆಚ್ಚು ಕಡಿಮೆ 2500 ವರ್ಷಗಳ ಸತತವಾದ ಸಾಹಿತ್ಯ ಮತ್ತು ವ್ಯಾಕರಣ ಚರಿತ್ರೆಯನ್ನು ಈ ಭಾಷೆ ಹೊಂದಿದೆ. ತಮಿಳಿನ ಸಾಹಿತ್ಯ ಕೃತಿಗಳಂತೆ ಹಳೆಯ ಶಾಸನಗಳೂ ದೊರೆತಿವೆ. ದ್ರಾವಿಡ ಭಾಷೆ ಪರಿವಾರಕ್ಕೆ ಸಂಬಂಧಿಸಿದಂತೆ ಅತ್ಯಂತ ಪ್ರಾಚೀನತಮ ಉಲ್ಲೇಖಗಳು ಸಿಗುವುದು ಈ ಭಾಷೆಯಲ್ಲೇ. ಹೆಚ್ಚು ಕಡಿಮೆ ಕ್ರಿ . ಪೂ. ದ ಕೊನೆಯ ಕಾಲದಿಂದಲೇ ತಮಿಳಿನ ಉಗಮ ಗೋಚರಿಸುತ್ತದೆ. ಪತ್ತುಪ್ಪಾಟು, ಎಟ್ಟುತ್ತೊಗೈ, ಅಹನಾನೂರ್, ಮೊದಲಾದ ಸಂಘಂ ಕಾಲದ ಕೃತಿಗಳು ಆದಷ್ಟು ಪ್ರಾಚೀನ ರೂಪಗಳನ್ನು ಉಳಿಸಿಕೊಂಡಿವೆ. ಈ ಪ್ರಾಚೀನ ಭಾಷೆಯನ್ನು ತಮಿಳುನಾಡು ಶ್ರೀಲಂಕಾ, ಸಿಂಗಪುರ, ಮಲಯಾ, ಬರ್ಮಾ ಮುಂತಾದ ದೂರ ದೇಶಗಳಲ್ಲಿ ಇರುವ ಜನರು ಮಾತನಾಡುತ್ತಾರೆ.

ಹಲವಾರು ವಿಶಿಷ್ಟ ಕಾರಣಗಳಿಂದಾಗಿ ತಮಿಳು ಭಾಷೆಯು ದ್ರಾವಿಡ ಭಾಷೆಗಳಲ್ಲಿ ಮೊದಲನೇ ಸ್ಥಾನವನ್ನು ಪಡೆದುಕೊಂಡಿದೆ.[7] ಅವುಗಳೆಂದರೆ ,

1) ಇತರ ದ್ರಾವಿಡ ಭಾಷೆಗಳೊಂದಿಗೆ ಹೋಲಿಸಿ ನೋಡುವಾಗ ಸಂಸ್ಕೃತ ಭಾಷೆಯ ಪ್ರಭಾವ ಕಡಿಮೆಯಾಗಿ ಕಾಣಿಸಿಕೊಳ್ಳುವುದು ತಮಿಳು ಭಾಷೆಯಲ್ಲೇ. ತಮಿಳು ಭಾಷೆಯಲ್ಲಿ ಕಾಣಿಸಿಕೊಳ್ಳುವ ಕೆಲವು ಸಂಸ್ಕೃತ ಪದಗಳು ತಮಿಳು ಸ್ವರೂಪಕ್ಕೆ ತಕ್ಕಂತೆ ಬದಲಾವಣೆಯಾಗಿವೆ.
2) ಇತರ ದ್ರಾವಿಡ ಭಾಷೆಗಳಿಗಿಂತ ಪ್ರಾಚೀನ ಸಾಹಿತ್ಯಗಳನ್ನು, ವ್ಯಾಕರಣಗಳನ್ನು ಪಡೆದಿದೆ.
3) ಇತರ ದ್ರಾವಿಡ ಭಾಷೆಗಳಿಗಿಂತ ಆಡು ಭಾಷೆಯೂ, ಬರಹ ಭಾಷೆಯೂ ಕಡಿಮೆ ವ್ಯತ್ಯಾಸವನ್ನು ಹೊಂದಿದೆ.
4) ಸಂಘಂ ಕಾಲದಿಂದ ಇಂದಿನವರೆಗೂ ತಮಿಳು ಭಾಷೆ ಅಷ್ಟೊಂದು ಮಾರ್ಪಾಡುಗಳನ್ನು ಪಡೆದಿಲ್ಲ. ಆದ್ದರಿಂದ ಸಂಘಂ ಕಾಲದ ಸಾಹಿತ್ಯಗಳನ್ನು ಇಂದಿನವರೂ ಓದಿ ಆನಂದಿಸಬಹುದು.
5) ಇತರ ದ್ರಾವಿಡ ಭಾಷೆಗಳಲ್ಲಿ ಹಳೆಯ ಶಾಸನಗಳು ಅನ್ಯಭಾಷೆಯಲ್ಲಿರುವಾಗ ತಮಿಳಿನ ಪ್ರಾಚೀನ

ಶಾಸನಗಳಲ್ಲಿ ಬಹಳಷ್ಟು ಶಾಸನಗಳು ತಮಿಳು ಭಾಷೆಯಲ್ಲಿವೆ.

6) ಮೂಲ ದ್ರಾವಿಡ ಭಾಷೆಯ ಪದಗಳನ್ನು ಹೆಚ್ಚಾಗಿ ಹೊಂದಿರುವ ಭಾಷೆ ತಮಿಳು ಭಾಷೆ

ಹೀಗೆ ಇಂತಹ ವಿಶಿಷ್ಟ ಅಂಶಗಳನ್ನು ಹೊಂದಿರವುದರಿಂದ ಸ್ವಲ್ಪ ಮಟ್ಟಗೆ ತಮಿಳು ದ್ರಾವಿಡ ಭಾಷೆಗಳ ಪರಿವಾರಕ್ಕೆ ಒಡೆಯ.ಎನ್ನಬಹುದು.

ತಮಿಳು ಭಾಷೆಯಲ್ಲಿ ಎರಡು ಮುಖ್ಯವಾದ ವಿಭಾಗಗಳೆಂದೆರೆ,

1) ಶೆಂದಮಿೞ್ 2). ಕೊಂಡುದಮಿೞ್

ಇವೆರಡಕ್ಕೆ ತುಂಬಾ ವ್ಯತ್ಯಾಸವಿದೆ. ತಮಿೞಿನ ಹಳೆಯ ಗ್ರಂಥಗಳಲ್ಲಿ ಒಂದಾದ ಕ್ರಿ.ಶ. 5ನೇ ಶತಮಾನದ ಕುರುಳಕಾವ್ಯ ಇಂದಿಗೂ ತಮಿಳುನಾಡಿನಲ್ಲಿ ಜನಪ್ರಿಯ ಕಾವ್ಯ. ಶಿವನ ಡಮರುಗದ ಬಲಪಕ್ಕದಿಂದ ಸಂಸ್ಕೃತವೂ, ಎಡಭಾಗದಿಂದ ತಮಿಳು ಹುಟ್ಟಿದವೆಂಬ ಹೇಳಿಕೆ ಶಂಭರಹಸ್ಯ ಎಂಬ ಗ್ರಂಥದಲ್ಲಿದೆ. ಶಿವನು ಸಂಸ್ಕೃತವನ್ನು ಪಾಣಿನಿಗೂ, ತಮಿಳನ್ನು ಅಗಸ್ತ್ಯನಿಗೂ, ಅನುಗ್ರಹಿಸಿದರಂತೆ. ಆದರಂತೆ ಅಗಸ್ತ್ಯರು ತಮಿಳು ಭಾಷೆಗೆ ಆಚಾರ್ಯರು.

ತಮಿಳು ಭಾಷೆಯಲ್ಲಿ ಬಹಳ ಹಿಂದಿನಿಂದಲೂ ವ್ಯಾಕರಣಗಳು ಅಧಿಕ ಸಂಖ್ಯೆಯಲ್ಲಿ ರಚಿತವಾಗಿದ್ದು ಈ ಭಾಷೆಯ ಅಭ್ಯಾಸಕ್ಕೆ ಅನುಕೂಲವಾಗಿದೆ. ತಮಿಳು ಭಾಷೆಯಲ್ಲಿ ಕಾಣಿಸಿಕೊಳ್ಳುವ ಮೊಟ್ಟಮೊದಲ ಕೃತಿಯೇ 'ತೊಲ್ಕಾಪ್ಪಿಯಂ' ಎಂಬ ವ್ಯಾಕರಣ ಗ್ರಂಥ. ಇದರ ಕಾಲ ಕ್ರಿ.ಶ.3ನೇ ಶತಮಾನ. ದೊರೆತಿರುವ ಕೃತಿಗಳಲ್ಲಿ ಇದು ಮೊದಲ ಕೃತಿಯಾದರೂ ಇದಕ್ಕೆ ಮುಂಚೆಯೇ ತಮಿೞಿನಲ್ಲಿ ಸಾಹಿತ್ಯ ಕೃತಿಗಳು ಇದ್ದವು ಎಂದು ತೊಲ್ಕಾಪ್ಪಿಯಂನಲ್ಲಿ ಹೇಳಲಾಗಿದೆ. ಹಾಗೆಯೇ ಬುದ್ಧಮಿತ್ರನ ವೀರಸೋಳಿಯಂ, ನನ್ನೂಲ್, ನೇಮಿನಾದಮ್, ಇಳಂಬೂರಣರ್, ಚೇನಾವರೈಯರ್, ನಾಚ್ಚಿನಾರ್ಕ್ಕಿನಿಯರ್ ಇನ್ನೂ ಮೊದಲಾದ ಕೆಲವು ತಮಿಳು ವ್ಯಾಕರಣಗಳಿವೆ. ಈ ಹಳೆಯ ಮತ್ತು ಮಧ್ಯಕಾಲದ ತಮಿಳು ವ್ಯಾಕರಣಗಳಲ್ಲಿ ಕ್ರಮಬದ್ಧವಾದ ಒಂದು ಐತಿಹಾಸಿಕ ಮತ್ತು ತುಲನಾತ್ಮಕ ಮಾರ್ಗಗಳನ್ನು ಕಾಣಬಯಸಲಾಗದು.

ತಮಿಳು ಶಬ್ಧದ ನಿಷ್ಪತ್ತಿ:-

ತಮಿಳು ಎಂಬ ಶಬ್ಧದ ಹುಟ್ಟು ಹಾಗೂ ವ್ಯುತ್ಪತ್ತಿ ಸ್ಪಷ್ಟವಿಲ್ಲ. 19ನೇ ಶತಮಾನದಲ್ಲಿ ಯುರೋಪಿನಿಂದ ತಮಿಳನ್ನು ತಮಿಳು, ಟ್ಯಾಮಿಲ್/ ೞ್ ಎಂದು ಕರೆದಿದ್ದಾರೆ. ಆದರೆ ಇವರಿಗಿಂತಲೂ ಹಿಂದೆ ಭಾರತಕ್ಕೆ ಬಂದಿದ್ದ ಪೋರ್ಚುಗೀಸರು ಮೊದಮೊದಲಲ್ಲಿ ತಮಿಳನ್ನು ಮಲಬಾರ್ ಎಂದು ಕರೆದಿದ್ದಾರೆ. ಕನ್ನಡಿಗರು, ಮುಸಲ್ಮಾನರು, ತಮಿಳರನ್ನು ಅರವರೆಂದೂ, ತಿಗಳರೆಂದೂ, ತಮಿಳನ್ನು ಅರವ-ತಿಗಳ/ಳು ಎಂದು ಕರೆದಿದ್ದಾರೆ. ಆದರೆ ವಿಶೇಷವಾದ ಚರ್ಚೆಯೆಲ್ಲಾ ಇರುವುದು ದ್ರಾವಿಡ ಎಂಬ ಪದದ ವಿಚಾರವಾಗಿ . ದ್ರಾವಿಡ ಎಂಬ

ಶಬ್ದದ ವ್ಯುತ್ಪತ್ತಿ ಅತ್ಯಂತ ತೊಡರಿನದಾಗಿ ತೋರುತ್ತಿದೆ. ಅದು ತಮಿಳಿಗೆ ಇರುವ ಸಂಸ್ಕೃತ ಸಂವಾದಿ ಪದವೆಂದೂ, 'ತಮಿಳು' ಭಾಷೆ ಮತ್ತು ಜನ ಇಬ್ಬರಿಗೂ ಅನ್ವಯವಾಗುತ್ತದೆಂದೂ ಒಂದು ವಾದ.

ದ್ರಾವಿಡ-ತಿರಾಮಿಡ -ತಮಿಳು ಆಯಿತೆಂದು ಇನ್ನೊಂದು ವಾದ. ಈ ವಾದ ಹಲವು ದೃಷ್ಟಿಗಳಿಂದ ದ್ರಾವಿಡ ಭಾಷೆಗಳ ಅಭ್ಯಾಸದಲ್ಲಿ ಪ್ರಮುಖ. ಇದನ್ನು ಸ್ವಲ್ಪ ವಿವರವಾಗಿ ಪರಿಶೀಲಿಸಬೇಕಾಗುತ್ತದೆ.ಮೊದಲು ದ್ರಮಿಡ, ದ್ರಾವಿಡ, ದ್ರಮಿಳ - ಮುಂತಾದ ಪದಗಳ ಪ್ರಾಚೀನ ಪ್ರಯೋಗಗಳ ಬಗ್ಗೆ ನೋಡುವುದಾದರೆ,

ಕುಮಾರಿಲಭಟ್ಟನ ಸಂಸ್ಕೃತ ಕೃತಿಯಾದ ತಂತ್ರವಾರ್ತಿಕದಲ್ಲಿ ದ್ರಾವಿಡ ಪದವಿದೆ. ಧರ್ಮಶಾಸ್ತ್ರದಲ್ಲಿಯೂ ದ್ರಾವಿಡ ಎಂಬ ಪದವಿದೆ. ಮಹಾಭಾರತ ದಲ್ಲಿಯೂ ದ್ರಾವಿಡ ಎಂಬ ಪದದ ಉಲ್ಲೇಖವಿದೆ. ವರಾಹಮಿಹಿರನ ಬೃಹತ್ ಸಂಹಿತೆಯಲ್ಲಿ ಅದರ ಕೆಲವು ಪ್ರತಿಗಳಲ್ಲಿ ಮಾತ್ರ ದ್ರಾವಿಡ ಪದಕ್ಕೆ ದ್ರಾಮಿಡ ಎಂಬ ಅನುನಾಸಿಕದ ಉಚ್ಚಾರ ಪಡೆದ ಪದವಿದೆ. 16ನೇ ಶತಮಾನದಲ್ಲಿ ತಾರಾನಾಥರು ಟಿಬೆಟ್ ಭಾಷೆಯಲ್ಲಿ ಬರೆದ 'ಬೌದ್ಧ ಧರ್ಮ ಪ್ರಸಾರದ ಇತಿಹಾಸ' ಎಂಬ ಗ್ರಂಥದಲ್ಲಿ 'ದ್ರಮಿಳ' ಎಂಬ ಪದದ ಪ್ರಯೋಗವಿದೆ. ಮಲೆಯಾಳ ಭಾಷೆಯ ಒಂದೆರಡು ಪುರಾಣಗಳಲ್ಲಿ ದ್ರಮಿಳ ಎಂಬ ಪ್ರಯೋಗವಿದೆ. ಪಾಳಿ ಭಾಷೆಯ ಮಹಾವಂಶ ಕೃತಿಯಲ್ಲಿ 'ದ್ರಮಿಳೋ' ಎಂದಿದೆ. ಕ್ರಿ.ಶ.3ನೇ ಶತಮಾನದ ಗ್ರೀಕ್ ಭಾಷೆಯಲ್ಲಿ ಬರೆದ ಟಾಲೆಮಿ 'ದಮರಿಕೆ' ಎಂದು ಉಪಯೋಗಿಸಿದ್ದಾನೆ.

ವಿದ್ವಾಂಸರು ಈ ಆಧಾರಗಳನ್ನು ಪರಿಶೀಲಿಸಿ ದ್ರವಿಡ-ದ್ರಾಮಿಡ-ತಿರಮಿಡ-ದ್ರಮಿಳ-ದಮಿಳ ತಮಿಳ/ಳ್ ಆಗಿದೆಯೆಂದು, ತಿರವೀಡು-ತಿರಮೀಡ-ತಿರಮಿಳ-ತಮಿಳು ಆಗಿದೆಯೆಂದೂವಿವರಿಸುವರು. ಅವರ ಈ ತೀರ್ಮಾನಕ್ಕೆ ತಮಿಳಿನಲ್ಲಿರುವ ಡ-ವಿ, ಳ-ಡ ಆಗುವ ಪದ್ಧತಿ ಇದ್ದ ಆಧಾರಗಳಿಗೆ ಪೋಷಕವಾಗಿದೆ.[2]

ನಾಡ್-ನಾಟ್, ಚೋಳ್-ಚೋಡ ಕಾಲ್ಡ್‌ವೆಲ್ ಕೂಡ ದ್ರಮಿಡ/ಳ ಶಬ್ದದಿಂದಲೇ ತಮಿಳ್ ಶಬ್ದ ಬಂದಿರಬೇಕೆಂದು ಭಾವಿಸುತ್ತಾರೆ.

ಮಂಗಳೇಶನ ಮಹಾಕೂಟ ಶಾಸನದಲ್ಲಿ ಕ್ರಿ.ಶ.600ರಲ್ಲಿ ದ್ರಮಿಳ್‌ಎನ್ನುವ ರೂಪ ಸಿಗುತ್ತದೆ. ತಮಿಳಿಗೆ ದ್ರವಿಡ ಭಾಷೆ ಎಂಬ ಹೆಸರು ತೀರ ಇತ್ತೀಚಿನ ಗ್ರಂಥಗಳಲ್ಲಿ ಸಿಗುತ್ತದೆ. 'ಹೊಸಗನ್ನಡ ನುಡಿಗನ್ನಡಿ'ಯಲ್ಲಿ ತಮಿಳಿಗೆ ದ್ರಮಿಡರೆಂದೇ ಸಂಬೋಧಿಸಿದೆ.

ತಮಿಳುನಾಡಿಗೆ ತಮಿಳಗಮ್ ಎಂದು ಪುರಾತನ ತಮಿಳು ಕೃತಿಗಳಲ್ಲಿ ಹೇಳಿದೆ. ಕ್ರಿ.ಶ.4-5ನೇ ಶತಮಾನದ ಶಿಲಪ್ಪದಿಗಾರಮ್‌ನಲ್ಲಿ ತಮಿಜ್ ಎಂಬ ಪದ ಬಹಳ ಮೊಟ್ಟ ಮೊದಲಬಾರಿಗೆ ಪ್ರಯೋಗವಾಗಿದೆ. ಈ ತಮಿಳಗ ಪದವೇ ಗ್ರೀಕ್ ಭಾಷೆಯಲ್ಲಿ ದಮರಿಕೆ ಆಗಿದೆಯೆಂದು ತೋರುತ್ತದೆ.

ತಮಿಳು ಲಿಪಿ ಮತ್ತು ಅದರ ವಿಕಾಸ:-

ಲಭ್ಯವಿರುವ ತಮಿಳು ಬರಹಗಳ ಮಾದರಿಗಳ ಆಧಾರದಿಂದಲೂ ಮತ್ತು ಕ್ರಿ.ಶ.ದ ಪ್ರಾರಂಭ ಕಾಲಕ್ಕೆ ಸೇರಿದ ಅತ್ಯಂತ ಪ್ರಾಚೀನ ವ್ಯಾಕರಣ ಗ್ರಂಥವಾದ 'ತೊಲ್ಕಾಪ್ಪಿಯಂ'ನಲ್ಲಿ ಕಂಡು ಬರುವ ಹೇಳಿಕೆಗಳಿಂದಲೂ ಸ್ಪಷ್ಟವಾಗುವ ಅಂಶವೆಂದರೆ ತಮಿಳಿನ ಜೀವಾಳಕ್ಕೆ ಅನುಕೂಲವಾಗುವಂತೆ ಬ್ರಾಹ್ಮೀ ಲಿಪಿಯನ್ನು ಅಳವಡಿಸಿಕೊಳ್ಳಲಾಯಿತು ಎನ್ನುವುದು.

ಉದಾ: ಎ,ಒ ಗಳ ಹ್ರಸ್ವ ರೂಪವನ್ನು ಅವುಗಳ ದೀರ್ಘ ಸಂಜ್ಞೆಗಳ ಮೇಲೆ ಒಂದು ಚುಕ್ಕಿ ಹಾಕುವುದರಿಂದ ಸೂಚಿಸಲಾಗಿದೆ. ಅಕಾರಯುಕ್ತ ವ್ಯಂಜನ ಸರಣಿಗಳಲ್ಲಿ (ಕ, ಚ) ವ್ಯಂಜನಕ್ಕೆ ಸ್ವರ ಸೇರಿ ಒಂದೇ ಸಂಜ್ಞೆಯಿಂದ ತೋರಿಸಿದರೆ, ಶುದ್ಧ ವ್ಯಂಜನಗಳನ್ನು ಅಂದರೆ ಧ್ವನಿಮಾತ್ರಕವಾಗಿ ಏಕವ್ಯಂಜನಗಳಾಗಿರುವುದನ್ನು ಎರಡು ಅಕ್ಷರ ಸಂಜ್ಞೆಯಿಂದ ('ಅ' ಸ್ವರಯುಕ್ತ ಅಕ್ಷರದ ಮೇಲೆ ಒಂದು ಚುಕ್ಕಿ ಹಾಕುವುದರಿಂದ ತೋರಿಸಲಾಗುತ್ತದೆ.) ತಮಿಳು ಬರಹದ ವಿಶೇಷವಾದ ಲಕ್ಷಣವೆಂದರೆ, ಸ್ವರಗಳ ನಡುವೆಯಾಗಲಿ, ಸಂಯುಕ್ತ ವ್ಯಂಜನದಲ್ಲಾಗಲೀ, ಎಲ್ಲೆಡೆಗಳಲ್ಲೂ ಶುದ್ಧ ವ್ಯಂಜನಗಳನ್ನು ತೋರಿಸುವ ಸಂದರ್ಭದಲ್ಲಿ ಬರುವ ಚುಕ್ಕಿಯ ಸಂಪೂರ್ಣ ಉಪಯೋಗ. ಹಾಗಾಗಿ ಒತ್ತಕ್ಷರಗಳಿಗೆ ಅವಕಾಶವಿಲ್ಲ[5].

ಶಾಸನಗಳ ಬರಹಗಳಲ್ಲಿ ಅಕ್ಷರಗಳ ಸಂಖ್ಯೆ ಒಂದೇ ಸಮನಾಗಿಲ್ಲ. ಆದರೆ ಸಾಹಿತ್ಯ ಕೃತಿಗಳಲ್ಲಿ ಅದು ಏಕರೀತಿಯಲ್ಲಿದೆ.ಮುಖ್ಯವಾಗಿ ಸಾಹಿತ್ಯ ಭಾಷೆಯಲ್ಲಿ ಕಂಡುಬರುವ ಒಂದು ವಿಕಸನ ರೀತಿಯನ್ನು ನೋಡಬಹುದು. ಅದೆಂದರೆ 12 ಸ್ವರಗಳು, 18 ವ್ಯಂಜನಗಳು ಮತ್ತು 'ಆಯ್ತಂ' ಎಂಬ ಸಂಜ್ಞೆ 7ನೇ ಶತಮಾನದವರೆಗೂ ಕಂಡುಬರುತ್ತದೆ. ತಿರುಮಂತಿರಂ ಎಂಬ ಹನ್ನೆರಡು ಶೈವ ಕೃತಿಗಳಲ್ಲಿ ಒಂದಾದುದೂ, ಸಿದ್ಧರ ಕೃತಿಗಳಲ್ಲಿ ಮೊದಲನೆಯದೂ ಆದ ಕೃತಿಯಲ್ಲಿ ಸ,ಷ್,ಕ್ಷ್ ಎಂಬ ಅಕ್ಷರಗಳನ್ನು ಆ ಧ್ವನಿಗಳನ್ನು ಮಾತ್ರ ಸೂಚಿಸಲು ಉಪಯೋಗಿಸಿರುವುದನ್ನು ಕಾಣುತ್ತೇವೆ. ಸ,ಷ್,ಜ್,ಕ್ಷ ಮತ್ತು ಶ್ರೀ ಎಂಬವುಗಳು ಮೊತ್ತ ಮೊದಲಿಗೆ ಅರುಣಗಿರಿನಾಥರ 'ತಿರುಪ್ಪುಕೞ್' ನಲ್ಲಿ 15ನೇ ಶತಮಾನದಲ್ಲಿ ಕಂಡುಬರುತ್ತದೆ.

ಅನಂತರದ ಪದ್ಯ ಮತ್ತು ಗದ್ಯ ಸಾಹಿತ್ಯದಲ್ಲಿ ಇವುಗಳು ಸರ್ವಸಾಮಾನ್ಯವಾಗಿ ಬಳಕೆಯಾಗಿವೆ. ಆಧುನಿಕ ಕಾಲದ ಸಾಹಿತಿಗಳು ಇತರ ಶಾಖೆಯ ಬರಹಗಾರರೂ, ಈ ನಾಲ್ಕು ಅಕ್ಷರಗಳಾದ ಸ,ಜ್,ಷ್,ಹ ಗಳನ್ನು ಸರ್ವಸಾಮಾನ್ಯವಾಗಿ ಆದರೆ, ಕೆಲವು ಮಿತಿ ಹಾಗೂ ಹೊಸ ಪದ್ಧತಿಯೊಡನೆ ಉಪಯೋಗಿಸುತ್ತಿದ್ದಾರೆ ಎನ್ನಬಹುದು.

ಇಂದಿನ ತಮಿಳು ವರ್ಣಮಾಲೆ

ಸ್ವರಗಳು:

அ (ಅ) ஆ (ಆ) இ (ಇ) ஈ (ಈ) உ (ಉ) ஊ (ಊ) எ (ಎ) ஏ (ಏ) ஐ (ಐ) ஒ (ಒ) ஓ (ಓ) ஔ (ಔ) ஃ (ಅಹ್)

ವ್ಯಂಜನಗಳು: ವರ್ಗೀಯ

க (ಕ) ங (ಙ) ச (ಚ) ஞ (ಞ) ட (ಟ) ண (ಣ) த (ತ) ந (ನ) ப (ಪ) ம (ಮ)

ಅವರ್ಗೀಯ:

ய (ಯ) ர (ರ) ல (ಲ) வ (ವ) ழ (ೞ) ள (ಳ) ற (ಱ) ன (ನ) ஜ (ಜ) ஸ (ಸ) ஷ (ಶ) ஹ (ಹ) க்ஷ (ಕ್ಷ)

ದ್ರಾವಿಡ ಭಾಷೆಗಳಲ್ಲಿ ಮಾತ್ರವಲ್ಲದೇ ಯಾವುದೇ ಆಧುನಿಕ ಭಾರತೀಯ ಭಾಷೆಗಳಲ್ಲೂ ಇಲ್ಲದಂತಹ ಅತ್ಯಂತ ಪ್ರಾಚೀನವಾದ ಲಿಖಿತ ದಾಖಲೆಗಳು ತಮಿಳಿನಲ್ಲಿವೆ. ಪ್ರಾಚೀನವಾದ ಈ ಲಿಖಿತ ದಾಖಲೆಗಳು ಪ್ರಮುಖವಾಗಿ ಮಧುರೈ ಮತ್ತು ರಾಮನಾಥಪುರಂ ಜಿಲ್ಲೆಗಳಲ್ಲಿನ ಎರಡು ಅಥವಾ ಮೂರು ಗುಹಾ ಶಾಸನಗಳಲ್ಲಿಯೂ, ಮತ್ತು ಅಪರೂಪವಾಗಿ ವಾಣಿಜ್ಯ ಹಾಗೂ ಸಾಂಸ್ಕೃತಿಕ ಪ್ರಾಧಾನ್ಯವುಳ್ಳ ಪ್ರದೇಶಗಳಾದ ಈರೋಡು ಮತ್ತು ಕರೂರು ಎಂಬ ಸ್ಥಳದಲ್ಲಿ ದೊರೆಯುತ್ತದೆ. ಐರಾವತಂ ಮಹಾದೇವನ್‌ರವರ ಪ್ರಕಾರ ಈ ತಮಿಳು ಶಾಸನಗಳ ಕಾಲ ಕ್ರಿ.ಪೂ.3ನೇ ಶತಮಾನದಿಂದ ಕ್ರಿ.ಶ.1ನೇ ಶತಮಾನ.

ತನ್ನೊಂದಿಗೆ ಅನುವಂಶಿಕ ಸಂಬಂಧವುಳ್ಳ ಕನ್ನಡ ಮತ್ತು ತೆಲುಗುಗಳಿಗಿಂತ ಸ್ವತಂತ್ರವಾಗಿ ತಮಿಳು ವಿಕಾಸಗೊಂಡುದು ಆ ಭಾಷೆಯ ವೈಶಿಷ್ಟ್ಯ. ಪ್ರಧಾನವಾದ ಮೂರು ಉಪಭಾಗಗಳಾದ ದಕ್ಷಿಣ, ಮಧ್ಯ ಮತ್ತು ಉತ್ತರ ದ್ರಾವಿಡವೆಂಬವುಗಳಲ್ಲಿ ತಮಿಳು ದಕ್ಷಿಣ ದ್ರಾವಿಡ ಗುಂಪಿಗೆ ಸೇರಿದೆ. ಭಾಷಿಕವಾಗಿ ದಕ್ಷಿಣ ದ್ರಾವಿಡದ ವೈಶಿಷ್ಟ್ಯವೆಂದರೆ ಪದಾದಿಯ 'ಚ್' ಅನೇಕ ಪದಗಳಲ್ಲಿ ಲೋಪಗೊಳ್ಳುವುದಾಗಿದೆ.

ಉದಾ: ಮೂಲದ್ರಾವಿಡದ 'ಚಯಿನ್ತು' (ಐದು) ಎಂಬುದು ಅಯಿನ್ತು ಎಂದು ರೂಪುಗೊಂಡಿದೆ. ಹಾಗೆ ಇದರ ಸಂಬಂಧಪಟ್ಟ ರೂಪಗಳು ದಕ್ಷಿಣ ವರ್ಗದ ಭಾಷೆಗಳಲ್ಲಿ ಮಲಯಾಳಂ , ಕೋತ, ತೊಡ, ಕೊಡಗು, ಕನ್ನಡ ಮತ್ತು ತುಳು ಸೇರಿದಂತೆ ಕಂಡುಬರುತ್ತದೆ. ಈ ಗುಂಪಿನ ಇನ್ನೊಂದು ವೈಶಿಷ್ಟ್ಯವೆಂದರೆ ನಿರ್ದೇಶಕ ಸರ್ವನಾಮಗಳಲ್ಲಿ, ತಲೆದೋರಿದ ಏಕವಚನದ ಸ್ತ್ರೀಲಿಂಗ ರೂಪ (ಅವಳ್) ಮತ್ತು ಅದು ಪೂರ್ಣ ಕ್ರಿಯಾಪದದಲ್ಲಿಯೂ ಬಂದುದು. (ವನ್ತಾಳ್ - ಅವಳು ಬಂದಳು)

ತಮಿಳು- ಮಲೆಯಾಳಂ

ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ತಮಿಳು-ಮಲೆಯಾಳಗಳ ನಡುವೆ ಹೆಚ್ಚು ನಿಕಟ ಸಂಪರ್ಕವನ್ನು ಹೊಂದಿದೆಯಾದರೂ ಆ ಸಂಬಂಧದ ಸ್ವರೂಪ ಮಾತ್ರ ವಿದ್ವಾಂಸರ ಚರ್ಚೆಗೆ ವಸ್ತುವಾಗಿರುವಂಥದ್ದು, ತೌಲನಿಕ ದ್ರಾವಿಡ ಭಾಷಾ ವಿಜ್ಞಾನಿಗಳಾದ ಎಲ್.ವಿ ರಾಮಸ್ವಾಮಿ ಅಯ್ಯರ್, ಟಿ.ಬರೋ , ಎಂ.ಬಿ.ಎಮಿನೋರಂಥವರ ಪ್ರಕಾರ ಪೂರ್ವ ಮಧ್ಯಕಾಲದ ತಮಿಳಿನಿಂದ ಮಲಯಾಳಂ ಪ್ರತ್ಯೇಕಗೊಂಡಿರಬೇಕು ಎಂದಿದ್ದಾರೆ. ಆದರೆ, ಅತ್ತೂರು ಕೃಷ್ಣ ಪಿಶಾರಡಿ, ವಳ್ಳೂರು ಪರಮೇಶ್ವರ ಅಯ್ಯರ್ ಮತ್ತು ಕೆ.ಗೋದವರ್ಮ ಮುಂತಾದವರು ಮಲೆಯಾಳಂ ಬೇರ್ಪಟ್ಟದ್ದು ಮೂಲದ್ರಾವಿಡದಿಂದಲೇ ಹೊರತು ತಮಿಳಿನಿಂದಲ್ಲ ಎಂಧು ಅಭಿಪ್ರಾಯ ಪಟ್ಟದ್ದಾರೆ. ಇತ್ತೀಚಿನ ಸಂಶೋಧನೆಗಳಿಂದ ತಿಳಿದು ಬರುವ ಪ್ರಮುಖ ಚಾರಿತ್ರಿಕ ಕಾರಣಗಳಿಂದಲೂ, ಭೌಗೋಳಿಕ ಕಾರಣಗಳಿಂದಲೂ, ಪರಸ್ಪರ ಸಾಮಿಪ್ಯದಿಂದಲೂ ಹಿಂದಿನ ಕಾಲದಿಂದಲೂ ಮಲೆಯಾಳಂ ಭಾಷೆ ತಮಿಳಿನಿಂದ ಅನೇಕ ಪದಗಳನ್ನು ಸ್ವೀಕರಿಸಬೇಕಾಗಿ ಬಂತು. ಆ ಕಾರಣದಿಂದ ಮೊದಲ ನೋಟಕ್ಕೆ ಮಲೆಯಾಳಕ್ಕೂ, ತಮಿಳಿಗೂ ಗಾಢ ಸಂಬಂಧವಿರುವಂತೆ ತೋರುತ್ತದೆಯೇ ಹೊರತು ಒಂದು ಮತ್ತೊಂದರಿಂದ ಹುಟ್ಟಿತು ಎಂದು ಕಲ್ಪಿಸಲು ಯಾವ ಆಧಾರವೂ ಇಲ್ಲ. ಕೇವಲ ಎರಡೂ ಭಾಷೆಗಳಲ್ಲಿ ಸಮಾನ ಶಬ್ದಗಳ ಉಭಯ ಸಾಧಾರಣತ್ವವು ಕಂಡುಬರುವುದನ್ನು ಮಾತ್ರ ಗಮನಿಸಬಹುದು.

ಮಲೆಯಾಳಂ ಸಹ ಸೇರಿದಂತೆ ದಕ್ಷಿಣ ದ್ರಾವಿಡದ ಇತರ ಭಾಷೆಗಳಿಂದ ತಮಿಳನ್ನು ಪ್ರತ್ಯೇಕಿಸುವ ವೈಶಿಷ್ಟ್ಯಗಳು ಈ ಕೆಳಗಿನಂತಿವೆ.

1) ಇ-ಉ ಬದಲಾವಣೆ ಮುಖ್ಯವಾಗಿ ಮಧ್ಯಮ ಪುರುಷ ಸರ್ವನಾಮದ ಪ್ರಕೃತಿ ರೂಪದ ತಮಿಳಿನಲ್ಲಿ ನಿಮ್-ನುಮ್(ನಿಮ್ಮ) ನಡೆಯುತ್ತದೆ.

2) ಆದಿಯ ತಾಲವ್ಯ ಅನುನಾಸಿಕ ದಂತ್ಯವಾಗಿ, ಅಂದರೆ ಞ-ನ್ ಞಣಲ್ (ಒಂದುವಾಟೆ) ನಾಣಲ್ ಆಗಿ ತಮಿಳಿನಲ್ಲಿ ಪರಿವರ್ತನೆ ಆಗುತ್ತದೆ.

3) ಮೂಲದ್ರಾವಿಡದ ಪುಲ್ಲಿಂಗ ಪ್ರತ್ಯಯ 'ಕ್ಕನ' ತಮಿಳಿನಲ್ಲಿ ಲೋಪ ಆಗುತ್ತದೆ.

ಉದಾ:- ಮುತುಕ್ಕನ್-ಮುತುವನ್-ಮುತಿಯನ್(ಮುದುಕ, ಹಳಬ)

ಚಿಱುಕ್ಕನ್-ಚಿಲುವನ್ (ಹುಡುಗ, ಎಳೆಯ)

ತಮಿಳು ಭಾಷೆಯ ವ್ಯಾಕರಣ

ಪುರಾತನ ಕಾಲದ ತಮಿಳು ಭಾಷೆ, ಮಧ್ಯಕಾಲದ ತಮಿಳು ಭಾಷೆ ಮತ್ತು ಆಧುನಿಕ ಕಾಲದ ತಮಿಳು ಭಾಷೆಯನ್ನು ಹೋಲಿಸಿ ಅಧ್ಯಯನ ಮಾಡುವುದರಿಂದ ತಮಿಳು ಭಾಷೆ ಮತ್ತು ವ್ಯಾಕರಣವನ್ನು ತಿಳಿಯಬಹುದು. ತೊಲ್ಕಾಪ್ಪಿಯಂ ಪುರಾತನ ಕಾಲದ ತಮಿಳು ಭಾಷೆಯನ್ನು, ಯಾಪ್ಪರುಂಗಲಂ, ನನ್ನೂಲ್ ಮುಂತಾದವು ಮಧ್ಯಕಾಲದ ತಮಿಳನ್ನು, ಹಾಗೆಯೇ ಪಿರಯೋಗ ವಿವೇಗಂ, ಇಲಕ್ಕಣ ವಿಳಕ್ಕಂ, ನೇಮನಾಥಂ

ಮುಂತಾದವು ಆಧುನಿಕ ಕಾಲದ ತಮಿಳು ಭಾಷೆಯನ್ನು ಪ್ರತಿಪಾದಿಸುತ್ತವೆ. ಈ ಮೂರುಕಾಲದ ವ್ಯಾಕರಣಗಳಲ್ಲಿ ಬರುವ ಅಂಶಗಳನ್ನು ಹೋಲಿಸಿ ಅಧ್ಯಯನ ಮಾಡಿದರೆ ತಮಿಳು ಭಾಷೆಯ ವ್ಯಾಕರಣಗಳಲ್ಲಿ ಕಂಡು ಬರುವ ಬದಲಾವಣೆ ಹಾಗೂ ಬೆಳವಣಿಗೆಯನ್ನು ತಿಳಿಯಬಹುದು.

ಧ್ವನಿಮಾಗಳು:-

ದೀರ್ಘ ಸ್ವರಗಳು ಮತ್ತು ಅವುಗಳ ಸಮಾನ ಹ್ರಸ್ವರೂಪಗಳ ಸಂಯುಕ್ತತೆ ಹಳೆಯ ತಮಿಳಿನ ಲಿಖಿತ ಪಾಠಗಳಲ್ಲಿ ಹೇರಳವಾಗಿದೆ. ಪದಾದಿಯಲ್ಲಿ ಹಾಗೂ ಪದಾಂತ್ಯದಲ್ಲಿ ವ್ಯಂಜನ ಸಂಯುಕ್ತತೆ ಸಾಧ್ಯವಿಲ್ಲ. 'ಲ್' ಮತ್ತು 'ಙ್' ಹೊರತಾಗಿ ಇತರ ಎಲ್ಲಾ ವ್ಯಂಜನಗಳಿಗೂ ದ್ವಿತ್ವ ರೂಪವಿದೆ ಮತ್ತು ಕ್,ಚ್, ತ್ ಮತ್ತು ಪ್ ಹೊರತಾದ ಇತರ ಎಲ್ಲವೂ ಎರಡು ವಿಜಾತೀಯ ವ್ಯಂಜನ ಸಂಯುಕ್ತತೆಯನ್ನು ಪಡೆಯಬಹುದು. ಪದದ ರಚನಾ ದೃಷ್ಟಿಯಿಂದ ತಮಿಳು ಅಂಟುಭಾಷೆಗಳ ಸ್ವಭಾವವನ್ನು ಉಳಿಸಿಕೊಂಡಿದೆ. ಅಂದರೆ ಪದಾಂಶಗಳು ಒಂದರೊಡನೊಂದು ಅಂಟಿಕೊಂಡಿರುತ್ತದೆ. ಪ್ರಕೃತಿ ಮೊದಲ ಸದಸ್ಯನಾಗಿ ಪರವರ್ತಕಗಳು ಎರಡನೇ ಅಥವಾ ಮೂರನೇ ಸದಸ್ಯರಾಗಿರುತ್ತಾರೆ.

ನಾಮಪದ:-

ನಾಮಪದಗಳು ಮಾನವ ಮತ್ತು ಮಾನವೇತರ ಎಂಬ ಎರಡು ವರ್ಗಗಳಾಗುತ್ತವೆ. ಮಾನವ ವರ್ಗದ ನಾಮಪದಗಳು ಏಕವಚನ ಮತ್ತು ಬಹುವಚನಗಳೆಂಬ ಎರಡು ವರ್ಗಗಳಾಗಿ ವಿಂಗಡಿತವಾಗುತ್ತದೆ. ಏಕವಚನದಲ್ಲಿ ಮಾತ್ರ ಪುಲ್ಲಿಂಗ ಮತ್ತು ಸ್ತ್ರೀಲಿಂಗದ ವ್ಯತ್ಯಯವನ್ನು ಕಾಣಬಹುದು. ಮಾನವೇತರ ನಾಮಪದಗಳು ಏಕವಚನ ಮತ್ತು ಬಹುವಚನ ಎಂದು ವಿಭಾಗಿತವಾಗುತ್ತದೆ. ಪೂರ್ಣ ಕ್ರಿಯಾಪದದಲ್ಲಿ ಆಖ್ಯೆಯ ಲಿಂಗ ವಚನಗಳ ಸರ್ವನಾಮದ ಉಲ್ಲೇಖನ ನಡೆಯುವುದರಿಂದ ಈ ಐದು ಸ್ತರದ ವಿಭಜನೆ ವಾಕ್ಯ ರಚನಾ ವಿಧದ ದೃಷ್ಟಿಯಿಂದಲೂ ಮುಖ್ಯವಾಗಿದೆ.

ತಮಿಳಿನಲ್ಲಿ ಎರಡು ಪ್ರಮುಖವಾದ ವಾಕ್ಯ ಪ್ರಕಾರಗಳಿವೆ.

1) ನಾಮಪದ + ನಾಮಪದ ಸೇರುವಂಥದ್ದು
ಉದಾ: (ಅವನ್ ಮಾಣವನ್ - ಅವನು ವಿದ್ಯಾರ್ಥಿ)

2) ನಾಮಪದ + ಪೂರ್ಣಕ್ರಿಯಾಪದ
(ಅವನ್ ವಂತಾನ್- ಅವನು ಬಂದನು)

ಪ್ರಶ್ನಾರ್ಥ ಸರ್ವನಾಮರೂಪವನ್ನು ಸಂಬಂಧವಾಚಕವಾಗಿ ಬಳಸುವುದು ವಿರಳ. ತೊಲ್ಕಾಪಿಯಂ 'ಕಳ್' ಎಂಬ ಬಹುವಚನ ಪ್ರತ್ಯಯ ಮಾನವೇತರ ನಾಮಪದದೊಂದಿಗೆ ಮಾತ್ರವೇ ಬರಬೇಕು ಎನ್ನುತ್ತದೆ. ಆದರೆ ಮಧ್ಯಕಾಲದ ವ್ಯಾಕರಣಗಳು 'ಕಳ್' ಎಂಬುದು ಮಾನವ-ಮಾನವೇತರ ಎರಡರಲ್ಲೂ ಬರಬಹುದು ಎಂದಿದ್ದಾರೆ.

ಸಂಧಿ:-

ತಮಿಳು ಭಾಷೆಯಲ್ಲಿ ಸಂಧಿ ಮಟ್ಟದಲ್ಲಿ ಕೆಲವು ಪರಿವರ್ತನೆಗಳು ನಡೆದಿವೆ. ಮೀರಚೋಳಿಯಂ ಎಂಬ ವ್ಯಾಕರಣ ಗ್ರಂಥದಲ್ಲಿ 'ಲ' ಕಾರವನ್ನು ಅಂತ್ಯವಾಗಿ ಉಳ್ಳ ಪದವು 'ಯ' ಕಾರವನ್ನು ಆದಿಯಾಗಿ ಉಳ್ಳ ಪದವೂ ಸೇರುವಾಗ ಇವುಗಳ ಮಧ್ಯದಲ್ಲಿ 'ಇ' ಆಗಮ ಬರಬೇಕೆಂದು ಹೇಳುತ್ತದೆ.

ಉದಾ: ವೇಲ್+ಯದು = ವೇಲಿಯಾದು

ಆದರೆ ಪ್ರಾಚೀನ ವ್ಯಾಕರಣವಾದ ತೊಲ್ಕಾಪಿಯಂ ಇದನ್ನು ಕುರಿತು ಯಾವ ಸೂಚನೆಯನ್ನು ನೀಡಿಲ್ಲ. ಆದರೆ ನನ್ನೂಲ್ 'ಯ' ಕಾರವನ್ನು ಬಿಟ್ಟು ಉಳಿದ ಎಲ್ಲಾ ವ್ಯಂಜನಗಳ ಅಂತ್ಯದಲ್ಲೂ 'ಇ' ಕಾರ ಆಗಮವಾಗಿ ಬರುತ್ತದೆ ಎಂದು ಸ್ಪಷ್ಟಪಡಿಸಿದೆ.

ಪ್ರಾಚೀನ ಮತ್ತು ಮಧ್ಯ ಕಾಲದ ವ್ಯಾಕರಣಗಳು ಪದದ ಅಂತ್ಯದಲ್ಲಿ ಬರುವ 'ಲ' ಕಾರ 'ಳ' ಕಾರಗಳು ಕ,ಚ,ತ, ವ ಮುಂತಾದ ಸ್ಪರ್ಶ ಅಕ್ಷರಗಳನ್ನು ಆದಿಯಾಗಿ ಉಳ್ಳ ಪದಗಳೊಂದಿಗೆ ಸೇರುವಾಗ 'ಲ' ಕಾರ 'ಳ' ಕಾರಗಳು ಕ್ರಮವಾಗಿ "ಟಿ' ಕಾರವಾಗಿಯೂ 'ಟ' ಕಾರವಾಗಿ ಪರಿವರ್ತನೆಗೊಳ್ಳಬೇಕು ಎಂದಿದೆ.

ಉದಾ : ನಾಳ್+ಕಳ್=ನಾಟ್ಕಳ್

ಕಲ್+ಕಂಡು = ಕಲ್ಕುಂಡು

ಆದರೆ ಆಧುನಿಕ ಕಾಲದ ಭಾಷೆಯಲ್ಲಿ 'ಲ' ಕಾರ 'ಳ' ಕಾರಗಳು ಸಹಜವಾಗಿಯೇ ಇರುವುದನ್ನು ಕಾಣಬಹುದು.

ಉದಾ: ನಾಳ್+ಕಳ್=ನಾಳ್ಕಳ್

ಕಲ್+ಕಂಡು= ಕಲ್ಕಂಡು

ರೂಪ ಪರಿವರ್ತನೆ

ನೇಮಿನಾಥಂ ಎಂಬ ವ್ಯಾಕರಣ ಗ್ರಂಥದಲ್ಲಿ ಪದಗಳಲ್ಲಿ 'ಯಾ' ಕಾರಕ್ಕೆ ಬದಲಾಗಿ 'ಆ' ಕಾರ ಆದಿಯಲ್ಲಿ ಬರಬಹುದು ಎಂದಿದೆ.

ಉದಾ: ಯಾರು-ಆರು

ಯಾಡು -ಆಡು

ಸಂಖ್ಯಾ ವಾಚಕಗಳು

ಸಾಮಾನ್ಯವಾಗಿ ಸಂಖ್ಯಾವಾಚಕಗಳನ್ನು ವೈಯ್ಯಾಕರಣಿಗಳು ನಾಮ ಪ್ರಕರಣದಲ್ಲೇ ವಿವರಿಸುತ್ತಾರೆ. ಸಂಖ್ಯಾವಾಚಕಗಳಿಗೆ ನಾಮರೂಪ ಮತ್ತು ಸಂಖ್ಯಾವಾಚಕ ವಿಶೇಷಣರೂಪ ಎಂಬ ಎರಡು ರೂಪಗಳಿವೆ. ಅವುಗಳನ್ನು ನೋಡುವುದಾದರೆ.

ಒಂದು : ತಮಿಳಿನಲ್ಲಿ ಇದನ್ನು ಒನ್ಱು ಎನ್ನುವರು. ಇದರ ವಿಶೇಷಣ ರೂಪಗಳು ಓರ್ ಮತ್ತು ಒರು

ಎರಡು : ಇರಂಡು ಎನ್ನುವ ಈ ಸಂಖ್ಯಾವಾಚಕದ ವಿಶೇಷಣ ರೂಪಗಳು ಇರು, ಇರ್, ಈರ್ ಎಂಬುವು.

ಮೂರು : ಮೂಂನ್ಱು ಎನ್ನುವ ಈ ಸಂಖ್ಯಾವಾಚಕದ ವಿಶೇಷಣ ರೂಪಗಳು 'ಮು' 'ಮೂ' ಮುಂತಾದವು.

ನಾಲ್ಕು : ನಾನ್ಕು ಎನ್ನುವ ಈ ಸಂಖ್ಯಾವಾಚಕದ ವಿಶೇಷಣ ರೂಪ ನಾಲ್ ಎಂಬುದು.

ಐದು : ಐಂದು ಎನ್ನುವ ಈ ಸಂಖ್ಯಾವಾಚಕದ ವಿಶೇಷಣ ರೂಪಗಳು ಐ, ಐನ್, ಐಂ ಮುಂತಾದವು.

ಆರು : ಆಱು ಎಂಬ ಈ ಸಂಖ್ಯಾವಾಚಕದ ವಿಶೇಷಣ ಅಱು ಎಂಬುದು

ಏಳು : ಏೞು ಎಂಬ ಈ ಸಂಖ್ಯಾವಾಚಕದ ವಿಶೇಷಣ ರೂಪ ಎೞು ಮತ್ತು ಏೞ್ ಎಂಬುವು.

ಎಂಟು : ಎಟ್ಟು ಎಂಬ ಈ ಸಂಖ್ಯಾವಾಚಕದ ವಿಶೇಷಣ ರೂಪ ಎಣ್ ಎಂಬುದು.

ಒಂಬತ್ತು : ಇದನ್ನು ಒಂಬದು, ಒನ್ಬಾನ್, ಒನ್ಬಃದು, ತೊಂಡು ಎಂಬ ಹಲವಾರು ಪದಗಳಿಂದ ತೊಲ್ಕಾಪ್ಪಿಯರ್ ಗುರುತಿಸಿದ್ದಾರೆ. ಇದರ ವಿಶೇಷಣ ರೂಪ ಒನ್ಪದಿಱ್ಱು ಎಂಬುದು.

ಹತ್ತು : ಪತ್ತು, ಪಃದು ಎಂಬುವು ತಮಿಳು ರೂಪಗಳು ಪದಿನ್, ಪನ್ ಎಂಬುವು ಇದರ ವಿಶೇಷಣ ರೂಪಗಳು.

ನೂರು : ನೂಱು ಎಂಬ ತಮಿಳು ಸಂಖ್ಯಾವಾಚಕದ ವಿಶೇಷಣ ರೂಪ ನೂಱ್ಱು ಎಂಬುದು.

ತಮಿಳು ಭಾಷೆಯಲ್ಲಿ ಸಂಘಂ ಕಾಲದ ಕೃತಿಗಳಲ್ಲೇ ಸಂಸ್ಕೃತ ಪದಗಳು ಸೇರಿಹೋಗಿವೆ. ಹಾಗೆಯೇ ಪೋರ್ಚುಗೀಸ್, ಅರಬ್, ಪಾರಸಿ, ಮರಾಠಿ ಇತ್ಯಾದಿ ಭಾಷೆಗಳಿಂದ ಪದಗಳನ್ನು ಸ್ವೀಕರಿಸಿದೆ. ಆದುದರಿಂದಲೇ ತಮಿಳು ವ್ಯಾಕರಣಗಳಲ್ಲಿ ದೇಶ್ಯ ಪದಗಳನ್ನು 'ಇಯರ್‌ಶೊಲ್' ಎಂದೂ ವಿದೇಶಿಯ ಪದಗಳನ್ನು 'ತಿಶೈಶೂಲ್' ಎಂದೂ ಕರೆದಿದ್ದಾರೆ.

ಇಂಡೋ-ಯುರೋಪಿಯನ್ ಭಾಷಾ ಪರಿವಾರದಲ್ಲಿ ಸಂಸ್ಕೃತ ಭಾಷೆಗೆ ಇರುವ ಸ್ಥಾನ ದ್ರಾವಿಡ ಭಾಷಾ ಪರಿವಾರದಲ್ಲಿ ತಮಿಳು ಭಾಷೆಗಿದೆ. ಎಲ್ಲಾ ವೇಳೆಯಲ್ಲೂ ತಮಿಳು ಪ್ರಾಚೀನ ರೂಪಗಳನ್ನು ಕಾಪಾಡಿಕೊಂಡಿದೆಯೆಂದೂ ಹೇಳುತ್ತಾರೆ. ಕೆಲವು ಸಂದರ್ಭಗಳಲ್ಲಿ ಕನ್ನಡ ನುಡಿಯೇ ಮೂಲ ದ್ರಾವಿಡದ ಸ್ವರೂಪವನ್ನು ಉಳಿಸಿಕೊಂಡಿರುವುದು ಕಾಣುತ್ತದೆ. ಉದಾಹರಣೆಗೆ ಹೇಳುವುದಾದರೆ ಭಾಷಾ ವಿಜ್ಞಾನದ ವಿವೇಚನೆಯ ದೃಷ್ಟಿಯಿಂದ ಕ್/ಚ್ ಎರಡೂ ಧ್ವನಿಗಳಿರುವ ಶಬ್ದರೂಪಗಳಲ್ಲಿ 'ಕ' ಕಾರವು 'ಚ' ಕಾರಕ್ಕಿಂತಲೂ ಪ್ರಾಚೀನವೆಂಬುದು ನಿರ್ವಿವಾದ. ಈ ವಿಚಾರದಲ್ಲಿ ತಮಿಳು ಭಾಷೆಗಿಂತಲೂ ಕನ್ನಡ ಹೆಚ್ಚು ಹಳೆಯ ರೂಪವನ್ನು ಉಳಿಸಿಕೊಂಡಿದೆ.

ಉದಾ:	ಕನ್ನಡ	ತಮಿಳು
	ಕೆಮ್	ಚೆಮ್
	ಕಿರು	ಚಿರು
	ಕೆದರು	ಶಿದರು
	ಕೆಸರು	ಶೇರು
	ಕೆಲ	ಚಿಲ

ಇದಲ್ಲದೇ ಹಳಗನ್ನಡಕ್ಕೂ ತಮಿಳಿಗೂ ನಿಕಟವಾದ ಸಂಭಂಧವಿದೆ. ವ್ಯಾಕರಣ ಪ್ರಕ್ರಿಯೆಗಳಿಂದ ಮೊದಲುಗೊಂಡು ಭಾಷಾ ಮರ್ಯಾದೆಯಿಂದ ಹಿಡಿದು ಪದ ಪ್ರಯೋಗಗಳವರೆಗೆ ಸಂಬಂಧ, ಸಾದೃಶ್ಯಗಳು, ಸಮಾನವಾಗಿದೆ. ಕನ್ನಡ ಮತ್ತು ತಮಿಳು ಅನೇಕ ದೃಷ್ಟಿಗಳಿಂದ ತುಂಬಾ ಸಮೀಪವರ್ತಿಯಾಗಿದೆ.

ಎರಡು ಸ್ವರಗಳ ನಡುವಣ ತಮಿಳಿನಲ್ಲಿ 'ಯ್' ಮತ್ತು 'ದ್' ಕನ್ನಡದಲ್ಲಿ 'ಸ್' ಇರುವುದು ಕಂಡುಬಂದಿದೆ.

ಉದಾ:	ತಮಿಳು	ಕನ್ನಡ
	ಆಯಿರಂ	ಸಾಸಿರಂ
	ಉಯಿರ್	ಉಸಿರ್-ಉಸಿರು
	ಪಯಲ್	ಪಸುಳೆ

ಪ್ರಾದೇಶಿಕ ಉಪಭಾಷೆಗಳು:-

ತಮಿಳಿನಲ್ಲಿ ಪ್ರಮುಖವಾಗಿ ನಾಲ್ಕು ಉಪಭಾಷಾ ಕ್ಷೇತ್ರಗಳಿವೆ. ಅವುಗಳೆಂದರೆ :

1) **ದಕ್ಷಿಣ ಉಪಭಾಷೆ :** ಮಧುರೈ, ರಾಮನಾಥಪುರ, ತಿರುನೆಲ್ವೇಲಿ ಮತ್ತು ಕನ್ಯಾಕುಮಾರಿ ಜಿಲ್ಲೆಗಳಲ್ಲಿ ಮಾತಾಡುವಂಥದು.
2) **ಕೇಂದ್ರದ ಉಪಭಾಷೆ:** ತಂಜಾವೂರು, ತಿರುಚಿನಾಪಳ್ಳಿ ಮತ್ತು ದಕ್ಷಿಣ ಆರ್ಕಾಟಿನಲ್ಲಿ ಮಾತಾಡುವಂಥದು.
3) **ಉತ್ತರದ ಉಪಭಾಷೆ:** ದಕ್ಷಿಣ ಆರ್ಕಾಟು, ಉತ್ತರ ಆರ್ಕಾಟು, ಚೆಂಗಲ್ಪಟ್ಟು ಜಿಲ್ಲೆಗಳಲ್ಲಿ ಮಾತಾಡುವಂಥದು.
4) **ಪಶ್ಚಿಮದ ಉಪಭಾಷೆ:** ಕೊಯಂಬತ್ತೂರು, ಪೆರಿಯಾರ್, ಸೇಲಂ, ಧರ್ಮಪುರಿ ಮತ್ತು ನೀಲಗಿರಿ ಜಿಲ್ಲೆಯಲ್ಲಿ ಮಾತಾಡುವಂಥದು.

ಇವುಗಳು ತಮಿಳುನಾಡನ್ನು ಪ್ರಾಚೀನ ಕಾಲದಲ್ಲಿ ಪಾಂಡ್ಯನಾಡು, ಚೋಳನಾಡು, ತೊಂಡೈನಾಡು ಮತ್ತು ಕೊಂಗುನಾಡು ಎಂದು ಮಾಡಿದ್ದ ವಿಭಾಗಕ್ಕೆ ಸರಿಹೊಂದುತ್ತವೆ. ಭಾರತದಿಂದ ಹೊರಗಡೆ ಶ್ರೀಲಂಕಾದಲ್ಲಿರುವ ತಮಿಳು ಆಡುಮಾತಿನ ದೃಷ್ಟಿಯಿಂದ ಒಂದು ಮುಖ್ಯ ಉಪಭಾಷೆಯಾಗಿದೆ.

ಸಾಹಿತ್ಯ ಪ್ರಭೇದಗಳು ಮತ್ತು ಭಾಷಿಕ ಲಕ್ಷಣಗಳು

ಸಾಹಿತ್ಯಕ ಪ್ರಭೇದಗಳ ಆಧಾರದ ಮೇಲೆ ಗುರುತಿಸುವುದಾದರೆ ತಮಿಳು ಸಾಹಿತ್ಯವನ್ನು ಅನೇಕ ವಿಭಾಗಗಳಾಗಿ ವಿಂಗಡಿಸಲಾಗುತ್ತದೆ. ಅವುಗಳನ್ನು ನೋಡುವುದಾದರೆ ;

1) ಗುಹಾಶಾಸನಗಳ ತಮಿಳುಭಾಷೆ

2) ತೊಲ್ಕಾಪ್ಪಿಯರ್ ಕಾಲದ ತಮಿಳು ಭಾಷೆ

3) ಸಂಘಂ ಕಾಲದ ತಮಿಳು ಭಾಷೆ

4) ಪಲ್ಲವರ ಕಾಲದ ತಮಿಳು ಭಾಷೆ

5) ಚೋಳರ್ ಕಾಲದ ತಮಿಳು ಭಾಷೆ

6) ನಾಯಕ್ಕರ್ ಕಾಲದ ತಮಿಳು ಭಾಷೆ

7) ಆಧುನಿಕ ಕಾಲದ ತಮಿಳುಭಾಷೆ

ಹೀಗೆ ಅನೇಕರು ಅನೇಕ ರೀತಿಯಲ್ಲಿ ಸಾಹಿತ್ಯಕ ದೃಷ್ಟಿಯಿಂದ ವಿಭಾಗಿಸುತ್ತಾರೆ . ಈ ಕಾಲಘಟ್ಟಗಳಲ್ಲಿ ಮುಖ್ಯವಾಗಿ ಸಂಘಕಾಲದ ತಮಿಳು ಭಾಷೆಯ ಬಗ್ಗೆ ಒಂದು ನೋಟ ಬೀರುವುದಾದರೆ

ಸಂಘಂ ಕಾಲದ ತಮಿಳು ಭಾಷೆ :

ಕ್ರಿ.ಪೂ.2-3ನೇ ಶತಮಾನದವರೆಗಿನ ಕಾಲವನ್ನು ಸಂಘಂಕಾಲ ಎಂದು ಸೂಚಿಸಲಾಗುತ್ತದೆ .ತಮಿಳಿನ ಅತಿ ಪ್ರಾಚೀನ ಬರಹಗಳನ್ನು ಸಂಘಂ ಸಾಹಿತ್ಯ ಕಾಲದ ಕಾವ್ಯಗಳು ಎಂದು ಕರೆಯುತ್ತಾರೆ.ಸಂಘಂ ಎಂದರೆ 'ಅಕಾಡೆಮಿ' ಎಂದು ಅರ್ಥ. ಈ ಕಾಲದ ಕಾವ್ಯಗಳು ಪ್ರೇಮ ಮತ್ತು ಯುದ್ಧದ ಮೇಲೆ ಬೇರೆ ಬೇರೆ ಕವಿಗಳು ರಚಿಸಿದ ಕವಿತೆಗಳ ಸಂಕಲನಗಳು. ಸಂಘಂ ಕೃತಿಗಳೆಂದರೆ ಮುಖ್ಯವಾಗಿ 'ಎಟ್ಟುತ್ತೊಕೈ' (ಎಂಟು ಸಂಕಲನಗಳು) ಮತ್ತು ಪತ್ತುಪ್ಪಾಟ್ಟು (ಹತ್ತು ಗೀತೆಗಳು) ಅವುಗಳನ್ನು ಕೆಲವು ವಿದ್ವಾಂಸರು 'ವೀರಕಾವ್ಯಗಳೆಂದು' ಪರಿಗಣಿಸುತ್ತಾರೆ. ಸಂಘಂ ಕಾವ್ಯವು ಜೀವನದ ಸಮಸ್ಯೆಯನ್ನು ಮುಖ್ಯವಾಗಿ ಕೌಟುಂಬಿಕ ಜೀವನವನ್ನು ಮತ್ತು ಸಾಮಾಜಿಕ ,ರಾಜಕೀಯ ಸ್ಥಿತಿಗತಿಗಳ ಸರಳವಾದ 'ಅಚರಿಯಂ' ಛಂದಸ್ಸಿನಲ್ಲಿ ನಿರೂಪಿಸುತ್ತದೆ. ಸಂಘಂ ಕಾವ್ಯದ ಭಾಷೆಯನ್ನು ಐತಿಹಾಸಿಕ ದೃಷ್ಟಿಯಿಂದ ಹಳೆಯ ತಮಿಳು ಎಂದು ಗುರುತಿಸಲಾಗುತ್ತದೆ.

ಸಂಘಂ ಕಾವ್ಯಗಳನ್ನು ತದನಂತರ ಕಾವ್ಯದಿಂದ ಬೇರ್ಪಡಿಸುವ ಕೆಲವು ಸಾಮಾನ್ಯ ಲಕ್ಷಣಗಳಿವೆ.
ಉದಾ : -'ಕಳ್' ಎಂಬ ಮಾನವ ವರ್ಗದ ಬಹುವಚನ ಪ್ರತ್ಯಯ ಸಂಘಂ ಕಾಲದಲ್ಲಿ ತೀರ ಅಪರೂಪ.
ಸಂಘಂ ಪಾಠಗಳಲ್ಲಿ ಸಬಲವೆನ್ನುಂಥ ಕ್ರಿಯಾಪದಗಳ ಸತಿಸಪ್ತಮಿ ರೂಪದ ಕ್ರಿಯೆಗೆ ಒಂದು ಸ್ಪರ್ಶ ವ್ಯಂಜನ ಹೆಚ್ಚಾಗಿ ಸೇರಿದಾಗ ,ಅತಿ ಹೆಚ್ಚಿನ ಸಂಖ್ಯೆಯಲ್ಲಿ `ಪ` ಉಪಯೋಗವಾಗಿರುವುದು ಕಂಡುಬರುತ್ತದೆ.

ಉದಾ: - ನಟ-ನಡೆ, ನಟಪ್ಪ-ನಡೆಯಲು.

ಅದೇ ರೀತಿ ಪಕ್ಷಾರ್ಥದ ನ್ಯೂನರೂಪ, ಚೆಯಿನ್ 'ಮಾಡಿದರೆ' ಎಂಬ ಮಾದರಿಯ ಬಳಕೆ.

ಸಂಘಂ ಪಾಠಗಳಲ್ಲಿ ನಾಲ್ಕು -ಐದು ಉಪಭಾಷೆಗಳನ್ನು ಗುರುತಿಸಲು ಸಾಧ್ಯ. ಸಂಘಂ ಸಾಹಿತ್ಯದ ಶಿಷ್ಟ ಭಾಷಾ ಪ್ರಭೇದವೆಂಬುದು ಪಾಂಡ್ಯ ರಾಜಧಾನಿಯಾದ ಮಧುರೆಯಲ್ಲಿ ಪ್ರಚಲಿತವಿದ್ದ ಉಪಭಾಷೆಯೆಂದು ಭಾವಿಸಲಾಗಿದೆ. ಮಧುರೆ -ತಮಿಳ ಸಂಘಂನ ಕೇಂದ್ರಸ್ಥಾನವಾಗಿತ್ತೆಂಬ ಜನಜನಿತ ನಂಬುಗೆಯಿದೆ. ಮಧುರೆಯನ್ನು ಪಾಂಡ್ಯರನ್ನು ಸಾಹಿತ್ಯ ಚಟುವಟಿಕೆಗಳಲ್ಲಿ ಜೊತೆಗೂಡಿಸಲು ಬೇಕಾದಷ್ಟು ಆಂತರಿಕ ಆಧಾರವಿದೆ. ಆದುದರಿಂದ ಪಾಂಡ್ಯ ಉಪಭಾಷೆ ಅಥವಾ ದಕ್ಷಿಣದ ಉಪಬಾಷೆಯೇ ಶಿಷ್ಟ ಸಾಹಿತ್ಯ ಭಾಷೆಯಾಗಿ ಸಂಘಂ ಕಾಲದಲ್ಲಿ ಅಂದರೆ ಕ್ರಿ. ಪೂ. 300 ಕ್ರಿ. ಶ. 300 ವರೆಗಿನ ಕಾಲದಲ್ಲಿತ್ತೆಂದು ತಿಳಿಯಬಹುದು. ನೀತಿ ಕಾವ್ಯವಾದ 'ತಿರುಕ್ಕುರಳ್' ಮತ್ತು ಮಹಾಕಾವ್ಯಗಳಾದ 'ಶಿಲಪ್ಪದಿಕಾರಂ' ಮತ್ತು 'ಮಣಿಮೇಖಲೈ' ಎಂಬವುಗಳು ಸಂಘಂ ಕಾಲಾನಂತರದ ಕೃತಿಗಳೆಂದು ಪರಿಗಣಿತವಾಗಿವೆ. ಅವುಗಳ ಭಾಷೆಯೂ ಕೆಲವು ಬದಲಾವಣೆಗಳನ್ನು ಪ್ರತಿಫಲಿಸುತ್ತವೆ. ಅದು ಸಂಘಂ ಪಾಠಗಳ ಭಾಷೆಗಿಂತ ಆಧುನಿಕ ತಮಿಳಿಗೆ ಹತ್ತಿರವಾಗಿದೆ.

4ನೇ ಮತ್ತು 6ನೇ ಶತಮಾನಗಳು ತಮಿಳುನಾಡಿನ ರಾಜಕೀಯ ಚರಿತ್ರೆಯಲ್ಲಿ ಕತ್ತಲು ಯುಗ 'ಅಂತಿಣೆಯಯ್‌ಂಪತು' 'ಕಾರ್ನಾರ್ಪತು' ಎಂಬ ಸಂಘಂ ಪದ್ಯಗಳ ವಸ್ತು 'ವೆಣ್ಬಾ' ಎಂಬ ಛಂಧಸ್ಸಿನಲ್ಲಿದೆ. ಇಂಥ ಎಷ್ಟೋ ನೀತಿ ಕಾವ್ಯಗಳನ್ನು ಜೈನ ಕವಿಗಳು ರಚಿಸಿದರು ಕಾಂಚಿಪುರಂ ರಾಜಧಾನಿಯಾಗಿದ್ದ ಪಲ್ಲವ ರಾಜ್ಯ 7ನೇ ಶತಮಾನದಲ್ಲಿ ತಲೆಯೆತ್ತಿತ್ತು. ಮುಂದಿನ ಮೂರು ಶತಮಾನಗಳ ಕಾಲದ ತಮಿಳು ಸಾಹಿತ್ಯ ಚರಿತ್ರೆ ಆತ್ಮ ಶೋಧಕವಾದ ಭಕ್ತಿ ಕಾವ್ಯದ ರಚನೆಗಳಿಂದ ತುಂಬಿದೆ. ಶೈವ ಮತ್ತು ವೈಷ್ಣವ ವೇಷ್ಠವ ಸಂತರಿಂದ ರಚಿತವಾದ ಈ ಸಾಹಿತ್ಯ ಭಾಷಾ ದೃಷ್ಟಿಯಿಂದ ಪೂರ್ವ ಮಧ್ಯ ತಮಿಳು ಪಾಠಗಳೆಂದು ಪರಿಗಣಿತವಾಗಿದೆ.

ಮಧ್ಯ ತಮಿಳಿನ ಮಧ್ಯಕಾಲದಲ್ಲಿ ತತ್ವಗ್ರಂಥಗಳಿಗೆ ಬರವಣಿಗೆ ಹಾಗೂ ಪ್ರಾಚೀನ ಸಾಹಿತ್ಯ ಮತ್ತು ವ್ಯಾಕರಣ ಗ್ರಂಥಗಳಿಗೆ ವ್ಯಾಖ್ಯಾನ ಬರೆಯುವುದು ಮಾತ್ರ ನಡೆಯಿತು. ಅಧಿಕ ಪ್ರಮಾಣದ ಸಂಸ್ಕೃತ ಪ್ರಭಾವವನ್ನು ಈ ಕಾಲದ ಭಾಷೆಯಲ್ಲಿ ಕಾಣಬಹುದು. ಸಾಹಿತ್ಯಭಾಷೆ ಈ ಕಾಲದಲ್ಲಿ ಪಾಂಡಿತ್ಯ ಪ್ರಧಾನವಾದುದಾಯಿತು. ಸಂಸ್ಕೃತ ಮತ್ತು ತಮಿಳಿನ ಮಿಶ್ರಣವಾದ 'ಮಣಿಪ್ರವಾಳ' ಶೈಲಿಯ ಅಧಿಕ್ಯ ಕಂಡು ಬಂದ ಈ ಕಾಲ 10-15 ನೇ ಶತಮಾನದ ನಡುವಿನದು.

ಮಧ್ಯಕಾಲೀನ ತಮಿಳಿನ ಕೊನೆ (16-19 ನೇ ಶತಮಾನ) ಸಂಗೀತ ಮತ್ತು ನಾಟಕ ಸಾಹಿತ್ಯವಾದ ರಚನೆಯಕಾಲ. ಈ ಸಾಹಿತ್ಯವನ್ನು 'ಪಳ್ಳು' 'ಕುಳವಂಜಿ ' 'ನೊಂಡನಾಟಕಂ'' ಎಂಬಿತ್ಯಾದಿಯಾಗಿ ಕರೆಯುತ್ತಾರೆ. ಭಾಷಿಕವಾಗಿ ಇವುಗಳು ಗಮನಾರ್ಹವಾದವು. ಏಕೆಂದರೆ ಈ ಸಾಹಿತ್ಯ ಕೃತಿಗಳಲ್ಲಿ ಕೆಳವರ್ಗಕ್ಕೆ ಸೇರಿದವರೆನ್ನಲಾದವರ ಆಡುಮಾತುಗಳು ಬಳಕೆಯಾಗಿವೆ. ಈ ಸಮಯದಲ್ಲೇ ಇತರ ದ್ರಾವಿಡ ಭಾಷೆಗಳ

ಮುಖ್ಯವಾಗಿ ಕನ್ನಡ ಮತ್ತು ತೆಲುಗು ಅಧಿಪತ್ಯದ ಕಾರಣದಿಂದ ಹಾಗೂ ಇತರ ಇಂಡೋಆರ್ಯನ್ ಭಾಷೆಗಳಾದ ಉರ್ದು, ಅರೇಬಿಕ್, ಪರ್ಶಿಯನ್ ಮತ್ತು ಮರಾಠಿ ಭಾಷೆಗಳ ಪದಗಳು ತಮಿಳನ್ನು ಸೇರುವುದನ್ನು ಕಾಣಬಹುದು.

19 ನೇ ಶತಮಾನದಲ್ಲಿ ರಾಜಕೀಯ, ಸಾಹಿತ್ಯ , ಸಾಂಸ್ಕೃತಿಕ ವಿಷಯಗಳಲ್ಲಿ ಉಂಟಾದ ಬದಲಾವಣೆಗಳು ಸಾಹಿತ್ಯದಲ್ಲಿ ಸ್ಪಷ್ಟವಾಗಿ ಪ್ರತಿಫಲಿತೊಡಗಿದವು. ಪಾಶ್ಚಾತ್ಯರ ಪ್ರಭಾವದಿಂದ ಗದ್ಯವು ಸಾಹಿತ್ಯದ ಒಂದು ಪ್ರಮುಖ ಮಾದ್ಯಮವಾಯಿತು. ಈ ಪ್ರಭಾವದಿಂದ ಕಾದಂಬರಿ, ಸಣ್ಣ ಕತೆಗಳು ಇತ್ಯಾದಿ ಪ್ರಕಾರಗಳು ಬೆಳಕಿಗೆ ಬಂದವು. ಆಧುನಿಕ ಕಾಲದ ಪ್ರಾರಂಭದಲ್ಲಿ ಗದ್ಯ ಬರಹಗಳಲ್ಲಿ ಉಪಯೋಗಿಸಿದ ಭಾಷೆಯ ಬಗ್ಗೆ ತೀವ್ರವಾದ ಚರ್ಚೆಗಳು ನಡೆದವು. ವಿ.ರಾಮಸ್ವಾಮಿ ಅಯ್ಯಂಗಾರರಂತಹ ಬರಹಗಾರರು ಆಡುಮಾತನ್ನು ಸಾಹಿತ್ಯದಲ್ಲಿ ಬಳಸಬೇಕೆಂದು ವಾದ ಮಾಡಿದರು. ಆದರೆ ಭಾಷಾ ವಿದ್ವಾಂಸರು ಸಾಹಿತ್ಯ ಭಾಷೆಯನ್ನು ಬೆಂಬಲಿಸಿದರು. ಬಿ. ವಿ. ಕಲ್ಯಾಣ ಸುಂದರಂ ಮೊದಲಿಯಾರ್ ವಿಶೇಷವಾದ ಸರಳಭಾಷೆಯನ್ನು ತಮ್ಮ ಬರವಣಿಗೆಯಲ್ಲಿ ಬಳಸಿದರು. ಸುಬ್ರಹ್ಮಣ್ಯ ಭಾರತಿ ಮತ್ತು ಇತರ ಶ್ರೇಷ್ಠ ಬರಹಗಾರರು ಆಡು ಮಾತಿನ ವಾಕ್ಯರಚನಾ ರೀತಿಯ ಮೂಲಕ ಆಧುನಿಕ ಸಾಹಿತ್ಯದ ಭಾಷೆಯನ್ನು ನಿರ್ಮಿಸುವುದರಲ್ಲಿ ಪ್ರಾಥಮಿಕ ಸೇವೆಯನ್ನು ಸಲ್ಲಿಸಿ ಅದು ಜನಸಂಪರ್ಕ ಮಾಧ್ಯಮವಾಗುವಂತೆ ಮಾಡಿದರು.

ಬೇರೆ ಭಾಷೆಗಳಲ್ಲಿಯಂತೆ ತಮಿಳಿನಲ್ಲಿ ಕಾದಂಬರಿ ಮತ್ತು ಸಣ್ಣ ಕಥೆಗಳು ಹೊಸ ಸಾಹಿತ್ಯದ ಪ್ರಕಾರಗಳಾಗಿ ಬೆಳೆದುದೇ ಮುಖ್ಯವಾಗಿ ಕಥೆಯ ಸಂಭಾಷಣಾ ಪರಿಸರಗಳಲ್ಲಿ ಆಡು ಮಾತಿನ ನುಡಿಗಳು ಸಾಹಿತ್ಯ ಪ್ರವೇಶಿಸಲು ಕಾರಣವಾಗಿದೆ. ಇದರ ಪರಿಣಾಮವಾಗಿ ಸಾಮಾಜಿಕ ಮತ್ತು ಪ್ರಾದೇಶಿಕ ಉಪಭಾಷೆ ಪ್ರಯೋಗಗಳು, ಬರಹದ ಭಾಷೆಯಲ್ಲಿ ಪ್ರವೇಶಿಸುವಂತಾಯಿತು. ಅದೂ ಅಲ್ಲದೆ ಪತ್ರಿಕೆಗಳ ಮತ್ತು ಆಕಾಶವಾಣಿಗಳ ಹೆಚ್ಚುತ್ತಿರುವ ಜನಪ್ರಿಯತೆಯಿಂದಾಗಿ ತಮಿಳಿನ ಒಂದು ಹೊಸ ಶಿಷ್ಟ ಪ್ರಮಾಣದ ರಚನೆಯಾಗುತ್ತದೆ ಎನ್ನಬಹುದು.

ಕನ್ನಡ ಭಾಷೆ

ದಕ್ಷಿಣ ಭಾರತದಲ್ಲಿ ಬಳಕೆಯಲ್ಲಿರುವ ದ್ರಾವಿಡ ಭಾಷೆಗಳಲ್ಲಿ ಕನ್ನಡವು ಪ್ರಮುಖವಾದ ಭಾಷೆಯಾಗಿದೆ. ಕನ್ನಡವು ಕರ್ನಾಟಕದ ಬಹುಸಂಖ್ಯಾತರ ಮತ್ತು ಅಧಿಕೃತ ಹಾಗೂ ಆಡಳಿತ ಭಾಷೆಯಾಗಿರುವುದಲ್ಲದೆ ಕನ್ನಡಿಗರ ಮಾತೃಭಾಷೆಯಾಗಿದೆ. ಕನ್ನಡ ಭಾಷೆಯನ್ನು ಆಡುವ ಸಾಕಷ್ಟು ಸಂಖ್ಯೆಯ ಜನರು ಕರ್ನಾಟಕದ ನೆರೆಹೊರೆಯ ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಇದ್ದಾರೆ.

ಕನ್ನಡವನ್ನು ದಕ್ಷಿಣ ಮತ್ತು ಪೂರ್ವಗಳಲ್ಲಿ ಮೂರು ಪ್ರಮುಖ ದ್ರಾವಿಡ ಭಾಷೆಗಳಾದ ಮಲೆಯಾಳ, ತಮಿಳು, ತೆಲುಗು, ಪಶ್ಚಿಮದಲ್ಲಿ ಅದೇ ದ್ರಾವಿಡ ವಂಶದ ನಿರ್ಗ್ರಾಂಥಿಕ ಭಾಷೆಗಳಾದ ಕೊಡಗು, ತುಳುಗಳು,

ಉತ್ತರದಲ್ಲಿ ಇಂಡೋ ಆರ್ಯನ್ ವಂಶದ ಮರಾಠಿ ಭಾಷೆಯೂ ಸುತ್ತುವರಿದಿದೆ. ಇದರಿಂದಾಗಿ ಕನ್ನಡವು ಆರ್ಯನ್ ಅಂಶಗಳ ತೀವ್ರ ಪ್ರಭಾವಕ್ಕೆ ಒಳಗಾಗಿದ್ದರೂ ಅದರ ಜೊತೆ ಜೊತೆಗೆ ಶಬ್ದಭಂಡಾರ, ಸಾಹಿತ್ಯ ಪ್ರಕಾರ ಇವೇ ಮುಂತಾದೆಡೆಗಳಲ್ಲಿ ತನ್ನ 'ದ್ರಾವಿಡ'ತನವನ್ನು ಉಳಿಸಿಕೊಳ್ಳುವಂತಾಗಿದೆ.

ಕನ್ನಡ ಶಬ್ದದ ವ್ಯುತ್ಪತ್ತಿ

ಕನ್ನಡ-ಕನ್ನಡಿಗ- ಕರ್ನಾಟಕ ಎಂಬ ಶಬ್ದಗಳನ್ನು ಈಗ ನಿರ್ದಿಷ್ಟಾರ್ಥದಲ್ಲಿ ಭಾಷಾವಾಚಿಯಾಗಿಯೂ, ಜನಾಂಗವಾಚಿಯಾಗಿಯೂ ಬಳಸುತ್ತೇವೆ. ಕನ್ನಡ ನಾಡು ಶಬ್ದಕ್ಕೆ ಬದಲಾಗಿ 'ಕರ್ನಾಟಕ' ಶಬ್ದ ಮಾನ್ಯತೆ ಪಡೆದು ಅಧಿಕೃತವಾಗಿ ಪ್ರದೇಶದ ಹೆಸರು ಆಗಿದೆ. ಕನ್ನಡ ಎಂಬ ಶಬ್ದ ಹುಟ್ಟಿ ಬೆಳೆದುಬಂದ ವಿಚಾರ ತುಂಬ ಕುತೂಹಲಕಾರಿಯೂ, ಚರ್ಚಾಸ್ಪದವೂ ಆಗಿದೆ. ಮಹಾಭಾರತದಲ್ಲಿ ಕರ್ಣಾಟ ಎಂಬ ಶಬ್ದವಿದೆ. ಸಂಸ್ಕೃತದಲ್ಲಿ 'ಕರ್ಣಾಟ', 'ಕರ್ನಾಟಕ' ಎಂಬ ಎರಡು ರೂಪಗಳು ಇದ್ದು ಸಮನಾರ್ಥದಲ್ಲಿ ಪ್ರಯೋಗವಾಗಿವೆ. ತಮಿಳಿನ 3ನೇ ಶತಮಾನದ ''ಶಿಲಪ್ಪದಿಗಾರಂ'' ಕೃತಿಯಲ್ಲಿ 'ಕರುನಾಡರ್' ಎಂಬ ಉಲ್ಲೇಖವಿದೆ. ಇದರಿಂದ ಕ್ರಿಸ್ತಪೂರ್ವದಿಂದಲೂ ಕನ್ನಡ ಪ್ರದೇಶ ಅಸ್ತಿತ್ವದಲ್ಲಿದ್ದು ಕ್ರಿ.ಶದಿಂದ ಕನ್ನಡ ಭಾಷೆ ಪ್ರಾರಂಭವಾಗಿರಬಹುದೆಂದು ಅಭಿಪ್ರಾಯಪಡಬಹುದಾಗಿದೆ.

ಕರುನಾಡು-ಕರ್ನಾಡು-ಕರ್ಣಾಟ ಎಂಬ ರೂಪ ಧರಿಸಿ ಕರ್ನಾಟಕ ಹುಟ್ಟಿರಬಹುದು.ಹಾಗೆಯೇ ಕರ್+ನಾಡು+ಅಗಂ-ಕರುನಾಡಗಂ-ಕರ್ನಾಟಕ ಎಂದಾಗಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ.

ಕರುನಾಡಿನ ವ್ಯುತ್ಪತ್ತಿ ಬಗ್ಗೆ ಹಲವು ಅಭಿಪ್ರಾಯಗಳಿವೆ

ಕಮ್ಮಿತು+ನಾಡು-ಕರ್ನಾಡು-ಕನ್ನಡ-ಕನ್ನಡ ಎಂದು ಆಗಿದೆಯೆಂದು ಆರ್.ನರಸಿಂಹಾಚಾರ್ಯರು ಅಭಿಪ್ರಾಯಪಡುತ್ತಾರೆ.

ಎಂ.ಗೋವಿಂದ ಪೈಗಳು ಕರು+ನಾಡು ಎಂದರೆ ಎತ್ತರದ ನಾಡು ಎನ್ನುತ್ತಾರೆ.

ಡಾ॥ಕಾಲ್ಡ್‌ವೆಲ್ ಮತ್ತು ಡಾ॥ಗುಂಡರ್ಟ್‌ರವರು ಕರು+ನಾಡು ಎಂದರೆ, ಕಪ್ಪು ಮಣ್ಣಿನ ನಾಡು ಎಂದು ವ್ಯುತ್ಪತ್ತಿ ಹೇಳಿದ್ದಾರೆ.

ಪ್ರ.ಗೋ.ಕುಲಕರ್ಣಿಯವರು ಹೆಚ್ಚು ಮೈದಾನ ಪ್ರದೇಶವಾಗಿದ್ದರಿಂದ ನೀಲಗಿರಿಯಿಂದ ಗೋದಾವರಿವರೆಗಿನ ನಾಡು (ಕರು) ಪ್ರದೇಶವು ಕರುನಾಡು ಎಂದು ವಿವರಣೆ ನೀಡಿದ್ದಾರೆ.

ಒಟ್ಟಿನಲ್ಲಿ ಕನ್ನಡ ಮತ್ತು ಕರ್ನಾಟಕದ ವ್ಯುತ್ಪತ್ತಿ ಬಗ್ಗೆ ಹೀಗೆಯೇ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ ಈವರೆಗೂ ಇವುಗಳ ಬಗ್ಗೆ ಯಾರಿಗೂ ಪೂರ್ಣ ಒಮ್ಮತವಿಲ್ಲ.

ಕರ್ನಾಟಕದ ಪ್ರಾಚೀನತೆ:

ಕನ್ನಡ ನಾಡಿಗೆ ಬಹು ಪುರಾತನವಾದ ಇತಿಹಾಸ ಇದೆ. ಕ್ರಿ.ಪೂ.3ನೇ ಶತಮಾನದಿಂದ ಕ್ರಿ.ಶ.3ನೇ ಶತಮಾನದವರೆಗೆ ರಚಿತವಾಗಿರಬಹುದಾದ ಮಹಾಭಾರತದ ಸಭಾಪರ್ವ ಮತ್ತು ಭೀಷ್ಮ ಪರ್ವಗಳಲ್ಲಿ ಕರ್ನಾಟಕದ ಉಲ್ಲೇಖವಿದೆ.ಕ್ರಿ.ಪೂ .1ನೇ ಶತಮಾನದಿಂದ ಕ್ರಿ.ಶ.1ನೇ ಶತಮಾನದ ನಡುವೆ ರಚಿತವಾಗಿತ್ತೆಂದು ಹೇಳುವ ಶೂದ್ರಕನ ಮೃಚ್ಛಕಟಿಕವೆಂಬ ಸಂಸ್ಕೃತ ನಾಟಕದಲ್ಲಿ ಕರ್ನಾಟಕದ ಹೆಸರು ಬಂದಿದೆ. ಬೌದ್ಧರ ಧರ್ಮ ಗ್ರಂಥವಾದ ಮಹಾವಂಶದಲ್ಲಿ ಆಶೋಕನು ಬೌದ್ಧ ಮತ ಪ್ರಚಾರ ಮಾಡಲು ಮತ ಪ್ರಚಾರಕರನ್ನು ಕರ್ನಾಟಕದ ಭಾಗಗಳಾದ ಬನವಾಸಿ,ಮಹಿಷನಾಡು (ಮೈಸೂರು)ಗಳಿಗೆ ಕಳುಹಿಸಿಕೊಟ್ಟನೆಂಬ ಹೇಳಿಕೆ ಇದೆ.ಇದಕ್ಕೆ ಸಮರ್ಥನೆಯಾಗಿ ಕರ್ನಾಟಕದ ಮಸ್ಕಿ, ಬ್ರಹ್ಮಗಿರಿ, ಕೊಪ್ಪಳ ಮತ್ತು ಜಟಿಂಗ ರಾಮೇಶ್ವರಗಳಲ್ಲಿ ಅಶೋಕನ ಶಿಲಾಶಾಸನಗಳು ದೊರೆತಿವೆ.'ಪ್ಲಿನಿ' ಎಂಬ ಗ್ರೀಕ್‌ಲೇಖಕನ ವರ್ಣನೆಯಲ್ಲಿ ಕನ್ನಡನಾಡಿನ ಒಂದೆರಡು ಭಾಗಗಳಿವೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.ಹಾಗೆಯೇ ಕ್ರಿ.ಶ 3ನೇ ಶತಮಾನದ ಗ್ರೀಕ್ ದೇಶದ ಭೂಗೋಳ ಶಾಸ್ತ್ರಜ್ಞನಾದ ಟಾಲೆಮಿಯು ತನ್ನ '' ಜಿಯಾಗ್ರಫಿ ಆಫ್ ಇಂಡಿಯಾ'' ಗ್ರಂಥದಲ್ಲಿ ಕನ್ನಡ ನಾಡಿನ ಭಾಗಗಳನ್ನು ಹೆಸರಿಸಿದ್ದಾನೆ.ಕ್ರಿ.ಶ.೩ನೇ ಶತಮಾನದ ತಮಿಳು ಪುರಾಣ ಕಾವ್ಯವಾದ 'ಶಿಲಪ್ಪದಿಗಾರಂ' ಎಂಬುವುದರಲ್ಲಿ ಕನ್ನಡನಾಡಿನವರನ್ನು 'ಕರುನಾಡರ್' ಎಂದು ಸಂಬೋಧಿಸಲಾಗಿದೆ: ಕ್ರಿ.ಶ.3ನೇ ಶತಮಾನದ ಸೇಂಗುಟ್ಟವನ್ ಎಂಬ ರಾಜ ಉತ್ತರಕ್ಕೆ ಹೋಗುವಾಗ ನೀಲಗಿರಿಯಲ್ಲಿ ತಂಗಿ ಇಲ್ಲಿ ಕನ್ನಡಿಗರು ಪ್ರದರ್ಶಿಸಿದ ಕುಣಿತವನ್ನು ನೋಡಿ ಸಂತೋಷಪಟ್ಟನೆಂದು ಶಿಲಪ್ಪದಿಗಾರಂನಲ್ಲಿ ಹೇಳಿದೆ.ಕ್ರಿ.ಶ.ಪೂ. 300ರಲ್ಲಿ ಆಗಿ ಹೋದ ಭದ್ರಬಾಹು ಮುನಿಗಳು ಉತ್ತರದಲ್ಲಿ 12 ವರ್ಷ ಭೀಕರ ಕ್ಷಾಮವುಂಟಾಗಿದ್ದರಿಂದ ದಕ್ಷಿಣಕ್ಕೆ ಒಂದು ಕರ್ನಾಟಕದ 'ಕಳ್ವಪ್ಪು'(ಶ್ರವಣಬೆಳಗೋಳ) ಎಂಬಲ್ಲಿ ತಂಗಿದ್ದರೆಂದು ಐತಿಹ್ಯವಿದೆ. ಕ್ರಿ.ಶ 1ನೇ ಶತಮಾನದ ಮಾರ್ಕಂಡೇಯ ಪುರಾಣದಲ್ಲಿ ಕರ್ನಾಟಕದ ಉಲ್ಲೇಖವಿದೆ.

ಮೇಲ್ಕಂಡ ಆಧಾರಗಳಿಂದ ಕನ್ನಡ ನಾಡು ಕ್ರಿ.ಪೂ.ದ ಶತಮಾನಗಳಲ್ಲಿಯೇ ಅಸ್ತಿತ್ವದಲ್ಲಿತ್ತು ಎಂಬುದು ಮನವರಿಕೆಯಾಗುತ್ತದೆ.

ಕನ್ನಡ ಭಾಷೆಯ ಪ್ರಾಚೀನತೆ:

ಕನ್ನಡದಲ್ಲಿ ಕ್ರಿ.ಶ 9ನೇ ಶತಮಾನಕ್ಕೆ ಮುನ್ನ ರಚನೆಯಾಗಿರುವ ಸಾಹಿತ್ಯಕೃತಿ ನಮಗೆ ದೊರೆತಿಲ್ಲ. ಕ್ರಿ.ಶ.7ನೇ ಶತಮಾನದ ಹೊತ್ತಿಗಾಗಲೇ ಕನ್ನಡದಲ್ಲಿ ಸಾಹಿತ್ಯ ಆರಂಭವಾಗಿರುವುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಈ ಹೊತ್ತಿಗಾಗಲೇ ಸಾಹಿತ್ಯ ನಿರ್ಮಾಣವಾಗಿರಬೇಕಾದರೆ ಅದಕ್ಕೂ ಮೊದಲು ಕನ್ನಡ ಭಾಷೆ ಎಂಬುದು ಇದ್ದಿರಲೇಬೇಕು.ಇದಕ್ಕೆ ಅನೇಕ ಶಾಸನಗಳು ಆಧಾರವಾಗಿವೆ. ಗ್ರೀಕ್, ಸಂಸ್ಕೃತ

ಮೊದಲಾದ ಸಾಹಿತ್ಯದಲ್ಲಿ ಕಂಡು ಬರುವ ಕನ್ನಡ ಪದಗಳು ಕನ್ನಡ ಭಾಷೆಯ ಹಳಮೆಗೆ ಇರುವ ಆಧಾರಗಳಲ್ಲಿ ಕೆಲವುಗಳನ್ನು ಈ ಮುಂದಿನಂತೆ ಪ್ರಸ್ತಾಪಿಸಬಹುದು.

ಮೊದಲನೆಯದಾಗಿ ಕ್ರಿ.ಪೂರ್ವದ ಅಶೋಕಶಾಸನಗಳಲ್ಲಿ ಕಂಡು ಬರುವ 'ಇಸಿಲ' ಎಂಬ ಶಬ್ದ. ಇದು ಒಂದು ನಗರದ ಹೆಸರು 'ಇಸಿಲ' ಎಂಬುದು 'ಎಸಿಲ್' ಎಂಬುದರ ಪ್ರಾಕೃತ ರೂಪವಿರಬೇಕು ಎಂಬುದು ವಿದ್ವಾಂಸರ ಅಭಿಪ್ರಾಯ. ಈ ಪದಕ್ಕೆ ಕೋಟೆ, ಕೋಟೆಯಿಂದ ಸುತ್ತುವರೆದ ಊರು, ಎಂಬ ಅರ್ಥಗಳಿದ್ದಂತೆ ತಿಳಿದು ಬರುತ್ತದೆ. ಇದರ ನಡುವಿನ 'ಸ' ಕಾರವು ಇದು ಕನ್ನಡ ಶಬ್ದ ಇರಬೇಕೆಂಬುದಕ್ಕೆ ಸಾಕ್ಷಿ ನುಡಿಯುತ್ತದೆ.

ಕ್ರಿ.ಶ.150ರಲ್ಲಿದ್ದ ಟಾಲೆಮಿಯು ತನ್ನ ಭೂಗೋಳಶಾಸ್ತ್ರ ಗ್ರಂಥದಲ್ಲಿ ಪೌನ್ನತ, ಮುದುಗಲ್ಲ, ಕಲ್ಲಗೇರಿಸ್,ಬನವಾಸೈ ಮುಂತಾದ ಊರುಗಳ ಹೆಸರುಗಳನ್ನು ಹೇಳುತ್ತಾನೆ. ಇವು ಕ್ರಮವಾಗಿ ಪುನ್ನಾಟ, ಮುದುಗಲ್, ಕಲ್ಲಿಗೆರೆ, ಬನವಾಸಿ ಎಂಬ ಕನ್ನಡ ಹೆಸರುಗಳ ಅಪಭ್ರಂಶ ರೂಪದಲ್ಲಿರಬಹುದೆಂಬ ಅಭಿಪ್ರಾಯವಿದೆ. ಇದರ ಆಧಾರದ ಮೇಲೆ ಕನ್ನಡ ಭಾಷೆ ಕ್ರಿ.ಶ.ದ ಆರಂಭದಿಂದಲೂ ಇದ್ದಿರಬಹುದೆಂದು ಹೇಳಬಹುದು. ಗ್ರೀಕ್ ಭಾಷೆಯ ಪ್ರಹಸನವಾದ ಆಕ್ಸಿರಿಂಕಸ್‌ಪ್ಯಾಪಿರೈ ಕೃತಿಯಲ್ಲಿ ಕಂಡು ಬರುವ ಗ್ರೀಕೇತರ ಭಾಷೆಯ ಶಬ್ದಗಳು ಕ್ರಿ.ಶ.2ನೇ ಶತಮಾನದ ಕನ್ನಡ ಭಾಷೆಯ ಪದಗಳೆಂದು ವಿದ್ವಾಂಸರು ತೋರಿಸುವ ಪ್ರಯತ್ನ ಮಾಡಿದ್ದಾರೆ. ಕ್ರಿ.ಶ.2ನೇ ಶತಮಾನದ ಶಾತವಾಹನ ದೊರೆಯಾದ ಹಾಲರಾಜನ 'ಗಾಥಾಸಪ್ತಸತಿ'ಪ್ರಾಕೃತ ಭಾಷೆಯ ಕೃತಿಯಲ್ಲಿ ಪೊಟ್ಟ (ಹೊಟ್ಟೆ), ತುಪ್ಪ, ಅತ್ತ ಮುಂತಾದ ಕನ್ನಡ ಪದಗಳು ಬರುತ್ತವೆ ಎಂದು ವಿದ್ವಾಂಸರುಹೇಳಿದ್ದಾರೆ.

ಕೊನೆಯದಾಗಿ ಕ್ರಿ.ಶ 450ರ ಹಲ್ಮಿಡಿಶಾಸನ ಕನ್ನಡ ಭಾಷೆಯಲ್ಲಿದೆ. ಆ ಶಾಸನದ ಭಾಷೆಯ ಸ್ವರೂಪವನ್ನು ನೋಡಿದರೆ ಅದಕ್ಕೂ ಹಿಂದೆ, ಕನ್ನಡ ಭಾಷೆ ಸಾಕಷ್ಟು ಬೆಳೆದಿರಬೇಕೆಂದು ಹೇಳಬಹುದು. ಅದರ ತರುವಾಯದ ಶಾಸನವೆಂದರೆ, ಕ್ರಿ.ಶ. 578ರ ಬಾದಾಮಿ, ಐಹೊಳೆ ಮಂಗಳೇಶನ ಶಾಸನ. ಅನಂತರದ ಕ್ರಿ.ಶ.6ಮತ್ತು 7ನೇ ಶತಮಾನಗಳ ಬಳಿಕ ಕನ್ನಡದಲ್ಲಿ ಶಾಸನಗಳು ವಿಪುಲವಾಗಿ ಸಿಗುತ್ತವೆ ಮೇಲಿನ ಆಧಾರದ ಮೇಲೆ ಕನ್ನಡ ಭಾಷೆ ಕ್ರಿ.ಶ.ದ ಆರಂಭದ ವೇಳೆಗಾಗಲೇ ಅಸ್ತಿತ್ವದಲ್ಲಿರಬೇಕು ಎಂಬ ತೀರ್ಮಾನಕ್ಕೆ ಬರಬಹುದು.

ಕನ್ನಡ ಭಾಷೆಯ ಅವಸ್ಥಾಂತರಗಳು

ಕನ್ನಡ ಭಾಷೆ ಜೀವಂತ ಭಾಷೆಯಾಗಿರುವುದರಿಂದ ಕಾಲಾಂತರದಲ್ಲಿ ಹಲವಾರು ಬದಲಾವಣೆಯ ಪ್ರಕ್ರಿಯೆಗಳಿಗೆ ಅದು ಒಳಪಟ್ಟಿದೆ. ಕನ್ನಡ ಭಾಷೆಗೆ ಕ್ರಿ.ಶ.450 ಹಲ್ಮಿಡಿಶಾಸನವೇ ಅಧಿಕೃತ ದಾಖಲೆ. ಅಲ್ಲಿಂದ ಇಲ್ಲಿಯವರೆಗೆ ಅದು ಅನೇಕ ವ್ಯತ್ಯಾಸಗಳನ್ನು ಹೊಂದಿ ಹಲವು ಅವಸ್ಥೆಗಳನ್ನು ಮುಟ್ಟಿ ವಿಕಾಸವಾಗುತ್ತಾ ಬಂದಿದೆ ಈ ವಿಕಾಸ ಪಥದಲ್ಲಿ ನಾವು ಪ್ರಮುಖವಾಗಿ ನಾಲ್ಕು ಹಂತಗಳನ್ನು ಗುರುತಿಸಬಹುದು ಅವೆಂದರೆ:

(1) ಪೂರ್ವದ ಹಳಗನ್ನಡ ಕ್ರಿ.ಶ.450-800

(2) ಹಳಗನ್ನಡ ಕ್ರಿ.ಶ 800-1050

(3) ನಡುಗನ್ನಡ ಕ್ರಿ.ಶ 1050-1800

(4) ಹೊಸಗನ್ನಡ ಕ್ರಿ.ಶ.1800-ಇತ್ತೀಚಿನವರೆಗೆ

ಅ.ಪೂರ್ವದ ಹಳಗನ್ನಡ: ಹಳಗನ್ನಡಕ್ಕೆ ಹಳಗನ್ನಡವಾದುದೇ ಪೂರ್ವದ ಹಳಗನ್ನಡ. ಕನ್ನಡದಲ್ಲಿ ಹಳಗನ್ನಡಕ್ಕೂ ಹಿಂದಿನ ಸ್ಥಿತಿಯೊಂದು ಇತ್ತು ಎಂಬುದಕ್ಕೆ ಕವಿರಾಜ ಮಾರ್ಗದಲ್ಲಿ ಉಲ್ಲೇಖವಾಗಿರುವ 'ಪಳಗನ್ನಡ' ಎಂಬ ಮಾತು ಆಧಾರವಾಗುತ್ತದೆ. ಶಾಸನಗಳಲ್ಲಿ ಹಳಗನ್ನಡ ಶಬ್ದ ರೂಪಗಳಿಗಿಂತ ಭಿನ್ನವಾದ ಕೆಲವು ಉದಾಹರಣೆಗಳು ಕಂಡು ಬರುತ್ತವೆ.ಅವು ತಮಿಳು ರೂಪಗಳನ್ನು ಪ್ರಯೋಗಗಳನ್ನು ವಿಶೇಷವಾಗಿ ಹೋಲುತ್ತವೆ.

ಭಾಷೆ ಒಂದು ಅವಸ್ಥೆಯಿಂದ ಮತ್ತೊಂದು ಅವಸ್ಥೆಗೆ ದಿಢೀರನೆ ಬದಲಾಗುವುದಿಲ್ಲ ಅದಕ್ಕೆ ಕೆಲವು ಕಾಲ ಬೇಕಾಗುತ್ತದೆ. ಹಳೆಯ ಹಾಗೂ ಹೊಸ ಅಂಶಗಳು ಕೆಲಕಾಲ ಜೊತೆಯಲ್ಲಿದ್ದು ಕಾಲ ಕ್ರಮೇಣ ಹಳೆಯ ಅಂಶಗಳು ಮಾಯವಾಗುತ್ತಾ ಹೋಗುತ್ತವೆ. ಆದುದರಿಂದಲೇ ಭಾಷೆಯ ಒಂದು ಅವಸ್ಥೆಯನ್ನಾಗಲಿ ಅದು ಒಂದು ಅವಸ್ಥೆಯಿಂದ ಮತ್ತೊಂದು ಅವಸ್ಥೆಗೆ ಸಂದ ಕಾಲವನ್ನಾಗಲೀ ಗೆರೆ ಎಳೆದು ಗುರುತಿಸಲು ಸಾಧ್ಯವಿಲ್ಲ.

ಪೂರ್ವದ ಹಳಗನ್ನಡದ ವೈಲಕ್ಷಣಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

(1) ದ್ವಿತೀಯಾ ವಿಭಕ್ತಿ ಪ್ರತ್ಯಯ:'ಆನ್' ಎಂದು ಪ್ರಯೋಗವಾಗಿದೆ
ಉದಾ:-ದೇಗುಲಮಾನ್, ಇದಾನ್,ಕೋಟಿಯಾನ್.

(2) ಷಷ್ಠೀ ವಿಭಕ್ತಿ ಪ್ರತ್ಯಯ: 'ಆ' ಎಂದಿದೆ
ಉದಾ: ಕಲಾಚೋರನಾ, ಏಳನೆಯಾ, ದೇವನಾ

(3) ಸಪ್ತಮಿ ವಿಭಕ್ತಿ ಪ್ರತ್ಯಯ 'ಉಳ್' ಎಂದು ಪ್ರಯೋಗವಾಗಿದೆ.
ಉದಾ: ನಾಡುಳ್, ಕೆಱೆಯುಳ್

(4) ಅನುಸ್ವಾರಕ್ಕೆ ಬದಲಾಗಿ ಅನುನಾಸಿಕಗಳು ಬಳಕೆಯಾಗಿವೆ
ಉದಾ: ಅರಸನ್ಗೆ, ಮಹಾಪಾತ್ತಕನ್

(5) ರೇಫದಿಂದ ಕೂಡಿದ ವ್ಯಂಜನಾಕ್ಷರ ಒತ್ತಕ್ಷರವನ್ನು ಪಡೆಯುತ್ತದೆ
ಉದಾ: ಇರ್ವರ್, ಭಟ್ಟರ್ಗೆ

(6) ಗಮಕ ಸಮಾಸ ಮತ್ತು ಕರ್ಮಣಿ ಪ್ರಯೋಗಗಳು ಇಲ್ಲಿ ಕಂಡು ಬರುತ್ತವೆ.

(7) ಶಬ್ದ ರೂಪಗಳಲ್ಲಿಯೂ ವ್ಯತ್ಯಾಸ ಕಂಡು ಬರುತ್ತದೆ
ಉದಾ: ಬೆಟ್ಟ-ವೆಟ್ಟ, ಬಿತ್ತು-ವಿತ್ತು, ಬೆಳೆ-ವೆಳೆ

(8) ಪೂರ್ವದ ಹಳಗನ್ನಡದಲ್ಲಿ 'ಎ' ಕಾರ ಇದ್ದು ಅದು ಹಳಗನ್ನಡದಲ್ಲಿ 'ಇ'ಕಾರಕ್ಕೆ ಬದಲಾಗಿರುವುದನ್ನು ಗಮನಿಸಬಹುದು
ಉದಾ:ಎಱೆದು (ಇರಿದು)

ಮೇಲ್ಕಂಡ ಅಂಶಗಳಿಂದ ಹಳಗನ್ನಡಕ್ಕಿಂತ ಭಿನ್ನವಾದ ಒಂದು ಭಾಷಾ ಅವಸ್ಥೆ ಇದ್ದಿರಬಹುದೆಂದೂ ಅದನ್ನು ಪೂರ್ವದ ಹಳಗನ್ನಡವೆಂದು ಕರೆಯಬಹುದು ಎಂದು ಖಚಿತವಾಗಿ ಹೇಳಬಹುದು.

ಆ. ಹಳಗನ್ನಡ (ಕ್ರಿ.ಶ.800-1050)

ಕನ್ನಡದಲ್ಲಿ ಕ್ರಿ.ಶ. 800ರಿಂದ 1050ರ ಕಾಲಾವಧಿಯಲ್ಲಿ ಸಿಕ್ಕಿರುವ ಶಾಸನಗಳಿಂದ, ಕಾವ್ಯಗಳಿಂದ ಲಕ್ಷಣ ಗ್ರಂಥಗಳಿಂದ ಮತ್ತು ವ್ಯಾಕರಣಾ ಗ್ರಂಥಗಳಿಂದ ಹಳಗನ್ನಡ ಭಾಷೆಯ ಸ್ವರೂಪವನ್ನು ವಿವರವಾಗಿ ತಿಳಿಯಬಹುದಾಗಿದೆ.

ಉಪಲಬ್ಧ ಕೃತಿಗಳಲ್ಲಿ ಕವಿರಾಜಮಾರ್ಗ, ಕನ್ನಡದ ಚಂಪೂ ಕಾವ್ಯಗಳು, 2ನೇ ನಾಗವರ್ಮನ ಕಾವ್ಯಾವಲೋಕನ,ಕೇಶಿರಾಜನ ಶಬ್ದಮಣಿದರ್ಪಣ,ಹಾಗೂ ಕ್ರಿ.ಶ.9ರಿಂದ 11ನೇ ಶತಮಾನದ ನಡುವಿನ ಶಾಸನಗಳು ಹಳಗನ್ನಡ ಭಾಷೆಯ ಸ್ಥಿತಿಗತಿಗಳನ್ನು ತಿಳಿಯಲು ಅಧಿಕೃತ ಆಧಾರಗಳಾಗಿವೆ. ಹಳಗನ್ನಡ ಭಾಷೆಯ ವೈಲಕ್ಷಣಗಳು ಪೂರ್ವದ ಹಳಗನ್ನಡ ಹಾಗೂ ನಡುಗನ್ನಡ ಭಾಷೆಯ ವೈಲಕ್ಷಣಗಳೊಂದಿಗೆ ಹೋಲಿಸಿದಾಗ ಒಡೆದು ತೋರುತ್ತವೆ.ಅವುಗಳನ್ನು ಪ್ರತ್ಯೇಕವಾಗಿ ಹೇಳುವುದು ಸಮರ್ಪಕವಾಗಿಲ್ಲವಾದರೂ ಕೆಲವುಗಳನ್ನು ಈ ಕೆಳಕಂಡಂತೆ ಉಲ್ಲೇಖಿಸಬಹುದು.

(1)ಹಳಗನ್ನಡ ಭಾಷೆಯ ಶಬ್ದಗಳು ವ್ಯಂಜನಾಂತವಾಗಿರುತ್ತವೆ.
(2) ಹಳಗನ್ನಡದಲ್ಲಿ ಱ ೞ,ಕುಳ,ರೇಫೆ ಮತ್ತು ಸಕಟರೇಫಗಳು ಸ್ವತಂತ್ರ ವರ್ಣಗಳಾಗಿದ್ದವು.
(3) ದ್ವಿತೀಯಾ ವಿಭಕ್ತಿ ಪ್ರತ್ಯಯ'ಆನ್' ಎಂಬುದಾಗಿದೆ.
(4)ಷಷ್ಠಿ ವಿಭಕ್ತಿ ಪ್ರತ್ಯಯ 'ಅ' ಆಗಿದೆ.
(5)'ಏ' ಕಾರ 'ಒ' ಕಾರವಾಗುವುದು ಹಳಗನ್ನಡ ಕಾಲಕ್ಕಾಗಲೇ ಕಂಡು ಬರುತ್ತದೆ.

ಒಟ್ಟನಲ್ಲಿ ಕನ್ನಡ ಚಂಪೂ ಕಾವ್ಯಗಳ ಭಾಷೆ ಹಳಗನ್ನಡವಾಗಿದ್ದು, ಇಲ್ಲಿ ಕಂಡು ಬರುವ ಭಾಷಾ ಲಕ್ಷಣಗಳು ಈ ಸ್ಥಿತಿಗೆ ಒಪ್ಪುತ್ತವೆ.

(ಇ) ನಡುಗನ್ನಡ (ಕ್ರಿ.ಶ 1050-1800)

ಸಾಮಾನ್ಯವಾಗಿ ಹಾಡುಗಬ್ಬಗಳಾದ ರಗಳೆ, ಷಟ್ಪದಿ, ಸಾಂಗತ್ಯ ಕೃತಿಗಳ ಭಾಷೆಯನ್ನು ನಡುಗನ್ನಡವೆನ್ನಬಹುದು. ಹಳಗನ್ನಡ ಕ್ರಿ.ಶ.11ನೇ ಶತಮಾನದ ಉತ್ತರಾರ್ಧದ ವೇಳೆಗಾಗಲೇ ನಡುಗನ್ನಡವಾಗಿ ಮಾರ್ಪಾಡಾಗುತ್ತಿದ್ದುದ್ದಕ್ಕೆ ಸಾಕಷ್ಟು ಸೂಚನೆಗಳಿವೆ. ಸ್ಥೂಲವಾಗಿ ಕ್ರಿ.ಶ.12ನೇ ಶತಮಾನದ ಆದಿಭಾಗದಿಂದ 19ನೇ ಶತಮಾನದ ಆದಿಭಾಗದವರೆಗಿನ ನಡುವಿನ ಕಾಲವನ್ನು ನಡುಗನ್ನಡ ಕಾಲವೆನ್ನಬಹುದು.

ನಡುಗನ್ನಡ ಭಾಷೆಯ ವೈಲಕ್ಷಣಗಳನ್ನು ಹೀಗೆ ಕೆಳಕಂಡಂತೆ ನಿರೂಪಿಸಬಹುದು.

(1) ಹಳಗನ್ನಡ ವ್ಯಂಜನಾಂತ ಪದಗಳು ನಡುಗನ್ನಡದಲ್ಲಿ ಸ್ವರಾಂತವಾದವು
ಉದಾ: ಬಂದೆನ್-ಬಂದೆನು, ನೀನ್-ನೀನು ಬೆಮರ್-ಬೆಮರು ಇತ್ಯಾದಿ.

(2) ಹಳಗನ್ನಡ ಸಬಿಂದುಗಳು ನಡುಗನ್ನಡದಲ್ಲಿ ಅಬಿಂದುಗಳಾದವು
ಉದಾ: ಕೋಂಟೆ-ಕೋಟೆ, ತೋಂಟ-ತೋಟ, ಬೇಂಟೆ-ಬೇಟೆ

(3)'ಪ'ಕಾರ 'ಹ'ಕರವಾಗಿ 'ಮ' ಕಾರ 'ವ' ಕಾರವಾಗಿ ಮಾರ್ಪಟ್ಟಿವೆ.

ಉದಾ : ಪಾಲ್-ಹಾಲು, ಪೆಣ್-ಹೆಣ್ಣು, ತಾಮರೆ-ತಾವರೆ, ಬೆಮರ್-ಬೆವರು

(4) ಹಳಗನ್ನಡದ ಱ ೞ ಕುಳವಾಗಿ, ಶಕಟರೇಫ ಸಾಮಾನ್ಯ ರೇಫವಾಗಿದೆ.

ಉದಾ: ಆೞ್-ಆಳು, ಮೞೆ-ಮಳೆ

ಅಱಿ-ಅರಿ, ಮಱಿ-ಮರಿ

(8) ಹಳಗನ್ನಡದ 'ಲಾ'ಂತ ಪದಗಳು ಅಂತ್ಯ 'ಳ' ಪದಗಳಾದವು.

ಉದಾ: ಬೆರಲ್ -ಬೆರಳ್-ಬೆರಳು

ಕೊರಲ್-ಕೊರಳ್-ಕೊರಳು

ಮೇಲ್ಕಂಡ ಅಂಶಗಳು ಮಾತ್ರವಲ್ಲದೆ ಹಳಗನ್ನಡ ನಡುಗನ್ನಡವಾದಾಗ ಇನ್ನು ಎಷ್ಟೋ ಸೂಕ್ಷ್ಮ ವ್ಯತ್ಯಾಸಗಳೂ ವ್ಯಾಕರಣ, ಪ್ರಕ್ರಿಯೆಗಳು ಉಂಟಾಗಿವೆ. ಒಟ್ಟನಲ್ಲಿ ನಡುಗನ್ನಡ, ಹಳಗನ್ನಡ, ಹೊಸಗನ್ನಡವಾಗಿ ಕ್ರಮಕ್ರಮವಾಗಿ ಮಾರ್ಪಾಡುತ್ತಿದ್ದ ಸಂಧಿ ಕಾಲದ ಭಾಷೆಯಾದ್ದರಿಂದ ಅದರಲ್ಲಿ ಹಳಗನ್ನಡದ ಮತ್ತು ಹೊಸಗನ್ನಡದ ಭಾಷೆಯ ಮಿಶ್ರಣ ಕಂಡು ಬರುತ್ತದೆ.

(ಈ) ಹೊಸಗನ್ನಡ (1800-ಇತ್ತೀಚಿನವರೆಗಿನ)

ಈಗಿನ ಗದ್ಯ ಗ್ರಂಥಗಳ ಭಾಷೆಯನ್ನು ಸಾಮಾನ್ಯವಾಗಿ ಹೊಸಗನ್ನಡ ಎಂದು ಕರೆಯಬಹುದು. ನಡುಗನ್ನಡವೆಂದರೆ ಒಂದು ರೀತಿಯಲ್ಲಿ ಹಳಗನ್ನಡ ಮತ್ತು ಹೊಸಗನ್ನಡಗಳ ಮಿಶ್ರಣ. ಹೊಸಗನ್ನಡದಲ್ಲಿ ನಡುಗನ್ನಡದ ಎಷ್ಟೋ ವ್ಯಾಕರಣ ಪ್ರಕ್ರಿಯೆಗಳು ಹಾಗೆಯೇ ಉಳಿದು ಬಂದಿದೆ. ನಡುಗನ್ನಡದ ಅವಸ್ಥೆ ಸಂಧಿಕಾಲವಾದ್ದರಿಂದ ನಡುಗನ್ನಡ ಹಾಗೂ ಹೊಸಗನ್ನಡಗಳಿಗೆ ಇರುವ ವ್ಯತ್ಯಾಸವನ್ನು ಗೆರೆ ಎಳೆದಷ್ಟು ನಿಖರವಾಗಿ ಗುರುತಿಸುವುದು ಕಷ್ಟ. ಆದರೆ, ಹಳಗನ್ನಡ ಹೊಸಗನ್ನಡಗಳಿಗಿರುವ ವ್ಯತ್ಯಾಸವನ್ನು ಖಚಿತವಾಗಿ ಹೇಳಬಹುದು.

ನಡುಗನ್ನಡದ ಹೊತ್ತಿಗಾಗಲೇ ಕಂಡು ಬರುತ್ತಿದ್ದ ಬದಲಾವಣೆಗಳಲ್ಲಿ ವ್ಯಂಜನಾಂತ ಶಬ್ದಗಳು ಸ್ವರಾಂತವಾದುದ್ದು, ಸಬಿಂದುಗಳು ಅಬಿಂದುಗಳಾದದ್ದು, 'ಪ'ಕಾರ 'ಹ'ಕಾರವಾದುದು.ಲಾಂತಗಳು ಳಾಂತಗಳಾದದ್ದು, ಈ ಎಲ್ಲಾ ವ್ಯಾಕರಣ ಪ್ರಕ್ರಿಯೆಗಳು ಹೊಸಗನ್ನಡಕ್ಕೆ ಒಪ್ಪುತ್ತವೆ. ಜೊತೆಗೆ

(1) ಹಳಗನ್ನಡದ ವಿಜಾತಿಯ ಸಂಯುಕ್ತಾಕ್ಷರಗಳು ಹೊಸಗನ್ನಡದಲ್ಲಿ ಸಜಾತಿಯ ಸಂಯುಕ್ತಾಕ್ಷರಗಳಾಗಿ ಮಾರ್ಪಟ್ಟಿವೆ.

ಉದಾ: ಅೞ್ದು-ಅರ್ದು-ಅದ್ದು, ಗೞ್ದೆ-ಗರ್ದೆ-ಗದ್ದೆ, ಕರ್ವು-ಕರ್ಬು-ಕಬ್ಬು ಇತ್ಯಾದಿ.

(2) ಹಳಗನ್ನಡದ ಕೆಲವು ಪದಗಳು ಹೊಸಗನ್ನಡದಲ್ಲಿ ಅಕ್ಷರ ಪಲ್ಲಟವಾಗಿವೆ.

ಉದಾ: ಅಲರ್-ಅರಳು, ನೆಳಲ್-ನೆರಳು, ಅಸಗ-ಆಗಸ ಇತ್ಯಾದಿ.

(3) ಹಳಗನ್ನಡ ಪದಗಳ ಮಾದರಿ ಸ್ವರವು ಮುಂದಿನ ವ್ಯಂಜನದೊಂದಿಗೆ ಸೇರುತ್ತದೆ.

ಉದಾ: ಎಹಗೆ-ಹೇಗೆ, ಅಹಗೆ-ಹಾಗೆ ಇತ್ಯಾದಿ.

(4) ಹಳಗನ್ನಡ ಶಬ್ದಗಳ ಮೊದಲಲ್ಲಿ ಬರುವ 'ಏ'ಕಾರ'ಓ'ಕಾರಗಳು ಹೊಸಗನ್ನಡದಲ್ಲಿ ಕ್ರಮವಾಗಿ 'ಯ'ಕಾರ 'ವ' ಕಾರಗಳಾಗಿ ಪರಿವರ್ತಿತವಾಗಿವೆ.

ಉದಾ: ಏ-ಯ, ಏಕೆ-ಯಾಕೆ, ಬೇಡ-ಬ್ಯಾಡ, ಬೇನೆ-ಬ್ಯಾನೆ,

ಓ-ವ-ಕೋಪ-ಕ್ವಾಪ, ಓಟ-ವಾಟ, ದರೆ-ವಾರೆ, ತೋಟ-ತ್ವಾಟ

ಈ ಪ್ರಯೋಗಗಳು ಬರವಣಿಗೆ ಭಾಷೆಗಿಂತ ಆಡು ಮಾತಿನಲ್ಲೇ ವಿಶೇಷವಾಗಿ ಕಂಡು ಬರುತ್ತವೆ. ಯಾರು, ಯಾಕೆ, ಯಾತಕ್ಕೆ ಎಂಬ ರೂಪಗಳು ಇತ್ತೀಚೆಗೆ ಬರವಣಿಗೆಯಲ್ಲೂ ನುಸುಳಿವೆ.

(5) ಹೊಸಗನ್ನಡದಲ್ಲಿ ಕೆಲವು ಪದಗಳ ಅಂತ್ಯ ವ್ಯಂಜನವನ್ನು ಲೋಪ ಮಾಡಿ ಉಪಯೋಗಿಸುವುದುಂಟು.

ಉದಾ: ಮರವನ್ನು-ಮರವ, ರಾಮನು-ರಾಮ, ತಿಂದನು-ತಿಂದ, ಹೋದನು-ಹೋದ

(6) ಹಳಗನ್ನಡದ ವಿಭಕ್ತಿ ಪ್ರತ್ಯಯಗಳುಹೊಸಗನ್ನಡದಲ್ಲಿ ಈ ಕೆಳಕಂಡಂತೆ ಮಾರ್ಪಟ್ಟಿವೆ.

ವಿಭಕ್ತಿಗಳು	ಹಳಗನ್ನಡ	ಹೊಸಗನ್ನಡ
ಪ್ರಥಮ-ಮ್	ರಾಮನ-ಉ	ರಾಮನು
ದ್ವಿತೀಯ-ಅಮ್	ರಾಮನಂ-ಅನ್ನು	ರಾಮನನ್ನು
ತೃತೀಯ-ಇಮ್	ರಾಮನಿಂ-ಇಂದ	ರಾಮನಿಂದ
ಚತುರ್ಥ-ಗೆ.ಕ್ಕೆ	ರಾಮಂಗೆ-ಗೆಕ್ಕೆ	ರಾಮನಿಗೆ
ಪಂಚಮಿ-ಅತ್ತಣಿಂ	ರಾಮನತ್ತಣಿಂ-ದೆಸೆಯಿಂದ	ರಾಮನ ದೆಸೆಯಿಂದ
ಷಷ್ಠಿ-ಅ	ರಾಮನ-ಅ	ರಾಮನ
ಸಪ್ತಮಿ-ಒಳ್	ರಾಮನೊಳ್-ಅಲ್ಲಿ	ರಾಮನಲ್ಲಿ

ಚತುರ್ಥಿ ಮತ್ತು ಷಷ್ಠಿ ವಿಭಕ್ತಿ ಪ್ರತ್ಯಯಗಳು ಹಳಗನ್ನಡ ಕಾಲದಿಂದ ಬದಲಾಗದೇ ಹಾಗೆಯೇ ಉಳಿದಿದೆ.

ಹೊಸಗನ್ನಡ ಇಂದು ಸಂಕೀರ್ಣ ಹಾಗೂ ಆಧುನಿಕ ಅಭಿವ್ಯಕ್ತಿಗೆ ಅನುಗುಣವಾಗಿ ಗಮನಾರ್ಹವಾಗಿ ಬದಲಾಗುತ್ತಿದೆ. ಅಲ್ಲದೆ ಪ್ರಸಾರ ಮಾಧ್ಯಮಗಳು ಹೊಸಗನ್ನಡ ಭಾಷೆಯ ಮೇಲೆ ಸಾಕಷ್ಟು ಪರಿಣಾಮ ಬೀರಿವೆ.

ಕನ್ನಡದ ಉಪಭಾಷೆಗಳು :

ಕನ್ನಡದ ಉಪಭಾಷೆ ಬಗ್ಗೆ ಹೇಳುವುದಾದರೆ ಭೌಗೋಳಿಕವಾಗಿ ಸಾಕಷ್ಟು ವಿಸ್ತಾರವಾದ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಉಪಭಾಷೆಗಳಿರಬಹುದು. ಕವಿರಾಜ ಮಾರ್ಗಕಾರ ಶ್ರೀವಿಜಯ ಹೇಳುವ ದಕ್ಷಿಣ

ಮಾರ್ಗ ಮತ್ತು ಉತ್ತರ ಮಾರ್ಗಗಳು ಬಹುಶಃ ಅವನ ಕಾಲದ ಪ್ರಾದೇಶಿಕ ಭಾಷಾ ವೈಲಕ್ಷಣಗಳನ್ನು ಸೂಚಿಸುತ್ತಿರಬಹುದು.ಈಗಂತೂ ಕನ್ನಡದಲ್ಲಿ ಉಪಭಾಷೆಗಳು ಸ್ಪಷ್ಟವಾಗಿ ತೋರುತ್ತವೆ.

ಕನ್ನಡದಲ್ಲಿಪ್ರಧಾನವಾಗಿ ಮೂರು ಭಾಷೆಗಳನ್ನು ಗುರುತಿಸಬಹುದು ಅವುಗಳೆಂದರೆ :

(1) ಬೆಂಗಳೂರು-ಮೈಸೂರು ಕನ್ನಡ.

(2) ಧಾರವಾಡ ಕನ್ನಡ

(3) ಮಂಗಳೂರು ಕನ್ನಡ

ಇವುಗಳು ಜೊತೆಗೆ ಕೆಲವು ವಿದ್ವಾಂಸರು ಗುಲ್ಬರ್ಗಾ ಕನ್ನಡವನ್ನು ಸೇರಿಸುತ್ತಾರೆ. ಆದರೆ ಇದರ ಲಕ್ಷಣಗಳನ್ನು ಬಹುಮಟ್ಟಿಗೆ ಧಾರವಾಡ ಕನ್ನಡದಲ್ಲಿಯೇ ನೋಡಬಹುದು. ಒಟ್ಟಾರೆಯಾಗಿ ಕನ್ನಡದಲ್ಲಿ ಮೂರು ಭಾಷೆಗಳನ್ನುಹೆಸರಿಸಬಹುದಾದರೂ ಇವುಗಳ ಸಂಖ್ಯೆ ಇಷ್ಟೆಯಲ್ಲ. ಇಂತಿಷ್ಟೇ ಎಂದು ನಿರ್ಧರಿಸುವುದು ಬಹಳ ಕಷ್ಟದ ಸಂಗತಿ.

ಬೆಂಗಳೂರು-ಮೈಸೂರು ಕನ್ನಡ

ಬೆಂಗಳೂರು-ಮೈಸೂರು ಕನ್ನಡಗಳು ಹೆಚ್ಚು ಸಮೀಪದಲ್ಲಿದ್ದು ಹೆಚ್ಚಿನ ಸಾದೃಶ್ಯದಲಿವೆ. ಬೆಂಗಳೂರು ನಗರದ ಕನ್ನಡವು ಸುತ್ತಮುತ್ತಲಿನ ಹಳ್ಳಿಗಳ ಕನ್ನಡಕ್ಕಿಂತ ಬೇರೆಯಾಗಿದೆ.ಬೆಂಗಳೂರು ಕರ್ನಾಟಕದ ರಾಜಧಾನಿ. ಇಲ್ಲಿ ಸಮಾಜದ ಎಲ್ಲಾ ಅಂತಸ್ತುಗಳಿಗೆ ಸೇರಿದ ಜನರಿರುವಂತೆ ಎಲ್ಲಾ ಭಾಷೆಗಳನ್ನಾಡುವ ಜನರಿದ್ದಾರೆ.ಹಿಂದಿ,ಉರ್ದು, ಮರಾಠಿ ಮಾತ್ರವಲ್ಲದೆ, ತೆಲುಗು, ತಮಿಳು, ಮಲೆಯಾಳಿ ಮುಂತಾದ ದ್ರಾವಿಡ ಭಾಷೆಗಳನ್ನಾಡುವ ಮಂಗಳೂರಿನವರು ಇದ್ದಾರೆ. ಹೀಗಾಗಿ ಬೆಂಗಳೂರು ನಗರ ಪ್ರದೇಶದ ಕನ್ನಡ ಕಲಸುಮೇಲೋಗರವಾಗಿದೆ. ಆದ್ದರಿಂದ ಇದರ ವೈಶಿಷ್ಟ್ಯ ತಿಳಿಯುವುದು ಕಷ್ಟದ ಸಂಗತಿಯಾಗಿದೆ.ಆದರೂ ಬೆಂಗಳೂರು ಕನ್ನಡದ ಒಂದು ಪ್ರಮುಖ ವೈಶಿಷ್ಟ್ಯವೆಂದರೆ ಸಪ್ತಮಿ, ವಿಭಕ್ತಿ ಪ್ರತ್ಯಯ 'ಅಲ್ಲಿ' ಬದಲಿಗೆ 'ನಲ್ಲಿ' ಎಂದು ಬಳಕೆಯಾಗುತ್ತದೆ.

ಉದಾ: ಮನೆ+ಅಲ್ಲಿ-ಮನೆನಲ್ಲಿ,ಕೈ+ಅಲ್ಲಿ-ಕೈನಲ್ಲಿ.

ಮೈಸೂರು ಕನ್ನಡ ವಿಸ್ತಾರವಾದ ಪ್ರದೇಶದ ಜನರ ಭಾಷೆಯಾಗಿದೆ. ಮೈಸೂರು ಕನ್ನಡವೆಂದರೆ ಸ್ಥೂಲವಾಗಿ ಹಳೆಯ ಮೈಸೂರು ಸಂಸ್ಥಾನದ ಜಿಲ್ಲೆಗಳ ಜನರಾಡುವ ಭಾಷೆ ಎನ್ನಬಹುದು. ಈ ಪ್ರದೇಶದ ಆಡು ಮಾತಿನಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ವೈವಿಧ್ಯವಿದ್ದರೂ ಸಾಮಾನ್ಯವಾಗಿ ಏಕರೂಪತೆ ಕಂಡು ಬರುತ್ತದೆ.ಉತ್ತರ ಕರ್ನಾಟಕದ ಕನ್ನಡ ಮತ್ತು ಧಾರವಾಡ ಕನ್ನಡಕ್ಕೂ, ಮೈಸೂರು ಕಡೆಯ ಕನ್ನಡಕ್ಕೂ ಬಹಳಷ್ಟು ವ್ಯತ್ಯಾಸವಿದೆ.ಈ ವ್ಯತ್ಯಾಸ ಉಚ್ಚಾರಣೆ ಮತ್ತು ಬರವಣಿಗೆ ಎರಡರಲ್ಲೂ ಕಂಡು ಬರುತ್ತದೆ.

(1) ಬಹುಮಟ್ಟಿಗೆ ಮೈಸೂರು ಕನ್ನಡದ 'ಎ' ಕಾರಂತ ಪದಗಳು ಧಾರವಾಡದ ಕಡೆ 'ಇ' ಕಾರಂತವಾಗುತ್ತವೆ.

ಉದಾ:ಮನೆ-ಮನಿ, ಶಾಲೆ-ಶಾಲಿ, ಆನೆ-ಆನಿ, ಅತ್ತೆ-ಅತ್ತಿ ಇತ್ಯಾದಿ.

(2) ಚತುರ್ಥ ವಿಭಕ್ತಿ ಪ್ರತ್ಯಯಗಳಾದ ಕೆ,ಗೆ, ಗಳು ಉತ್ತರ ಕರ್ನಾಟಕದ ಕಡೆ 'ಗಿ' ಆಗಿ ಮಾರ್ಪಡುತ್ತವೆ.

ಉದಾ: ಅವರಿಗೆ-ಅವರಿಗಿ, ಮನೆಗೆ-ಮನಿಗಿ ಇತ್ಯಾದಿ.

(3) ಮೈಸೂರು ಕನ್ನಡದ 'ಉ' ಕಾರಂತ ಪದಗಳು ಧಾರವಾಡ ಕನ್ನಡದಲ್ಲಿ 'ಅ' ಕಾರಂತಗಳಾಗುತ್ತವೆ.

ಉದಾ: ಕಾಲೇಜು-ಕಾಲೇಜ್, ಮಗಳು-ಮಗಳ, ಊರು-ಊರ, ಕಾಳು-ಕಾಳ.

(4) ಮೈಸೂರು ಕನ್ನಡದ 'ಏ' ಕಾರ ಧಾರವಾಡ ಕನ್ನಡದಲ್ಲಿ 'ಯ' ಕಾರವಾಗಿ ಪರಿಣಮಿಸುತ್ತದೆ.

ಉದಾ: ಬೇನೆ-ಬ್ಯಾನೆ, ಹೆಂಡತಿ-ಹ್ಯಾಂಡತಿ, ಏನ-ಯಾನ.

ಮಂಗಳೂರು ಕನ್ನಡ

ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಂಡು ಬರುವ ಉಪಭಾಷೆಯನ್ನು ಮಂಗಳೂರು ಕನ್ನಡವೆನ್ನಬಹುದು. ಮಂಗಳೂರು ನಗರ ಬೆಂಗಳೂರಿನಂತೆ ಹಲವು ಭಾಷೆಗಳ ಕೇಂದ್ರ. ಇಂಗ್ಲಿಷ್, ಕನ್ನಡ, ತುಳು, ಕೊಂಕಣಿ ಇವು ಇಲ್ಲಿನ ಪ್ರಮುಖ ಭಾಷೆಗಳು.ಈ ಭಾಷೆಗಳನ್ನಾಡುವ ಜನ ಅಲ್ಲಿ ಹೆಚ್ಚು ಕಡಿಮೆ ಸಮ ಪ್ರಮಾಣದಲ್ಲಿ ಇದ್ದಾರೆ.

ಮಂಗಳೂರು ಪ್ರಾಂತ್ಯವು ಕರ್ನಾಟಕದ ಏಕೀಕರಣಕ್ಕೆ ಮೊದಲು ಮದ್ರಾಸ್ ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿತ್ತು.ಆದ್ದರಿಂದ ಅಲ್ಲಿನ ಕನ್ನಡ ತಮಿಳು ಭಾಷೆಯಿಂದಲೂ ಪ್ರಭಾವಿತವಾಗಿದೆ.ಮಂಗಳೂರು ಉಪಭಾಷೆಯ ಬರವಣಿಗೆ ಅಥವಾ ಗ್ರಾಂಥಿಕ ಭಾಷೆಗೆ ಹತ್ತಿರವಾದುದು. ಅದಕ್ಕೆ ಪ್ರತ್ಯೇಕವಾದ ಉಚ್ಚಾರಣೆಯೂ ಉಂಟು.ಮಂಗಳೂರು ಪ್ರದೇಶದ ಕನ್ನಡ ಭಾಷೆಯಲ್ಲಿ ಕೆಲವು ಭಾಗಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಕಂಡು ಬಂದರೂ ಒಟ್ಟಿಗೆ ಏಕರೂಪತೆ ಕಾಣುತ್ತದೆ.ಅಲ್ಲಿನ ಹವ್ಯಕ ಬ್ರಾಹ್ಮಣರ ಕನ್ನಡವೇ ಕನ್ನಡದ ಮತ್ತೊಂದು ಉಪಭಾಷೆ ಎಂದು ಗುರುತಿಸಲು ಅರ್ಹವಾಗಿದೆ. ಇದನ್ನು 'ಹವ್ಯಕ ಕನ್ನಡ'ವೆಂದೇ ಕರೆಯುವುದು ವಾಡಿಕೆ. ಹವ್ಯಕದ ಕನ್ನಡದಲ್ಲಿ ಚಿಕ್ಕಮಕ್ಕಳಿಂದ ಹಿಡಿದು ಮುದುಕರವರೆಗೆ ಹೆಂಗಸರೂ ಸೇರಿದಂತೆ ಎಲ್ಲರನ್ನು ಏಕವಚನದಲ್ಲೇ ಸಂಬೋಧಿಸುತ್ತಾರೆ.ಹೆಂಗಸರನ್ನು ಅವಳು ಎಂದು ನಿರ್ದೇಶಿಸದೇ ಅದು ಎಂದು ಹೇಳುತ್ತಾರೆ.ಇಲ್ಲಿ ದ್ರಾವಿಡ ಲಿಂಗ ವಿವಕ್ಷೆಯ ಕುರುಹನ್ನು ಕಾಣಬಹುದು. ಆದರೆ ಹೆಂಗಸರು ತಮ್ಮ ಗಂಡಂದಿರಿಗೆ ಬಹುವಚನವನ್ನೇ ಬಳಸುತ್ತಾರೆ. ಮೈಸೂರು ಕಡೆಯ 'ಹೌದು' ಎಂಬ ಶಬ್ದ ಅಲ್ಲಿ 'ಉಂಟು' ಎಂದು ಪ್ರಯೋಗವಾಗುತ್ತದೆ.ಸಂಭಾಷಣೆಯಲ್ಲಿ ಮಾರಾಯ, ಮಾರಾಯ್ರೇ,ರಾಯರೇ ಎಂಬ ಮಾತು ಅಧಿಕವಾಗಿ ಕೇಳಿಬರುತ್ತದೆ.

ಧಾರವಾಡ ಕನ್ನಡ

ದಕ್ಷಿಣ ಕರ್ನಾಟಕದ ಉಪಭಾಷೆಯನ್ನು ವಾಡಿಕೆಗಾಗಿ ಮೈಸೂರು ಕನ್ನಡ ಎಂದು ಕರೆದಂತೆ, ಉತ್ತರ ಕರ್ನಾಟಕದ ಕನ್ನಡವನ್ನು ಧಾರವಾಡ ಕನ್ನಡ ಎಂದು ಕರೆಯುವುದು ರೂಢಿಯಾಗಿದೆ. ಧಾರವಾಡದಿಂದ ಬೆಳಗಾಂ ಮತ್ತು ಸೊಲ್ಲಾಪುರದ ಕಡೆಗೆ ಹೋದರೆ ಕನ್ನಡ ಭಾಷೆಯ ಪದಗಳು ಕಡಿಮೆಯಾಗುತ್ತಾ ಮರಾಠಿ ಪದಗಳು ಹೆಚ್ಚುತ್ತಾ ಹೋಗುತ್ತದೆ. ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಕನ್ನಡ ನುಡಿಯ ಮೇಲೆ ಉರ್ದುಭಾಷೆಯ ಪ್ರಭಾವ ಹೆಚ್ಚಾಗಿ ಕಾಣುತ್ತದೆ. ಹೊಸಪೇಟೆ, ಬಳ್ಳಾರಿಯ ಕಡೆ ಹೋದರೆ ತೆಲುಗು ಭಾಷೆಯ ಪ್ರಭಾವವನ್ನು ಗುರ್ತಿಸಬಹುದು.

ಧಾರವಾಡ ಕನ್ನಡದಲ್ಲಿ ಹಿಂದೆ ನೋಡಿರುವ ವೈಶಿಷ್ಟ್ಯಗಳ ಜೊತೆಗೆ ಇನ್ನೂ ಕೆಲವು ವಿಶೇಷ ಅಂಶಗಳನ್ನು ಗುರುತಿಸಬಹುದು. ಮೈಸೂರು ಕಡೆಯಲ್ಲಿ 'ಅಮ್ಮಾ' ಎಂಬುದು ತಾಯಿ ಎಂಬ ಅರ್ಥವನ್ನು ಹೊಂದಿರುವುದರ ಜೊತೆಗೆ ಸ್ತ್ರೀಯರ ಬಗೆಗಿನ ಗೌರವದ ಸಂಬೋಧನೆಯೂ ಆಗಿದೆ. ಆದರೆ ಧಾರವಾಡದ ಕಡೆ 'ಅಮ್ಮಾ' ಎಂದರೆ 'ವಿಧವೆ' ಎಂದರ್ಥವಾಗುತ್ತದೆ. ಹಾಗೆಯೇ 'ತಿಂಡಿ' ಎಂಬ ಪದಕ್ಕೆ ಉತ್ತರ ಕರ್ನಾಟಕದಲ್ಲಿ 'ತೀಟೆ' ಎಂಬ ಅರ್ಥವಿದೆ. ಅಲ್ಲದೆ 'ಕಷ್ಟ' ಎಂಬ ಪದಕ್ಕೆ ಈ ಪ್ರದೇಶದಲ್ಲಿ 'ಕ್ಷೌರ' ಎಂಬ ಅರ್ಥವಿದೆ. ಷಷ್ಠಿ ವಿಭಕ್ತಿ ಪ್ರತ್ಯಯ ಉತ್ತರ ಕರ್ನಾಟಕದ ಕಡೆ ತನ್ನ ಮೂಲ ರೂಪವನ್ನು ಕಳೆದುಕೊಂಡು ಮತ್ತೊಂದು ರೂಪದಲ್ಲಿ ಕೂಡಿರುವುದು ಗೋಚರವಾಗುತ್ತದೆ.

ಉದಾ: ದನದ-ದನೀನ, ಕುದುರೆಯ-ಕುದುರೀನ ಇತ್ಯಾದಿ

ಕೆಲವು ಪದಗಳ ನಡುವೆ ಬಿಂದು ಒಂದು ಅನುನಾಸಿಕ ಉಚ್ಚಾರಣೆ ಉಂಟಾಗುತ್ತದೆ.

ಉದಾ: ಕವಿ-ಕಿಂವಿ, ಅವನು-ಅಂವ್ನ ಇತ್ಯಾದಿ.

ಬಹುವಚನ ಪ್ರತ್ಯಯ 'ಗಳು' ಅಲ್ಲಿ 'ಗೋಳು' ಆಗುತ್ತದೆ.

ಉದಾ: ಅಯ್ಯಗಳು-ಅಯ್ಯಗೋಳು, ದನಗಳು-ದನಗೋಳು ಇತ್ಯಾದಿ.

ಅಲ್ಲದೆ ಬಂದಿತು, ಉಂಟಾಯಿತು, ಮುಂತಾದ ಕ್ರಿಯಾ ಪದಗಳಿಗೆ ಕ್ರಮವಾಗಿ ಬರ್ತ್ತು, ಹತ್ತಿತು ಎಂಬ ಕ್ರಿಯಾ ರೂಪಗಳು ಬರುತ್ತವೆ.

ಹೀಗೆ ಮೈಸೂರು ಕನ್ನಡಕ್ಕೂ ಧಾರವಾಡ ಕನ್ನಡಕ್ಕೂ ಅರ್ಥವ್ಯತ್ಯಾಸ ಮತ್ತು ಧ್ವನಿ ವ್ಯತ್ಯಾಸಗಳಲ್ಲಿ ವೈಶಿಷ್ಟ್ಯವಿರುವುದನ್ನು ಕಾಣಬಹುದು.

ಹೀಗೆ ಕನ್ನಡ ಭಾಷೆಯಲ್ಲಿ ಪ್ರಮುಖವಾಗಿ ಮೂರು ಉಪಭಾಷೆಗಳಿದ್ದು, ಕೆಲವು ಸೂಕ್ಷ್ಮ ವ್ಯತ್ಯಾಸಗಳನ್ನು ಹೊಂದಿವೆ. ಕಾಲಕ್ರಮೇಣ ನೂರಾರು ವರ್ಷಗಳ ನಂತರ ವ್ಯತ್ಯಾಸಗಳೇ ಪ್ರಬಲವಾಗಿ ಮತ್ತೊಂದು ಉಪಭಾಷೆ ಸೃಷ್ಟಿಯಾಗಬಹುದಾಗಿದೆ.

ಕನ್ನಡ ವರ್ಣಮಾಲೆ

ಕನ್ನಡ ಭಾಷೆಯ ವರ್ಣಮಾಲೆಯಲ್ಲಿ ಪ್ರಸ್ತುತದಲ್ಲಿ 49 ಅಕ್ಷರಗಳಿವೆ. ಅವುಗಳಲ್ಲಿ 13 ಸ್ವರಗಳು 25 ವರ್ಗೀಯ ವ್ಯಂಜನಗಳು. ಈಗ ರೂಢಿಯಲ್ಲಿ ಇರುವಂತೆ ಕನ್ನಡ ವರ್ಣಮಾಲೆ ಇಂತಿದೆ.

ಸ್ವರಗಳು

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

ವರ್ಗೀಯ ವ್ಯಂಜನಗಳು

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಅವರ್ಗೀಯ ವ್ಯಂಜನಗಳು

ಯ ರ ಲ ವ ಶ ಷ ಸ ಹ ಳ

ವರ್ಗೀಯ ವ್ಯಂಜನಗಳಲ್ಲಿ 20 ಸ್ಪರ್ಶಗಳು 5 ಅನುನಾಸಿಕಗಳೂ ಸೇರಿದ್ದು ಅವನ್ನು ಐದೈದರ ಐದು ಗುಂಪುಗಳಾಗಿ ವಿಂಗಡಿಸಲಾಗಿದೆ.

ಕಂಠ್ಯ ವರ್ಣಗಳು	- ಕ್ ಖ್ ಗ್ ಘ್ ಙ
ತಾಲವ್ಯ ವರ್ಣಗಳು	- ಚ್ ಛ್ ಜ್ ಝ್ ಞ್
ಮೂರ್ಧನ್ಯ ವರ್ಣಗಳು	- ಟ್ ಠ್ ಡ್ ಢ್ ಣ್
ದಂತ್ಯ ವರ್ಣಗಳು	- ತ್ ಥ್ ದ್ ಧ್ ನ್
ಓಷ್ಠ್ಯ ವರ್ಣಗಳು	- ಪ್ ಫ್ ಬ್ ಭ್ ಮ್

ಇವುಗಳಲ್ಲಿ ಙ ಞ್ ಣ್ ನ್ ಮ್-ಇವು ಅನುನಾಸಿಕಗಳು ಉಳಿದ ವ್ಯಂಜನಗಳನ್ನು ವರ್ಗವಾಗಿ ಸೇರಿಸಲು ಸಾಧ್ಯವಿಲ್ಲವಾದ್ದರಿಂದ ಅವನ್ನು ಅವರ್ಗೀಯ ವ್ಯಂಜನಗಳು ಎಂದು ಕರೆಯಲಾಗುತ್ತದೆ. ಅವುಗಳು ಭಿನ್ನ ಭಿನ್ನ ಸ್ಥಾನಗಳಲ್ಲಿ ಹುಟ್ಟತಕ್ಕಂತಹವು ಅವುಗಳಲ್ಲಿ,

ಮಧ್ಯ ವರ್ಣಗಳು - ಯ ರ ಲ ವ ಳ

ಊಷ್ಮ ವರ್ಣಗಳು - ಶ ಷ ಸ ಹ.

ಕನ್ನಡ ವರ್ಣಮಾಲೆ ತೆಲುಗು ವರ್ಣಮಾಲೆಯಂತೆ ಸಂಸ್ಕೃತ ವರ್ಣಮಾಲೆಯನ್ನು ಅನುಕರಿಸಿದೆ. ಕೇಶಿರಾಜ ಕನ್ನಡದಲ್ಲಿ ಒಟ್ಟು 57 ವರ್ಣಗಳನ್ನು ಮೊದಲು ಹೇಳಿ ಅನಂತರ ಅವುಗಳಲ್ಲಿ 10 ವರ್ಣಗಳು

ಕನ್ನಡದಲ್ಲಿ ರೂಢಿಯಲ್ಲಿಲ್ಲವೆಂದು ಅವನೇ ಕಳೆದುಬಿಡುತ್ತಾನೆ. ಹೀಗಾಗಿ 25 ವರ್ಗೀಯ ವ್ಯಂಜನಗಳು 14 ಸ್ವರಗಳು, 9 ಅವರ್ಗೀಯ ವ್ಯಂಜನಗಳು, 4 ಯೋಗವಾಹಗಳು ಮತ್ತು 5 ದೇಸಿಯ ವರ್ಣಗಳು. ಒಟ್ಟು 57 ವರ್ಣಗಳಲ್ಲಿ 10 ವರ್ಣಗಳನ್ನು, 4 ಯೋಗವಾಹಗಳು, 4 ಸ್ವರಗಳು ಹಾಗೂ 3 ವ್ಯಂಜನಗಳು ತೆಗೆದುಬಿಡುವುದರಿಂದ ಉಳಿಯುವ 47 ವರ್ಣಗಳೇ ಅಚ್ಚಗನ್ನಡ ವರ್ಣಗಳೆಂದು ಅವನ ಅಭಿಪ್ರಾಯ.

ಕನ್ನಡ ಲಿಪಿ :-

ಭಾರತೀಯ ಲಿಪಿಶಾಸ್ತ್ರದ ಚರಿತ್ರೆಯಲ್ಲಿ ಅಶೋಕನ ಬ್ರಾಹ್ಮೀಲಿಪಿಯಿಂದ ಪ್ರಾರಂಭವಾಗಿ ಇಂದಿನ ಭಾರತೀಯ ಲಿಪಿಗಳವರೆಗೂ ನಾವು ಅನೇಕ ಹಂತಗಳನ್ನು ಕಾಣುತ್ತೇವೆ. ಕನ್ನಡ ಲಿಪಿಯು ಆಶೋಕನ ಬ್ರಾಹ್ಮೀಲಿಪಿಯಿಂದ ಉಗಮವಾಯಿತೆಂದು ತಿಳಿಯಲಾಗಿದೆ. ಅಂದರೆ ಅಶೋಕನ ಬ್ರಾಹ್ಮೀಲಿಪಿಯು ಕಾಲಕ್ರಮದಲ್ಲಿ ಸಾತವಾಹನ, ಕದಂಬ, ಗಂಗ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ ಮುಂತಾದ ರಾಜಮನೆತನಗಳ ಕಾಲದಲ್ಲಿ ಬದಲಾವಣೆ ಹೊಂದಿ ಇಂದಿನ ಕನ್ನಡ ಲಿಪಿಯಾಗಿ ಪರಿವರ್ತಿತವಾಯಿತು. ಕಾಲದಿಂದ ಕಾಲಕ್ಕೆ ಲಿಪಿ ಬದಲಾವಣೆಗಳು ಉಂಟಾದವು. ಈ ಬದಲಾವಣೆಯು ಲಿಪಿಯಲ್ಲಿ ಉಂಟಾಗಿ ಲಿಪಿಯ ವಿಕಾಸಕ್ಕೆ ದಾರಿ ಮಾಡಿಕೊಟ್ಟವು.

ಅಖಂಡ ಭಾರತಕ್ಕೆ ವ್ಯಾಪ್ತವಾದ ಒಂದು ಮಾದರಿಯ ಲಿಪಿಯು ಬಳಕೆಯಲ್ಲಿ ಇಲ್ಲದೇ ಹೋದುದು. ಲಿಪಿಯ ಬದಲಾವಣೆಗೆ ಹೆಚ್ಚು ಅವಕಾಶವನ್ನು ಕೊಟ್ಟಿತು. ಒಂದು ಅಕ್ಷರವನ್ನು ಉತ್ತರದ ಗಡಿಯಲ್ಲಿ ಒಂದು ರೀತಿ ಬರೆದರೆ, ದಕ್ಷಿಣದಲ್ಲಿ ಅದೇ ಅಕ್ಷರವನ್ನು ಬೇರೆ ರೀತಿಯಲ್ಲಿ ಬರೆಯುತ್ತಿದ್ದರು.[೪] ಉದಾಹರಣೆಗೆ ಅಶೋಕನ ಬ್ರಾಹ್ಮೀಲಿಪಿಯಲ್ಲಿ 'ಮ' ಎಂಬ ಅಕ್ಷರವು ಎರಡು ಅಥವಾ ಮೂರು ವಿಧಗಳಲ್ಲಿ ಬರೆದಿರುವುದನ್ನು ಕಾಣಬಹುದು. ಉತ್ತರದ ಬ್ರಾಹ್ಮೀ ಲಿಪಿಗೂ ದಕ್ಷಿಣದ ಬ್ರಾಹ್ಮೀ ಲಿಪಿಗೂ ಇರುವ ಅನೇಕ ವ್ಯತ್ಯಾಸಗಳು ನಮ್ಮ ಗಮವನ್ನು ಸೆಳೆಯುತ್ತವೆ. ಈಗ ನಮ್ಮಲ್ಲಿ ಮುದ್ರಣದ ಸೌಕರ್ಯವಿರುವುದರಿಂದ ಎಲ್ಲಾ ಅಕ್ಷರಗಳೂ ಸ್ಥಿರರೂಪಗಳನ್ನು ಹೊಂದಿವೆ ಎಂದು ಹೇಳಬಹುದು. ಆದರೆ ಪ್ರಾಚೀನ ಭಾರತದಲ್ಲಿ ಒಂದು ಸ್ಥಿರ ಮಾದರಿಯ ಸೌಲಭ್ಯವಿಲ್ಲದಿರುವುದರಿಂದ ಲಿಪಿಯು ಬದಲಾವಣೆ ಹೊಂದುತ್ತಾ ಹೋಯಿತು.

'ಅ' ಅಕ್ಷರವು ವಿವಿಧ ರಾಜಮನೆತನಗಳ ಅಡಿಯಲ್ಲಿ ಯಾವ ರೀತಿ ಹಂತ ಹಂತವಾಗಿ ಬೆಳೆದು ಬಂದಿದೆಯೆಂಬುದನ್ನು ಈ ಕೆಳಗಿನ ಮೂಲಕ ತಿಳಿಯಬಹುದು.

ಅಶೋಕನ ಕಾಲದ ಅ ಅಕ್ಷರದ ರೂಪಕ್ಕೂ ಈಗಿನ ಕಾಲದ ರೂಪಕ್ಕೂ ಯಾವ ವಿಧವಾದ ಹೋಲಿಕೆಯೂ ಕಂಡುಬರುವುದಿಲ್ಲ. ಅಶೋಕನ ಕಾಲದಲ್ಲಿ ಮೂರು ರೇಖೆಗಳಿಂದ ಕೂಡಿದ ಈ ಅಕ್ಷರವು ಸಾತವಾಹನರ ಕಾಲದಲ್ಲಿ ಸ್ವಲ್ಪ ಬದಲಾವಣೆ ಹೊಂದಿ, ಚೌಕ ತಲೆಯುಳ್ಳ ಈ ಅಕ್ಷರವು ಕದಂಬರ ಕಾಲದಲ್ಲಿ ಸ್ವಲ್ಪ ಮಟ್ಟಿಗೆ ದುಂಡಗಾಗುವ ಪ್ರವೃತ್ತಿಯನ್ನು ತಾಳುತ್ತದೆ. ರಾಷ್ಟ್ರಕೂಟರ ಕಾಲದಲ್ಲಿ ಇದು ಪ್ರತ್ಯೇಕ ರೂಪವನ್ನೇ ತಾಳಿ ಈಗಿನ ರೂಪಕ್ಕೆ ಅತಿ ಸಮೀಪವಾಗಿ ತೋರುತ್ತದೆ. ಮುಂದೆ ಇದೇ ರೂಪವೇ

ಅಭಿವೃದ್ಧಿ ಹೊಂದಿ ಹೊಯ್ಸಳ, ವಿಜಯನಗರ ಕಾಲದಲ್ಲಿ ಮತ್ತಷ್ಟು ಗುಂಡಗಾಗಿ 18ನೇ ಶತಮಾನದಲ್ಲಿ ಮೈಸೂರು ಅರಸರ ಕಾಲಕ್ಕೆ ಈಗಿರುವ ರೂಪದಲ್ಲಿ ಸ್ಥಿರಗೊಳ್ಳುತ್ತದೆ. ಹೀಗೆ ಎಲ್ಲಾ ಅಕ್ಷರಗಳೂ ಸಹ ವಿವಿಧ ಹಂತಗಳಲ್ಲಿ ಬದಲಾವಣೆ ಹೊಂದುತ್ತಾ ಬಂದವು ಎಂದು ಹೇಳಬಹುದು. ಕನ್ನಡ ಲಿಪಿಗೂ ತೆಲುಗು ಲಿಪಿಗೂ ಅಂತಹ ಹೆಚ್ಚು ವ್ಯತ್ಯಾಸಗಳೇನೂ ಇಲ್ಲ. ರಚನೆಯಲ್ಲಿ ಈ ಎರಡೂ ಭಾಷೆಗಳ ಲಿಪಿಗಳು ಒಂದನ್ನೊಂದು ಹೋಲುತ್ತವೆ. ಕ್ರಿ.ಶ.1500ರವರೆಗಂತೂ ಕನ್ನಡ ಮತ್ತು ತೆಲುಗು ಅಕ್ಷರಗಳು ಹಿಂದೇ ಬಗೆಯಾಗಿದ್ದವು. ಆದರೆ ಕ್ರಿ.ಶ.1500ರ ಈಚೆಗೆ ಮಾತ್ರ ನಿಧಾನವಾಗಿ ನಾವು ಈ ವ್ಯತ್ಯಾಸವನ್ನು ಕಾಣುತ್ತೇವೆ. ಈ ಎರಡು ಭಾಷೆಗಳೂ ಸಂಸ್ಕೃತ ವರ್ಣಮಾಲೆಯನ್ನೇ ಆದರ್ಶವಾಗಿಟ್ಟುಕೊಂಡಿದ್ದರಿಂದ ಇವುಗಳಲ್ಲಿಯ ಸ್ವರಾಭಿವೃದ್ಧಿ ಪರಿಪೂರ್ಣವಾಗಿದೆ.

ಕನ್ನಡ ವ್ಯಾಕರಣ

1) ನಾಮಪದ :-

ಅರ್ಥ ಸ್ಫುರಿಸುವ ಕನಿಷ್ಠತಮ ಘಟಕವನ್ನು ಪದಗಳೆಂದು ಕರೆಯುವುದಾದರೆ, ಆ ಪದಗಳು ಪ್ರತಿಯೊಂದು ತನ್ನ ಮಟ್ಟಿಗೆ ಅರ್ಥದ ದೃಷ್ಟಿಯಿಂದ ಪೂರ್ಣವಾಗುತ್ತವೆ. ಆದರೆ ಪ್ರಯೋಗದ ದೃಷ್ಟಿಯಿಂದ ಪ್ರತ್ಯೇಕ ಪದಗಳಿಂದ ಭಾವನೆಗಳನ್ನು ಪರಿಣಾಮಕಾರಿಯಾಗಿ ಹೊರಹಾಕಲು ಸಾಧ್ಯವಿಲ್ಲ. ಆಗ ತಮ್ಮ ಅಭಿಪ್ರಾಯವನ್ನು ಇನ್ನೊಬ್ಬರಿಗೆ ಸ್ಪಷ್ಟವಾಗಿ ತಿಳಿಸಲು ವಾಕ್ಯರಚನೆ ನಡೆಯುತ್ತದೆ. ಇಂಥ ವಾಕ್ಯದಲ್ಲಿ ನಾಮಪದಗಳು, ಕ್ರಿಯಾಪದಗಳು ಹಾಗೂ ಅವುಗಳ ಪರಸ್ಪರ ಸಂಬಂಧವನ್ನು ವಿಭಕ್ತಿಗಳು ನಿರ್ವಹಿಸುತ್ತವೆ. ಮೊದಲಿಗೆ ನಾಮಪದವನ್ನು ಹೇಳುವುದಾದರೆ ನಾಮಪದ ವಾಕ್ಯದಲ್ಲಿದ್ದಾಗ ಲಿಂಗ ವಿಭಕ್ತಿಗಳಿಂದ ಕೂಡಿರುತ್ತದೆ.

ಉದಾ:	ಶಂಕರನಿಗೆ	-ಈ ಪದ ಪುಲ್ಲಿಂಗ, ಏಕವಚನ, ಚತುರ್ಥಿ ವಿಭಕ್ತಿ ಎಂಬುದು ವೇದ್ಯ.
	ಹೆಂಗಸರಿಂದ	-ಸ್ತ್ರೀಲಿಂಗ, ಬಹುವಚನ, ತೃತೀಯಾ ವಿಭಕ್ತಿ.
	ಜನರನ್ನು	- ನಪುಂಸಕಲಿಂಗ, ಬಹುವಚನ, ದ್ವಿತೀಯಾ ವಿಭಕ್ತಿ.

ಹೀಗೆ ಈ ನಾಮಪದಗಳನ್ನು ಅವು ಸೂಚಿಸುವ ವಸ್ತು ವಿಷಯಗಳಿಗೆ ಅನುಸಾರವಾಗಿ ರೂಢನಾಮ, ಅಂಕಿತನಾಮ, ಭಾವನಾಮ ಮತ್ತು ಅನ್ವರ್ಥನಾಮ ಎಂಬುದಾಗಿ ನಾಲ್ಕು ವಿಭಾಗ ಮಾಡಿದ್ದಾರೆ. ಹಳಗನ್ನಡದಲ್ಲಿ ಕೇಶಿರಾಜ ಮೂರು ತೆರನಾದ ನಾಮಪದಗಳನ್ನು ''ರೂಢನಾಮಂ ಪ್ರಸಿದ್ಧ ತರಮಾಗಿರ್ಪುದು,ಅನ್ವರ್ಥನಾಮ ಗುಣಕ್ಕರ್ಥಂ, ಅಂಕಿತನಾಮ ಪೆಸರನಿಡುವನ ಇಷ್ಟದಿಂ --ಇರ್ಪುದು ಎಂದು ಹೇಳುತ್ತಾನೆ''.

ನಾಮಪದದಲ್ಲಿ ಲಿಂಗ -ವಚನ :-

ಕನ್ನಡದಲ್ಲಿ ವಚನಗಳಲ್ಲಿ ಸೂಚಿಸುವ ಪ್ರತ್ಯಯಗಳೇ ಲಿಂಗವನ್ನು ಸೂಚಿಸುತ್ತವೆ.

ವಚನಗಳು:-

ಕನ್ನಡದಲ್ಲಿ ಏಕವಚನ ಬಹುವಚನಗಳಲ್ಲದೆ ದ್ವಿವಚನವು ಉಂಟು ಎಂದು ಕೇಶಿರಾಜಾದಿಗಳು ಅಭಿಪ್ರಾಯ ಪಡುತ್ತಾರೆ.

ಒಂದು ವಸ್ತುವನ್ನು ನಿರ್ದೇಶಿಸುವುದು ಏಕವಚನವೆಂದು ಕರೆಯುತ್ತಾರೆ.

ಉದಾ:- ಮರ, ಲಕ್ಷ್ಮಣ, ಲಕ್ಷ್ಮೀ ಇತ್ಯಾದಿ

ಎರಡು ವಸ್ತುಗಳನ್ನು ನಿರ್ದೇಶಿಸುವುದು ದ್ವಿವಚನವೆಂತಲೂ ಕರೆಯುತ್ತಾರೆ.

ಉದಾ:-ಕಣ್ಣುಗಳು, ಕಾಲುಗಳು, ಅವಳಿಗಳು ಇತ್ಯಾದಿ.

ಎರಡಕ್ಕಿಂತ ಹೆಚ್ಚು ವಸ್ತು ನಿರ್ದೇಶನಗಳಾದ ಜನ, ಹಸು-ಕರುಗಳು, ಪ್ರಾಣಿಗಳು ಇತ್ಯಾದಿ ಬಹುವಚನವೆಂತಲೂ ಅಭಿಪ್ರಾಯವಿತ್ತು. ಆದರೆ ದ್ವಿವಚನ ದ್ರಾವಿಡ ಭಾಷೆಯ ಜಾಯಮಾನಕ್ಕೆ ಒಗ್ಗಿ ಬರುವುದಿಲ್ಲ. ಅಲ್ಲಿಯೂ ಬಹುವಚನ ಪ್ರತ್ಯಯವಾದ 'ಗಳು ' ಶಬ್ಧ ಹತ್ತಿಯೇ ದ್ವಿವಚನ ವಾಗುವುದು. ಹೀಗೆ ಮಾಡುತ್ತಾ ಹೋದರೆ ತ್ರಿವಚನ ಚತುರ್ವಚನ ಇತ್ಯಾದಿ ಪಟ್ಟಿ ಬೆಳೆಸುತ್ತಾ ಹೋಗಬಹುದು. ಆದ್ದರಿಂದ ಕನ್ನಡದಲ್ಲಿ ದ್ವಿವಚನ ಇಲ್ಲ.ಏಕವಚನ ಮತ್ತು ಬಹುವಚನಗಳು ಮಾತ್ರ ಪ್ರಚಲಿತದಲ್ಲಿವೆ.

ಕನ್ನಡದಲ್ಲಿ ಮಹತ್ -ಅಮಹತ್ ಶಬ್ದಗಳು ಭೇದವನ್ನು ಕಾಣುತ್ತೇವೆ. ಮನುಷ್ಯರನ್ನು ಕುರಿತವು ಮಹತ್ ಶಬ್ದಗಳು ಅಲ್ಲಿ ಬಹುವಚನವನ್ನು ಏಕವ್ಯಕ್ತಿಗೂ ಗೌರವ ಸೂಚಕವಾಗಿ ಬಳಸುತ್ತಾರೆ.

ಉದಾ:- ನಮ್ಮ ಅಣ್ಣನವರು, ನಮ್ಮ ತಂದೆಯವರು, ಪೂಜ್ಯಪಾದ ಮಹಾಸ್ವಾಮಿಗಳು,
ಮಹಾರಾಜರವರು ಇತ್ಯಾದಿ.

ಆದರೆ ಅಮಹತ್ ವಸ್ತುಗಳಾದ ಪ್ರಾಣಿಗಳು , ಮಕ್ಕಳು , ವಸ್ತು ಇವು ಬಹುವಚನವಾಗಿದ್ದರೂ ಏಕವಚನ ಪ್ರತ್ಯಯ ಪ್ರಯೋಗವಾಗುವುದು.

ಉದಾ:- ಮಕ್ಕಳ ಗುಂಪೇ ನೋಡುವುದು. ಊರಿನ ಜನರೆಲ್ಲಾ ಸೇರಿತು, ಕುರಿಗಳ ಹಿಂಡೇ ಮೇಯುತ್ತಿದೆ.

ಲಿಂಗ ವಿಚಾರ:-

ಕನ್ನಡದಲ್ಲಿ 'ಲಿಂಗವು ಒಂಬತ್ತು ತೆರನಾಗಿರುತ್ತದೆ' ಎಂಬುದಾಗಿ ಕೇಶಿರಾಜನೇ ಹೇಳಿದ್ದಾನೆ. ಇಲ್ಲಿ ಸಂಸ್ಕೃತ ವ್ಯಾಕರಣದ ಲಿಂಗ ವ್ಯವಸ್ಥೆ ಆಧರಿಸಿ ಕನ್ನಡದಲ್ಲೂ ಹೇಳ ಹೊರಟಿರುವುದೇ ಈ ಗೊಂದಲಕ್ಕೆ ಕಾರಣವಾಗಿದೆ. ನಮ್ಮ ಭಾಷೆಯ ಜಾಯಮಾನಕ್ಕೆ ತಕ್ಕುದಾದ ಹಾಗೂ ನಮ್ಮ ವ್ಯವಹಾರಕ್ಕೆ ಅಗತ್ಯವಾದ ಲಿಂಗಗಳು ಮೂರೇ. ಪುಲ್ಲಿಂಗ, ಸ್ತ್ರೀಲಿಂಗ ಹಾಗೂ ನಪುಂಸಕ ಲಿಂಗ. ವಾಸ್ತವವಾಗಿ ಕನ್ನಡ ಶಬ್ದದ ಲಿಂಗ ಯಾವುದು ಎಂಬುವುದನ್ನು ಅರ್ಥದ ಆಧಾರದಿಂದ ಮಾತ್ರ ಗ್ರಹಿಸಬಹುದು. ಸಾಮಾನ್ಯವಾಗಿ ಪುರುಷರನ್ನು ಕುರಿತಾದವು ಪುಲ್ಲಿಂಗ, ಸ್ತ್ರೀಯರನ್ನು ಕುರಿತವು ಸ್ತ್ರೀ ಲಿಂಗ ಮಿಕ್ಕೆಲ್ಲವೂ ನಪುಂಸಕ ಲಿಂಗ ಎಂದು ವಿಂಗಡಿಸುವುದು ವಾಡಿಕೆಯಾಗಿದೆ.

ಆದರೆ ದ್ರಾವಿಡ ಭಾಷೆಯಲ್ಲಿ ಮಹತ್ ಮತ್ತು ಅಹಮತ್ ಎಂದು ಬುದ್ಧಿ ಪ್ರಧಾನ ವಿವೇಚನೆ ಇರುವುದರಿಂದ, ಬುದ್ಧಿ ಬೆಳೆಯದ ಮಗುವನ್ನು ಅದು ಹೆಣ್ಣಾಗಿರಲಿ, ಗಂಡಾಗಿರಲಿ,ಪ್ರಾಣಿ ವಸ್ತುವಿನಂತೆಯೇ ಸಂಬೋಧಿಸುತ್ತಾರೆ.

ಉದಾ:- ಸುಶೀಲೆಗೆ ಗಂಡು ಮಗು ಹುಟ್ಟಿತು

ಆ ಹೆಣ್ಣು ಮಗು ಬಹಳ ಸುಂದರವಾಗಿದೆ

ತೆಲುಗಿನಲ್ಲಿ ಹೆಣ್ಣನ್ನು ಹೇಳುವಾಗ ಅದಿ (ಅದು) ಎಂದು ಹೇಳುವುದು ವಾಡಿಕೆ. ಕನ್ನಡದಲ್ಲೂ ಹೆಣ್ಣನ್ನು ತಿರಸ್ಕಾರವಾಗಿ ನುಡಿಯುವಾಗ ನಪುಂಸಕಲಿಂಗವಾಗಿಯೇ ಹೇಳುವುದುಂಟು.

ಉದಾ:- ನನ್ನ ಹೆಂಡತಿ ಒಂದು ಪೆದ್ದಿ ಅದಕ್ಕೇನೂ ತಿಳಿಯುವುದಿಲ್ಲ.

ಈಗಿನ ಕನ್ನಡದ ಲಿಂಗ ವಾಚಕ ಶಬ್ದದಲ್ಲಿ ಗೊಂದಲವಿದೆ.

ಉದಾ:- ನಿರ್ಮಲನನ್ನು ಸುಂದರೇಶನಿಗೆ ಕೊಟ್ಟು ಮದುವೆ ಮಾಡಿದರು.

ಇಲ್ಲಿ ಸ್ತ್ರೀಲಿಂಗ ಪುಲ್ಲಿಂಗಕ್ಕೆ ಒಂದೇ ರೀತಿಯ ಲಿಂಗ ಪ್ರತ್ಯಯ ಹತ್ತಿರುವುದನ್ನು ಕಾಣುತ್ತೇವೆ. ಹಾಗೆಯೇ ''ಶ್ರೀನಿವಾಸಮೂರ್ತಿಯನ್ನು ನೋಡಿ ಬಹಳ ದಿನವಾಯಿತು, ಮನೆಯನ್ನು ಚೆನ್ನಾಗಿ ಕಟ್ಟಿದ್ದಾರೆ'- ಇಲ್ಲೂ ಕೂಡ ಪುಲ್ಲಿಂಗ ನಪುಂಸಕಲಿಂಗ ಎರಡಕ್ಕೂ 'ಯನ್ನು' ಎಂಬ ಒಂದೇ ಲಿಂಗ ಪ್ರತ್ಯಯ ಸೇರಿದೆ. ಆದರೆ ವಾಸ್ತವವಾಗಿ ಶ್ರೀನಿವಾಸಮೂರ್ತಿ, ನಿರ್ಮಲ ಇಂಥ ಪದಗಳು ಸಂಸ್ಕೃತದವು, ಮೂಲ ಕನ್ನಡದವುಗಳಲ್ಲ. ಅದು ದ್ರಾವಿಡವಾಗಿದ್ದಲ್ಲಿ ಶ್ರೀನಿವಾಸನ್ ಎಂದೋ, ನಿರ್ಮಲಮ್ಮಾಳ್, ನಿರ್ಮಲಮ್ಮ ಎಂದೋ ಇರಬೇಕಾಗಿತ್ತು. ಈಗಲೂ ತಮಿಳಿನಲ್ಲಿ ಸ್ತ್ರೀ ಲಿಂಗ,ಪುಲ್ಲಿಂಗ ಶಬ್ದಗಳನ್ನು ಕರಾರುವಾಕ್ಕಾಗಿ ಬಳಸುವುದನ್ನು ಕಾಣುತ್ತೇವೆ.

ಉದಾ:- ರಾಮನ್, ವೇಣುಗೋಪಾಲನ್, ಕಮಲಂಬಾಳ್, ಅಮ್ಮಾಳ್ ಇತ್ಯಾದಿ.

ವಿಭಕ್ತಿ :-

ಕನ್ನಡ ನಾಮಪದಗಳಿಗೆ ಎಂಟು ವಿಭಕ್ತಿಗಳೆಂದೂ, ಆ ವಿಭಕ್ತಿಗೆ ತಕ್ಕಂತೆ ಪ್ರತ್ಯೇಕ ವಿಭಕ್ತಿ ಪ್ರತ್ಯಯಗಳು ಇವೆಯೆಂಬುದು ನಮ್ಮ ಪ್ರಾಚೀನ ವೈಯಾಕರಣಿಕರ ಅಭಿಪ್ರಾಯ. ಆದರೆ ಆಧುನಿಕ ವಿದ್ವಾಂಸರು ಈ ಅಭಿಪ್ರಾಯವನ್ನು ನಿರಾಕರಿಸಿ ಹೀಗೆ ಹೇಳುತ್ತಾರೆ. ಕನ್ನಡದಲ್ಲಿ ಪ್ರಥಮ ವಿಭಕ್ತಿಗೆ ಪ್ರತ್ಯೇಕ ಸ್ಥಾನ ಇಲ್ಲ. ಏಕೆಂದರೆ ಪ್ರಕೃತಿಯೇ ವಿಭಕ್ತಿಯ ಸ್ಥಾನದಲ್ಲಿದ್ದು ಕಾರ್ಯವನ್ನು ನಿರ್ವಹಿಸುತ್ತಿವೆ. ಹಳಗನ್ನಡದಲ್ಲಿ ರಾಮಂ, ಭೀಮಂ, ಮರಂ, ಇತ್ಯಾದಿ ರೂಪಗಳನ್ನು ಕಂಡರೆ ನಡುಗನ್ನಡದಲ್ಲಿ ಅವು ರಾಮನು , ಭೀಮನು , ಮರವು, ಎಂಬ ರೂಪದಲ್ಲಿ ಕಾಣ ಸಿಗುತ್ತವೆ. ಇಂದು ಪ್ರಥಮಾ ವಿಭಕ್ತಿ ವಿಕಲ್ಪ ರೂಪವಾಗಿದೆ. ಹಾಗೆಯೇ ಪಂಚಮಿ ವಿಭಕ್ತಿ ಕನ್ನಡದಲ್ಲಿ ಸಹಜವಾಗಿಲ್ಲ. ಹುಲಿಯ ದೆಸೆಯಿಂದ , ರಾಮನ ದೆಸೆಯಿಂದ ಈ ರೂಪ ಇಂದು ಪ್ರಯೋಗದಲ್ಲಿಲ್ಲ. ಅದರ ಕಾರ್ಯವನ್ನು ತೃತೀಯಾದ 'ಇಂದ' ಎಂಬ ಪದವೇ ನಿರ್ವಹಿಸುತ್ತದೆ. ಸಂಬೋಧನಾ ವಿಭಕ್ತಿ ಕನ್ನಡದಲ್ಲಿ ಪ್ರತ್ಯೇಕವಾಗಿಲ್ಲ.

ಕ್ರಿಯಾಪದ :-

ಒಂದು ನಾಮಪದ ಪಡೆಯುವ ಕ್ರಿಯಾರ್ಥವನ್ನು ತಿಳಿಸುವ ಶಬ್ದಗಳು ಧಾತುಗಳು ಎಂದೂ, ಆ ಧಾತುಗಳಿಗೆ ಸೇರುವ ಪ್ರತ್ಯಯಗಳಿಗೆ ಅಖ್ಯಾತ ಪ್ರತ್ಯಯಗಳು ಎಂದು ಹೆಸರು ಇವುಗಳಿಗೆ 'ಅಮರೆಯಿರೆನೆವು' ಎಂಬ ಅಖ್ಯಾತ ಪ್ರತ್ಯಯಗಳು ಸೇರುತ್ತವೆ ಎಂದು ಕೇಶಿರಾಜ ಹೇಳುತ್ತಾನೆ. ಇಲ್ಲಿ ಉತ್ತಮ ಪುರುಷದಲ್ಲಿ ಎನ್ , ಎಮ್, ಎಂದೂ ಬರುತ್ತದೆ.

ಉದಾ:- ಮಾಡುವೆನ್ , ಮಾಡುವೆಮ್

ಮಧ್ಯಮ ಪುರುಷದಲ್ಲಿ ಅಯ್ , ಇರ್ ಎಂಬ ರೂಪವೂ ಬರುತ್ತವೆ.

ಉದಾ:- ಮಾಡುವೆಯ್ , ಮಾಡುವಿರ್

ಪ್ರಥಮ ಪುರುಷದಲ್ಲಿ ಅಳ್, ಅನ್, ಅರ್, ರೂಪವೂ ಬರುತ್ತದೆ.

ಉದಾ:- ಮಾಡುವಳ್ , ಮಾಡವನ್ , ಮಾಡುವರ್

ಮೂಲತಃ ನೊ, ಬೆ, ಮಿ, ತರ್ , ಕೊಲ್ ಮೊದಲಾದ ರೂಪದಲ್ಲಿರುವ ಧಾತುಗಳಿಗೆ ಭೂತಕಾಲದಲ್ಲಿ 'ದ' ಸೇರುತ್ತದೆ. ಆಗ ನೊಂದ , ಬೆಂದ , ಮಿಂದ, ಮುಂತಾದ ರೂಪಗಳಾಗುತ್ತವೆ. ಇಲ್ಲಿ ಕೆಲವೊಮ್ಮೆ ಸಂದರ್ಭೋಚಿತವಾಗಿ ಲೋಪ , ಆಗಮ , ಆದೇಶ ಸಂಧಿಗಳಾಗುವುದುಂಟು.

ಕ್ರಿಯಾಪದಗಳು ಮೂಲ ರೂಪದಲ್ಲಿ ವಿದ್ಯರ್ಥಕವಾಗಿಯೂ ಇರುತ್ತದೆ. ವಿದ್ಯರ್ಥಕದಲ್ಲಿ ಆಜ್ಞೆ ಮಾಡುವುದು , ಆಶೀರ್ವಾದ, ವಿಜ್ಞಾಪನೆಗಳೂ ಇರುತ್ತವೆ.

ಉದಾ:- ಕುಡಿ , ತಿನ್ನು , ಇರಿ, ಪೋಗು, ನಿಮಗೆಲ್ಲ ಒಳಿತಕ್ಕೆ ಇತ್ಯಾದಿ.

ವಿಶೇಷಾರ್ಥಕ ಕ್ರಿಯಾಪದ ರೂಪು ತಾಳುವಾಗ ಧಾತುಗಳ ಆದಿಸ್ವರ ದೀರ್ಘವಾಗುವುದುಂಟು.

ಉದಾ:-ತರ್ -ತಾರೆನ್ , ಬರ್ -ಬಾರೆನ್

ಹೀಗೆ ಹಳೆಗನ್ನಡದ ಕ್ರಿಯಾಪದದ ಮೂಲ ಧಾತುಗಳು ಲಿಂಗ, ವಚನಗಳು ಸ್ಪಷ್ಟವಾಗಿ ಸೂಚಿಸುವುದರ ಜೊತಗೆ ವಿಧಿ ನಿಷೇಧಗಳನ್ನು ತೆರೆದು ತೋರುತ್ತವೆ. ಮೂಲತಃ ಒಂದು ಭಾಷೆಯಲ್ಲಿರುವ ಕ್ರಿಯಾಪದದ ಧಾತುರೂಪಗಳೇ ಆ ಭಾಷೆಯ ಮೂಲಸತ್ವವನ್ನು ತೆರೆದು ತೋರುತ್ತವೆ.

ಉದಾ:- ಸಾಯ್,ಬೇಯ್, ಕೊಯ್ ಮುಂತಾದ ಕ್ರಿಯಾಪದಗಳಿಗೆ ಪ್ರತ್ಯಯಗಳನ್ನು ಹಚ್ಚಿ ಶಬ್ದಗಳನ್ನಾಗಿ ಮಾಡಿಕೊಳ್ಳುತ್ತವೆ.

ಸರ್ವನಾಮಗಳು:-

ಒಂದು ಭಾಷೆಯ ಸರ್ವನಾಮಗಳು ಸಾಮಾನ್ಯವಾಗಿ ತಮ್ಮ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಬರುತ್ತವೆ. ಅವುಗಳಲ್ಲಿ ಕೆಲವು ರೂಪಾಂತರಗಳಾದರೂ ಸ್ಥಿರವಾಗಿರುವ ಸಂದರ್ಭಗಳೇ ಹೆಚ್ಚು. ಈ ಸರ್ವನಾಮವನ್ನು ಕನ್ನಡದಲ್ಲಿ ಉತ್ತಮ ಪುರುಷ, ಮಧ್ಯಮ ಪುರುಷ, ಪ್ರಥಮ ಪುರುಷ ಎಂದು

ವಿಂಗಡಿಸುತ್ತಾರೆ. ಕೇಶಿರಾಜ ಅದು, ಇದು, ಅದು , ಅವುದು, ಎಲ್ಲದು, ಪೆರತು, ಏನ್, ಪೆರದು, ಎಂಬ ಎಂಟು ಸರ್ವನಾಮಗಳನ್ನು ಹೇಳುತ್ತಾನೆ.

1.ಉತ್ತಮ ಪುರುಷ ಸರ್ವನಾಮ:-

ಹಳಗನ್ನಡದಲ್ಲಿ ಏಕ ಮತ್ತು ಬಹುವಚನಗಳ ಆನ್, ಆಮ್, ಎಂಬ ರೂಪದಲ್ಲಿದ್ದರೆ, ನಡುಗನ್ನಡದಲ್ಲಿ ನಾನ್ , ನಾಮ್ ಎಂಬ ರೂಪದಲ್ಲಿ ಕಾಣುತ್ತೇವೆ. ಹೊಸಗನ್ನಡದಲ್ಲಿ ಅದಕ್ಕೆ 'ಉ' ಕಾರ ಸೇರಿಕೊಂಡು ನಾನು, ನಾವು ಎಂದು ಹೇಳುತ್ತೇವೆ. ಕೆಲವು ಸಂದರ್ಭದಲ್ಲಿ ನಾನು ಎಂಬುದು'ನಾ' (ನಾ ಬರುವುದಿಲ್ಲ) ಎಂದೂ ಬಳಕೆಯಾಗುವುದುಂಟು.

2.ಮಧ್ಯಮ ಪುರುಷ ಸರ್ವನಾಮ :-

ಹಳಗನ್ನಡದಲ್ಲಿ ನೀನ್, ನೀವ್ ಎಂದಿದ್ದರೆ ಹೊಸಗನ್ನಡದಲ್ಲಿ ನೀನು, ನೀವು ಎಂದೂ, ಆಡುಮಾತಿನಲ್ಲಿ ನೀನು ಎಂಬುದಕ್ಕೆ ಬದಲು ನೀ ಎಂದೂ ಪ್ರಯೋಗವಾಗುವುದುಂಟು.

3.ಪ್ರಥಮ ಪುರುಷ ಸರ್ವನಾಮ:-

ಆತನ್ , ಈತನ್ , ಅವಳ್, ಇವಳ್, ಆತ, ಆಕೆ ಇತ್ಯಾದಿ ಪದಗಳು ಪ್ರಥಮ ಪುರುಷ ಸರ್ವನಾಮಗಳು. ಹಳಗನ್ನಡದಲ್ಲಿ ಆತನ್,ಈತನ್, ಊತನ್, ಊಕೆ, ಅದು, ಇದು, ಮುಂತಾದ ಪ್ರಯೋಗಗಳಿರುವುದನ್ನು ಕೇಶಿರಾಜ ಹೇಳುತ್ತಾನೆ. ಆದರೆ ಹೊಸಗನ್ನಡಲ್ಲಿ ಊಕೆ, ಊತನ್ ಎಂಬ ಪ್ರಯೋಗ ಇಲ್ಲ. ಉದು ಎಂಬುದು ಕ್ರಿಯಾಪದದಲ್ಲಿ ಮಾಡುವುದು, ಮಾಡುವುವು ಹೀಗೆ ಪ್ರಯೋಗವಾಗುತ್ತದೆ. ಕನ್ನಡ ಸರ್ವನಾಮಗಳಲ್ಲಿ ಪ್ರಶ್ನಾರ್ಥಕ, ಸಂಬಂಧಾರ್ಥಕ ಎಂಬುದಾಗಿ ಮತ್ತೆ ವೈವಿಧ್ಯ ಗುರುತಿಸುತ್ತಾರೆ. ಪ್ರಶ್ನಾರ್ಥಕ ಸರ್ವನಾಮಗಳಾದ ಏನ್, ಏಕೆಗಳು ಹಾಗೆಯೇ ಬಳಕೆಯಲ್ಲಿವೆ. ಅದರೊಂದಿಗೆ ಯಾಕೆ ಎಂಬ ರೂಪವು ಬಳಕೆಯಲ್ಲಿದೆ. ಹಳಗನ್ನಡದ ಆರ್ , ಆವನ್, ಆವಳ್, ಇವು ಯಾರ್, ಯಾವಳ್, ಯಾವನ್ ಎಂಬ ರೂಪದಲ್ಲಿ ಪ್ರಯೋಗವಾಗುತ್ತಿವೆ. ಕೆಲವೆಡೆ ಈ ರೂಪವು ಹಿಂದಿನಿಂದಲೂ ದೊರೆತಿದ್ದು ಯಾವುದು ಪ್ರಾಚೀನ ಎಂಬುವುದರ ಬಗ್ಗೆ ಸಂದೇಹವಿದೆ.

ಸಂಖ್ಯಾವಾಚಕ :-

ಕನ್ನಡದಲ್ಲಿ ಸಂಖ್ಯಾವಾಚಕಗಳಾದ ಹನ್ನೊಂದು ಶಬ್ದಗಳಿವೆ. ಒಂದರಿಂದ ಹತ್ತನ್ನು ನಿರ್ದೇಶಿಸುವ ಶಬ್ದಗಳು ಹಾಗೂ ನೂರು ಎಂಬ ಪದ. ಉಳಿದ ಸಮಸ್ತ ಪದಗಳು, ಸಾವಿರ, ಲಕ್ಷ, ಕೋಟಿ, ಇತ್ಯಾದಿ ಸಂಸ್ಕೃತದ ತದ್ಭವವಾಗಿದೆ 1ರಿಂದ 10 ರವರೆಗಿನ ಸಂಖ್ಯಾವಾಚಕಗಳು ದ್ರಾವಿಡ ಮೂಲದವೇ ಆಗಿದೆ.

ಒಂಭತ್ತು ಎಂಬ ಸಂಖ್ಯಾವಾಚಕ ಒಂದು ಸಂಯುಕ್ತ ಪದ. ಒನ್+ಪತ್ತು = ಒಂಭತ್ತು ಆಗಿದೆ. ಇದರರ್ಥ ಒಂದು ಕಡಿಮೆಯಾಗಿ ಹತ್ತು ಎಂಬ ಅರ್ಥ ಎಂದು ವ್ಯಾಖ್ಯಾನ ಮಾಡಿದೆ.

ಸಂಖ್ಯಾವಾಚಕ ಶಬ್ದಗಳು ಮೂಲರೂಪ ಪ್ರತ್ಯಯಗಳನ್ನು ಹೊಂದಿ ಪುರುಷ ವಾಚಕವೂ ಆಗುತ್ತದೆ. ಹಾಗೇ ಪ್ರತ್ಯಯ ಸೇರುವಾಗ 'ವ'ಕಾರಾಗಮವೂ ಆಗುವುದು.

ಉದಾ:- ಒರ್ವನ್, ಇರ್ವರ್, ಮೂವರ್, ನೂರ್ವರ್ ಇತ್ಯಾದಿ. ನಾಲ್ವರು, ಐವರು ಇದರ ನಂತರ ಸಂಖ್ಯಾವಾಚಕಕ್ಕೆ ಪ್ರತ್ಯಯ ಸೇರಿಸುವುದಿಲ್ಲ. ಆಗ ಜನ, ಮಂದಿ ಎಂಬ ಶಬ್ದ ಸೇರಿಸಿ ಆರುಜನ, ಎಂಟು ಜನ,ಹತ್ತು ಮಂದಿ ಹೀಗೆ ಹೇಳುತ್ತಾ ಹೋಗುತ್ತಾರೆ. ಇಂಥ ಅಥವಾ ಇಷ್ಟರ ಸಂಖ್ಯೆ ಎಂದು ಹೇಳುವಾಗ ಹಳಗನ್ನಡದಲ್ಲಿ 'ಮಡಿ' ಶಬ್ದ ಬಳಕೆ ಆಗುತ್ತಿತ್ತು. ಇಮ್ಮಡಿ, ಮುಮ್ಮಡಿ, ನಾಲ್ವಡಿ. ಇಂದು ಈ ಕಾರ್ಯವನ್ನೂ ''ಅನೆಯ'' ಎಂಬ ಶಬ್ದ ನಿರ್ವಹಿಸುತ್ತದೆ. ಒಂದನೆಯ, ಮೂರನೆಯ, ನಾಲ್ಕನೆಯ ಇತ್ಯಾದಿ. ಹಳಗನ್ನಡದ ಒರ್ಮೆ,ಇರ್ಮೆ, ಸಾಸಿರ್ಮೆ ಇಂಥ ಪದಗಳಲ್ಲಿ ಇಂದು ಒರ್ಮೆ ಪದ ಒಂದೇ, ಒಮ್ಮೆ ಎಂಬ ರೂಪದಿಂದ ಬಳಕೆಯಲ್ಲಿದೆ. ಅಸ್ಪಷ್ಟ ಸಂಖ್ಯೆಯನ್ನು ಹೇಳುವಾಗ ಹತ್ತಾರು, ಏಳೆಂಟು, ನೂರಿನ್ನೂರು ಮುಂತಾಗಿ ಹೇಳುವುದೂ ಉಂಟು. ಹೀಗೆ ಸಂಖ್ಯಾ ವಾಚಕಗಳು ಭಾಷೆಯ ಮೂಲ ಸ್ವರೂಪವನ್ನು ತಿಳಿಸುತ್ತವೆ. ಅವು ತಮ್ಮ ಜಾತಿಯ ಭಾಷೆಗಳೊಡನೆ ಸಾಮ್ಯವನ್ನು, ಇತರ ಭಾಷೆಗಳೊಡನೆ ವ್ಯತ್ಯಾಸವನ್ನು ಒಡೆದು ತೋರುತ್ತದೆ.

ಉದಾ:-

ಕನ್ನಡ	ತಮಿಳ್	ತೆಲುಗು,	ಸಂಸ್ಕೃತ	ಇಂಗ್ಲಿಷ್	ಲ್ಯಾಟಿನ್
ಮೂರು	ಮೂನು	ಮೂಡು	ತ್ರಯ	Three	Three
ಹತ್ತು	ಪತ್ತು	ಹತ್ತು	ದಶ	Ten	Ten
ಆರು	ಆರು	ಆರು	ಷಟ್	six	six

ಶಬ್ದಕೋಶ:-

ಕನ್ನಡದ ಮೂಲಭೂತ ಶಬ್ದಕೋಶ ದೇಶೀಯ ಅಥವಾ ದ್ರಾವಿಡವೇ ಆಗಿದೆ. ಜೊತೆಗೆ ಅದು ಇಂಡೋ-ಆರ್ಯನ್‌ನಿಂದ ವಿಶೇಷವಾಗಿ ಸಂಸ್ಕೃತದಿಂದ ಬಹು ಸಂಖ್ಯೆಯ ಶಬ್ದಗಳನ್ನು ಸ್ವೀಕರಿಸಿದೆ. ಸಂಸ್ಕೃತದಂತೆಯೇ ಪ್ರಾಕೃತ, ಮರಾಠಿ, ಹಿಂದೂಸ್ತಾನಿ, ಅರೆಬಿಕ್, ಪೋರ್ಚುಗೀಸ್ ಇವೇ ಮೊದಲಾದ ಭಾಷೆಗಳಿಂದಲೂ ಆಧುನಿಕ ಕಾಲದಲ್ಲಿ ವಿಶೇಷವಾಗಿ ಇಂಗ್ಲಿಷ್‌ನಿಂದಲೂ ಕನ್ನಡವು ಬಹು ಸಂಖ್ಯೆಯಲ್ಲಿ ಪದಗಳನ್ನು ಸ್ವೀಕರಿಸಿವೆ. ಕನ್ನಡವು ಆಧುನೀಕೃತಗೊಳ್ಳಲು ಇಂಗ್ಲಿಷ್ ಬಹುಮಟ್ಟಿಗೆ ಕಾರಣ. ತಾಂತ್ರಿಕ ಹಾಗೂ ವೈಜ್ಞಾನಿಕ ಬರಹಗಳಲ್ಲಿ ಇಂಗ್ಲಿಷ್ ಪದಗಳನ್ನು ಅನುವಾದಿಸಿ ಕೆಲವೊಮ್ಮೆ ಅಲ್ಪ ಮಾರ್ಪಾಟನೊಂದಿಗೆ ಸ್ವೀಕರಿಸಲಾಗುತ್ತಿದೆ.

ಹೀಗೆ ಹೊಸ ಹೊಸ ಪದಗಳನ್ನು ಕಾಲಕಾಲಕ್ಕೆ ಸೇರಿಸಿಕೊಂಡ ಕನ್ನಡಕೋಶದ ಹಾದಿ ಸುದೀರ್ಘವಾಗಿಯೇ ಇದೆ. ಜೀವಂತ ಭಾಷೆ ಬೆಳೆಯುವುದು ಅನಿವಾರ್ಯ; ಅವಶ್ಯಕ, ಅದೇ ರೀತಿಯಲ್ಲಿ ಕನ್ನಡ ಭಾಷೆಯೂ ಕೂಡ ಕೇವಲ ಮಡುಗಟ್ಟಿಕೊಂಡು ನಿಂತ ನೀರಿನ ಹಾಗಿರದೆ ಕಾಲಕಾಲಕ್ಕೆ ಹೊಸ ಹೊಸ ದಾರಿಯನ್ನು ಕಂಡುಕೊಳ್ಳುತ್ತಿದೆ.

ತೆಲುಗು ಭಾಷೆ:-

ಪಂಚ ದ್ರಾವಿಡ ಭಾಷೆಗಳಲ್ಲಿ ತೆಲುಗು ಭಾಷೆಯ ಪ್ರಮುಖ ಸ್ಥಾನವನ್ನು ಪಡೆದಿದೆ. ಇದು ಆಂಧ್ರಪ್ರದೇಶದ ಅಧಿಕೃತ ಭಾಷೆಯಾಗಿದ್ದು, ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಈ ತೆಲುಗು ಭಾಷೆಯ ಪರಿಚಯವನ್ನು ಈ ಕೆಳಕಂಡಂತೆ ಸ್ಥೂಲವಾಗಿ ಮಾಡಿಕೊಡಲಾಗಿದೆ. ಮಹಾಋಷಿ ಕಣ್ವರಿಂದ ಈ ಭಾಷೆ ಹುಟ್ಟಿದೆ ಎಂಬ ಪ್ರತೀತಿಯಿದೆ.

ತೆಲುಗರು ಬೇರೊಂದು ವಿಧದಲ್ಲಿ ಆಂಧ್ರರೆಂದು ಹೆಸರಾದವರು ಮೊತ್ತ ಮೊದಲಿಗೆ 'ಐತರೇಯ ಬ್ರಾಹ್ಮಣ' (ಕ್ರಿ. ಪು..600) ದಲ್ಲಿ ಉಲ್ಲೇಖಿತರಾಗಿದ್ದಾರೆ. ಹಾಗೆಯೇ ಆಂಧ್ರ, ತೆನುಗು, ತೆಲುಗು ಎಂಬಿವು ಸಮನಾರ್ಥಕ ಶಬ್ದಗಳು, ಇವು ಮೂರು ಶಬ್ದಗಳು ದೇಶವನ್ನು, ಭಾಷೆಯನ್ನೂ ಹಾಗೂ ಜನರನ್ನು ಸೂಚಿಸುವ ಶಬ್ದಗಳಾಗಿವೆ. ಇವಲ್ಲದೇ ವಡುಗ, ಜೆಂತಿಯೋ ಎಂಬಿವು ಕೂಡ ತೆಲುಗನ್ನು ಸೂಚಿಸುವ ಪದಗಳಾಗಿದ್ದವು. ಅವುಗಳ ಬಗ್ಗೆ ವಿವರವಾಗಿ ನೋಡುವುದಾದರೆ.

★ ಆಂಧ್ರ:-

ತೆಲುಗು ಜನರನ್ನು ಸೂಚಿಸುವ 'ಆಂಧ್ರ' ಹಾಗು 'ಅಂಧ್ರ' ಎಂಬ ಪದಗಳು ಬಹಳ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿವೆ. ಐತರೇಯ ಬ್ರಾಹ್ಮಣದಲ್ಲಿ 'ಆಂಧ್ರ'ದ ಪ್ರಸಕ್ತಿ ಇದೆ. ಮನುಸ್ಮೃತಿ, ವ್ಯಾಸ ಮಹಾಭಾರತ, ಭಾಗವತ ಮುಂತಾದ ಅನೇಕ ಪ್ರಾಚೀನ ಗ್ರಂಥಗಳಲ್ಲಿ ಆಂಧ್ರ , ಅಂಧ್ರ, ಅಂಧಕ ಹಾಗೂ ಆಂಧ್ರಕ ಜಾತಿಯವರನ್ನು ಕುರಿತು ಹೇಳಲಾಗಿದೆ.

ಶಾತವಾಹನರನ್ನು ಆಂಧ್ರ ಭೃತ್ಯರೆಂದು ವಾಯುಪುರಾಣಾದಿ ಗ್ರಂಥಗಳು ಹೇಳುತ್ತವೆ. ಚಂದ್ರಗುಪ್ತ ಮೌರ್ಯನ ಆಸ್ಥಾನವನ್ನು ಸಂದರ್ಶಿಸಿದ ಮೆಗಾಸ್ತನೀಸ (ಕ್ರಿ. ಶ. 400) ಮೌರ್ಯ ರ ಅನಂತರ ಆಂಧ್ರರ ಚತುರಂಗ ಬಲವೇ ಎಣಿಸತಕ್ಕದ್ದೆಂದು ಹೇಳಿದ್ದಾನೆ. ಈ ಎಲ್ಲಾ ಆಧಾರಗಳಿಂದ ಆಂಧ್ರರೆಂಬ ಹೆಸರಿನಿಂದ ಜನರು ಕ್ರಿ.ಪೂ.ಸುಮಾರು 600ರಲ್ಲೇ ಪುಂಡ್ರ, ಶಬ್ದರ, ಪುಳಿಂದಾದಿ ಜಾತಿಗಳಲ್ಲಿ ಒಬ್ಬರಾಗಿದ್ದು ಮೌರ್ಯರ ಕಾಲಕ್ಕೆ ಚತುರಂಗ ಬಲಗಳನ್ನು ಹೊಂದಿದ ವೀರರೆಂಬ ಪ್ರಶಂಸೆ ಗೀಡಾದರೆಂದು ಊಹಿಸಬಹುದು."

ಕ್ರಿ. ಶ.ದ ಪ್ರಾರಂಭಕಾಲದ ಭರತನ ನಾಟ್ಯಶಾಸ್ತ್ರದಲ್ಲಿ 'ಆಂಧ್ರ'ದ ಪ್ರಸಕ್ತಿ ಇದೆ. ಬರ್ಬರ, ಕಿರಾತ, ಆಂಧ್ರ, ತಮಿಳಾದಿ ಜಾತಿಗಳು ಹಾಗೂ ಅವರವೇ ಆದ ಭಾಷೆಗಳು ಇದ್ದುವೆಂದು ಸೂಚನೆ ನಾಟ್ಯಶಾಸ್ತ್ರದಲ್ಲಿ ಕಂಡು ಬರುತ್ತದೆ.

ಆಂಧ್ರ ಜನರ ಬಗೆಗಿನ ಮೇಲಿನ ಉಲ್ಲೇಖಗಳಂತೆಯೇ ಆಂಧ್ರಪ್ರದೇಶವನ್ನು ಕುರಿತು ಕೆಲವು ಉಲ್ಲೇಖಗಳು ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಸಿಗುತ್ತದೆ. ರಾಮಾಯಣ,ಮಹಾಭಾರತ, ಭಾಗವತ ಮುಂತಾದ ಗ್ರಂಥಗಳಲ್ಲಿ ಆಂಧ್ರಪ್ರದೇಶವನ್ನು ಕುರಿತು ಉಲ್ಲೇಖಗಳಿವೆ. ಆದರೆ 'ಆಂಧ್ರ' ಎಂಬುದು ಒಂದು

ಭಾಷೆಯ ಹೆಸರಾಗಿ ಸ್ಪಷ್ಟವಾಗಿ ಕಂಡು ಬರುವುದು 11ನೇ ಶತಮಾನದಿಂದ ಮಾತ್ರ. ನಾಟ್ಯಶಾಸ್ತ್ರದ, ಸೂಚನೆಯನ್ನು ಬಿಟ್ಟರೆ ನನ್ನಯಭಟ್ಟನ ನಂದಂಪೂಡಿ ಶಾಸನದಲ್ಲಿ ಮಾತ್ರ 'ಆಂಧ್ರಭಾಷೆ' ಎಂಬ ಪದ ಬಳಕೆಯಾಗಿದೆ. ಮೇಲಿನ ವಿವರಣೆಯಿಂದ 'ಆಂಧ್ರ' ಶಬ್ದ ಮೊದಲು ಜಾತಿ ವಾಚಕವಾಗಿದ್ದು, ಅನಂತರ ದೇಶ ವಾಚಕವಾಗಿ, ಆಮೇಲೆ ಭಾಷೆಯ ಹೆಸರಾಯಿತು ಎಂದು ನಿರ್ಣಯಿಸಬಹುದು.

★ತೆನುಗು

ನನ್ನಯ ತನ್ನ ಆಂಧ್ರ ಮಹಾಭಾರತದಲ್ಲಿ ತೆನುಂಗು, ತೆನುಗು ಪದಗಳನ್ನು ಬಳಸಿದ್ದಾನೆ. 'ತೆನುಗು' ಶಬ್ದ 'ತ್ರಿನಗ' ಎಂಬ ಶಬ್ದದಿಂದ ಹುಟ್ಟಿದ್ದೆಂದು ಕೆಲವರು ಊಹಿಸಿದ್ದಾರೆ. ಕೆಲವರು (ತೇನು + ಅಗು (ತೇನೆ = ಜೇನು ತುಪ್ಪ, ಅಗು = ಆದ) ಎಂದು 'ತೆನ್' ಎಂದರೆ ದಕ್ಷಿಣ ಎಂದರ್ಥ. ತೆಲುಂಗು ತೆಲುಗು ಎಂಬ ಪದಗಳ ಬಳಕೆ ಇತ್ತೀಚಿನದು. ವಾಯು ಪುರಾಣದಲ್ಲಿ ಮಾತ್ರ 'ತಿಲಿಂಗ' ಎಂಬ ಪದ ಒಂದು ಜನಪದದ ಹೆಸರೆಂದು ಹೇಳಲಾಗಿದೆ. ಬ್ರಹ್ಮಾಂಡ ಪುರಾಣ, ಸ್ಕಾಂದಪುರಾಣ, ರಾಜಶೇಖರನ ವಿದ್ಧಸಾಲಭಂಜಿಕಾ ಮುಂತಾದ ಗ್ರಂಥಗಳಲ್ಲಿ ಉಲ್ಲೇಖಗೊಂಡಿರುವ 'ತ್ರಿಲಿಂಗ' ಶಬ್ದದಿಂದ ತೆಲುಂಗು, ತೆಲುಗು ಎಂಬುವು ಉಗಮಗೊಂಡವೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ತೆಲುಗಿನ ಸಂಸ್ಕೃತ ರೂಪವೇ 'ತ್ರಿಲಿಂಗ'ವೆಂದು ಕೆಲವರ ಅಭಿಪ್ರಾಯ. ಶ್ರೀಶೈಲ, ಕಾಳೇಶ್ವರ ಹಾಗೂ ದಾಕ್ಷಾರಾಮಲಿಂಗಗಳ ಮಧ್ಯದಲ್ಲಿರುವ ಪ್ರದೇಶವಾದುದರಿಂದ ಆಂಧ್ರಪ್ರದೇಶವನ್ನು ತ್ರಿಲಿಂಗ ದೇಶವೆನ್ನುತ್ತಾರೆಂದು ಪೆದ್ದನ ತನ್ನ 'ಕಾವ್ಯಾಲಂಕಾರ ಚೂಡಾಮಣಿ'ಯಲ್ಲಿ ಬರೆದಿದ್ದಾನೆ. 'ತೆನುಗು' ಹಾಗೂ 'ತೆಲುಗು' ರೂಪಾಂತರಗಳೇ ಹೊರತು ಭಿನ್ನ ಶಬ್ದಗಳಲ್ಲ. 'ನ' ಧ್ವನಿ 'ಲ' ಆಗುವ ಸಂದರ್ಭಗಳು ದ್ರಾವಿಡ ಭಾಷೆಗಳಲ್ಲಿ ಕಂಡುಬರುತ್ತವೆ. ಇದರಿಂದ ದಿಗ್ವಾಚಿಯಾದ 'ತೆನುಗು' 'ತೆಲುಗು' ಆಯಿತೆನ್ನಬಹುದು.

ವಡುಗರು ಜಂತಿಯೋ

ವಡಗರೆಂದರೆ ಉತ್ತರದವರೆಂದರ್ಥ, ಸಂಗಮಕಾಲಕ್ಕೆ ಸಂಬಂಧಿಸಿದ ತಮಿಳುಗ್ರಂಥಗಳಲ್ಲಿ ತೆಲುಗರನ್ನು ವಡುಗರೆಂದು ಕರೆಯಲಾಗಿದೆ. ವಿಜಯನಗರ ಕಾಲದಲ್ಲಿ ಭಾರತಕ್ಕೆ ಬಂದ ಪೋರ್ಚುಗೀಸರು ಭಾರತದ ಜನರನ್ನು ಅದರಲ್ಲೂ ಮುಖ್ಯವಾಗಿ ತೆಲುಗರನ್ನು ಜಂತಿಯೋ ಎಂಬ ಹೆಸರಿನಿಂದ ಕರೆಯುತ್ತಿದ್ದರು. ಈಗ ಆಂಧ್ರಪ್ರದೇಶದಲ್ಲಿ ವ್ಯವಹಾರದಲ್ಲಿರುವ ಭಾಷೆಗೆ ಆಂಧ್ರಭಾಷೆ ಹಾಗೂ ತೆಲುಗುಭಾಷೆ ಎಂಬುವು ವ್ಯವಹಾರ ನಾಮಗಳಾಗಿ ರೂಢಿಯಲ್ಲಿವೆ.

ತೆಲುಗು ಭಾಷೆಯ ಪ್ರಾಚೀನತೆ

ಐತರೇಯ ಬ್ರಾಹ್ಮಣ ಕಾಲದ ಆಂಧ್ರರು ಹಾಗೂ ನಾಟ್ಯಶಾಸ್ತ್ರದಲ್ಲಿ ಉಲ್ಲೇಖಿತಗೊಂಡಿರುವ ಆಂಧ್ರರು ಇಂದಿನ ತೆಲುಗು ಭಾಷೆಯ ಪ್ರಾಚೀನ ರೂಪವನ್ನೇ ಮಾತನಾಡುತ್ತಿದ್ದರೆ, ಇಲ್ಲವೇ ಎಂಬುದನ್ನು ನಿರ್ಣಯಿಸಲು ಖಚಿತವಾದ ಆಧಾರಗಳಿಲ್ಲ. ಕೆಲವರ ಅಭಿಪ್ರಾಯದಲ್ಲಿ, ಉತ್ತರ ಭಾರತದಿಂದ ದಕ್ಷಿಣಕ್ಕೆ

ಬಂದ ಆಂಧ್ರರು ತೆಲುಗರೊಡನೆ ಬೆರೆತು ಅವರ ಭಾಷೆಯನ್ನೇ ತಮ್ಮ ಆಡುಮಾತನ್ನಾಗಿಸಿಕೊಂಡರು. ಪ್ರಾಚೀನ ಕಾಲದ ಆಂಧ್ರರ ಭಾಷೆ ಕ್ರಿ.ಶ.ದ ಆರಂಭಕ್ಕೆ ಮೊದಲೇ ರೂಪುಗೊಂಡಿತೆಂದು ಹೇಳಲು ಕೆಲವು ಆಧಾರಗಳಿವೆ.

ಹಾಲರಾಜನಿಂದ ಸಂಕಲಿತವಾದ ಗಾಥಾಸಪ್ತಶತಿಯಲ್ಲಿ ಮತ್ತು ಕುಮಾರಿಲಭಟ್ಟನ ತಂತ್ರವಾರ್ತಿಕದಲ್ಲಿ ಕೆಲವು ತೆಲುಗು ಪದಗಳು ಕಂಡುಬರುತ್ತವೆ. ಈ ಪದಗಳು ಸಂಸ್ಕೃತ ಹಾಗೂ ಪ್ರಾಕೃತ ಭಾಷೆಗಳಿಗೆ ಸಂಬಂಧಿಸಿದುದಲ್ಲವೆಂದೂ ಇವು ದೇಶ್ಯಪದಗಳೆಂದು ಹೇಮಚಂದ್ರನ 'ದೇಶೀನಾಮಮಾಲಾ' ಹೇಳುತ್ತದೆ. ಗಾಥಾಸಪ್ತಶತಿಯಲ್ಲಿ ಅತ್ತ(ಅತ್ತೆ), ಕರಣಿ (ರೀತಿ), ಮೋಡಿ(ಬಿಂಕ), ರೊಂಪ ರಂಪ. ಗರಗಸ) ಮುಂತಾದವು ತೆಲುಗು ಪದಗಳೆಂದು ಊಹಿಸಲಾಗಿದೆ. ಗಾಥಾ ಸಪ್ತಶತಿಯ ಪದ್ಯಗಳು ವಿವಿಧ ಪ್ರದೇಶಗಳಿಂದ ಸಂಗ್ರಹಿತವಾದ ಕಾರಣ ಈ ಪದ್ಯಗಳಲ್ಲಿ ಅಂದಿನ ಜನವ್ಯವಹಾರದಲ್ಲಿದ್ದ ತೆಲುಗು ಭಾಷಾ ಪದಗಳು ಸ್ಥಾನ ಪಡೆದಿದ್ದರೆ ಆಶ್ಚರ್ಯವೇನಿಲ್ಲ.

ಕ್ರಿ.ಶ.ದ ಆರಂಭದಲ್ಲಿ ತೆಲುಗು ಭಾಷೆಯ ಅಸ್ತಿತ್ವದ ಬಗೆಗೆ ಇನ್ನೂ ಸ್ಪಷ್ಟವಾದ ಆಧಾರಗಳು ಶಾಸನಗಳಿಂದ ಲಭಿಸುತ್ತವೆ. ಇದುವರೆಗೆ ಬೆಳಕಿಗೆ ಬಂದಿರುವ ತೆಲುಗು ಶಾಸನಗಳಲ್ಲಿ ಮೊದಲನೆಯದು ೬ನೇಶತಮಾನಕ್ಕೆ ಸೇರಿದ್ದು. ಕ್ರಿ.ಶ.೨ನೇ ಶತಮಾನದಿಂದ ಕ್ರಿ.ಶ.೬ನೇ ಶತಮಾನದವರೆಗೆ ವಿವಿಧ ರಾಜಮನೆತನದವರು ತೆಲುಗು ದೇಶದಲ್ಲಿ ಹಾಕಿಸಿದ ಪ್ರಾಕೃತ ಹಾಗೂ ಸಂಸ್ಕೃತ ಶಾಸನಗಳಲ್ಲಿ ಹಲವಾರು ತೆಲುಗು ಪದಗಳು ಕಂಡುಬರುತ್ತವೆ. ಇವುಗಳಲ್ಲಿ ಗ್ರಾಮನಾಮ ಹಾಗೂ ವ್ಯಕ್ತಿ ನಾಮಗಳು ಸೇರಿವೆ. ಏಳೂರ(ಆ-ಏ ಆಗಿರುವ ಶಬ್ದ) ಇರ್ಬುಲಿ (ಎರಡು ಪದಗಳ ಸಮಾಸ) ಮುಯೂರ್ ಕೊಟುವ (ಮೂರು ಪದಗಳ ಸಮಾಸ) ಮುಂತಾದ ಶಬ್ದಗಳು ಕ್ರಿ.ಶ.ದ ಪೂರ್ವದಲ್ಲಿಯೇ ಮೂಲ ದ್ರಾವಿಡ ಭಾಷೆಯಿಂದ ಬೇರೆಯಾಗಿ ಕ್ರಿ.ಶ. ೫-೬ನೇ ಶತಮಾನಗಳ ಕಾಲಕ್ಕೆ ಸ್ಪಷ್ಟವಾದ ರೂಪವನ್ನು ಪಡೆಯಿತೆಂದು ತಿಳಿಯುತ್ತದೆ. ಕ್ರಿ.ಶ.೬ನೇ ಶತಮಾನದಿಂದ ತೆಲುಗು ಶಾಸನಗಳಿದ್ದು, ಆ ಭಾಷೆ ಸಾಹಿತ್ಯಿಕ ಭಾಷೆಯ ಮಟ್ಟಕ್ಕೆ ಬೆಳೆಯುತ್ತಿತ್ತೆಂಬುದನ್ನು ಸೂಚಿಸುತ್ತದೆ. ಅಂದರೆ ಆ ವೇಳೆಗಾಗಲೇ ತೆಲುಗು ಸಾಹಿತ್ಯಿಕವಾಗಿ ಪ್ರೌಢವಾಗುತ್ತಾ ಬಂದಿತೆಂದು ಹೇಳಬಹುದು. ಇದರ ಜೊತೆಗೆ ತೆಲುಗಿನ ವಾಕ್ಯರಚನೆ ಹಾಗೂ ಪದಸಂಪತ್ತು ಎರಡರ ಮೇಲೂ ಸಂಸ್ಕೃತವು ಗಮನಾರ್ಹವಾದ ಪ್ರಭಾವವನ್ನು ಬೀರಿದ್ದು, ಸಂಸ್ಕೃತದಿಂದ ತೆಲುಗು ಸಾಂಸ್ಕೃತಿಕವಾಗಿ ಪ್ರಭಾವಿತವಾಗಿತ್ತು ಎನ್ನಬಹುದು. ಇದಕ್ಕೆ ಆಧಾರವಾಗಿ ತೆಲುಗಿನ ಮೊತ್ತ ಮೊದಲ ದೊಡ್ಡ ಸಾಹಿತ್ಯ ಕೃತಿಯಾದ ನನ್ನಯ್ಯನ 'ಶ್ರೀಮದಾಂಧ್ರ ಭಾರತಮು'ವಿನಲ್ಲಿ ನಾಂದೀಪದ್ಯ ಸಂಸ್ಕೃತದಲ್ಲಿದೆ ಎಂಬ ಅಂಶವನ್ನು ಆಧಾರವಾಗಿ ಉಲ್ಲೇಖಿಸಬಹುದು.

ಜನಸಂಖ್ಯೆ

ಸುಮಾರು ಕ್ರಿ.ಪೂ.೨೦೦ರಲ್ಲಿ ಮನುಸ್ಮೃತಿ ಮತ್ತು ಅಂಥ ಕೆಲವು ಕೃತಿಗಳಲ್ಲಿ ಮಿಶ್ರ ಜನಾಂಗವೆಂದು ಉಲ್ಲೇಖಿತರಾದ ಆಂಧ್ರರು/ತೆಲುಗರು ನಿಜವಾಗಿ ದಕ್ಷಿಣದ ಕಡೆಗೆ ವಲಸೆ ಬಂದ ಆರ್ಯೇತರರು, ೩೭ ಮಿಲಿಯಕ್ಕೂ ಹೆಚ್ಚಿನ ತೆಲುಗರು ಆಂಧ್ರಪ್ರದೇಶದಲ್ಲಿ ವಾಸಿಸುತ್ತಿದ್ದಾರೆ ಮತ್ತು ೮ ಮಿಲಿಯಕ್ಕೂ ಹೆಚ್ಚಿನ

ತೆಲುಗರು ಭಾರತದ ಇತರ ಭಾಗಗಳಲ್ಲಿ ಮುಖ್ಯವಾಗಿ ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಒರಿಸ್ಸಾ ಮತ್ತು ಮಧ್ಯಪ್ರದೇಶಗಳಲ್ಲಿ ವಾಸಿಸುತ್ತಾರೆ. ಸುಮಾರು ೧,೫೦,೦೦೦ ದಷ್ಟು ಜನರು ಮಲೇಶಿಯಾದಲ್ಲಿ ೧,೦೦,೦೦೦ ದಷ್ಟು ಜನರು ದಕ್ಷಿಣ ಆಫ್ರಿಕಾದಲ್ಲಿ, ೫೦,೦೦೦ ದಷ್ಟು ಜನರು ಮೊರೀಷಿಯಸ್‌ನಲ್ಲಿ ಮತ್ತು ಅಷ್ಟೇ ಮಂದಿ ಫಿಜಿಯಲ್ಲಿ ೧೭,೦೦೦ ಜನರು ಬರ್ಮಾದಲ್ಲಿ ಹಾಗೂ ಇನ್ನೂ ಗಮನಾರ್ಹ ಸಂಖ್ಯೆಯ ಜನರು ಅಮೇರಿಕ, ಇಂಗ್ಲೆಂಡ್, ಶ್ರೀಲಂಕಾ ಮುಂತಾದ ದೇಶಗಳಲ್ಲಿ ತೆಲುಗರು ನೆಲೆಸಿದ್ದಾರೆ.[೬]

ವಾಂಶಿಕ ಸಂಬಂಧ:

ರಾಚನಿಕವಾಗಿ ತೆಲುಗು ಪ್ರಮುಖ ದ್ರಾವಿಡ ಭಾಷೆಗಳಲ್ಲಿ ಒಂದು. ಮಧ್ಯದ್ರಾವಿಡದಿಂದ ಕವಲೊಡೆದ ಇದಕ್ಕೆ ಕುಯಿ-ಕುವಿ-ಕೊಂಡ ಉಪವರ್ಗದೊಡನೆ ಅತ್ಯಂತ ನಿಕಟ ಬಾಂಧ್ಯವವಿದೆ. ದಕ್ಷಿಣ ದ್ರಾವಿಡ ಉಪವರ್ಗದೊಡನೆ ಈ ಭಾಷೆಗೆ ಬಹಳ ಪೂರ್ವ ಕಾಲದಿಂದಲೇ ನಿಕಟವಾದ ಭೌಗೋಳಿಕ ಸಂಬಂಧವಿದೆ. ತೌಲನಿಕ ಆಧಾರಗಳ ಮೇಲೆ ಹೇಳುವುದಾದರೆ ಪ್ರಾಗ್ದ್ರಾವಿಡದಿಂದ ಹುಟ್ಟಿದ ಇದು ಭಾರತದಲ್ಲಿ ಮೂಲನಿವಾಸಿಯಾಗಿತ್ತೆಂದು ಕಂಡುಬರುವುದಿಲ್ಲ.

ತೆಲುಗು ಹಾಗೂ ಮೂಲದ್ರಾವಿಡ ಭಾಷೆಗಳು:-

ತೆಲುಗು ದ್ರಾವಿಡ ಭಾಷಾಕುಟುಂಬಕ್ಕೆ ಸೇರಿದ ಭಾಷೆ. ತಮಿಳು, ಕನ್ನಡ,ತುಳು, ಕೊಡಗು, ಮಲಯಾಳ ಮುಂತಾದವು ದಕ್ಷಿಣ ದ್ರಾವಿಡ ಭಾಷೆಗಳು. ತೆಲುಗು, ಗೋಂಡಿ, ಕೊಂಡ, ಮಂಡ, ಕುಯಿ, ಕುವಿ, ಗದಬ ಮುಂತಾದವು ಮಧ್ಯ ದ್ರಾವಿಡ ಭಾಷೆಗಳು. ಕುರುಖ್, ಮಾಲ್ತೋ ಹಾಗೂ ಬ್ರಾಹುಈ ಎಂಬುವು ಉತ್ತರ ದ್ರಾವಿಡ ಭಾಷೆಗಳು.

ಮೂಲದ್ರಾವಿಡ ಭಾಷೆಗೆ ತೆಲುಗನ್ನು ಹೋಲಿಸಿದಾಗ ಕೆಲವು ಧ್ವನಿಗಳು ಪರಿವರ್ತನೆಯಾಗಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ತೆಲುಗು ಪದಗಳಲ್ಲಿ ಎರಡನೆಯ ಸ್ವರ 'ಅ' ಕಾರವಾಗಿದ್ದರೆ, ಮೊದಲನೆಯ ಸ್ವರ ಅ,ಎ,ಓ ಗಳಲ್ಲಿ ಒಂದಾಗಿರುತ್ತದೆಯೇ ಹೊರತು ಇ,ಉ ಗಳಿರುವುದಿಲ್ಲ. ಆದರೆ ಪ್ರಾಚೀನ ತಮಿಳು ಹಾಗೂ ಮಲಯಾಳಗಳಲ್ಲಿ ಇಂತಹ ಸಂದರ್ಭಗಳಲ್ಲಿ ಅ, ಇ, ಉಗಳೇ ಹೊರತು ಎ.ಒಗಳಿರುವುದಿಲ್ಲ.

ಉದಾ: ನಿಲ್-ನೆಲ, ಮುದಲ್-ಮೊದಲು

ಕೆಲವು ಮೂಲದ್ರಾವಿಡ ಧಾತುಗಳಿರುವ ಸ್ವರ ಅನಂತರದ ವ್ಯಂಜನಗಳ ಸ್ಥಾನದಲ್ಲಿ ವ್ಯತ್ಯಯವಾಗುತ್ತದೆ.

ಉದಾ: ಕುರುಂಗು-ಕ್ರೋತಿ-ಕೋತಿ

ಕುರುಡು-ಗ್ರುಡ್ಡಿ-ಗುಡ್ಡಿ

ತಾಲವ್ಯೀಕರಣ ತೆಲುಗಿನಲ್ಲಿ ಕಾಣುವ ಇನ್ನೊಂದು ವಿಶಿಷ್ಠ ಲಕ್ಷಣ. ಮೂಲದ್ರಾವಿಡದಲ್ಲಿರುವ ಎ, ಒ ಗಳನ್ನು ಅನುಸರಿಸಿರುವ 'ಕ'ಕಾರ ತೆಲುಗಿನಲ್ಲಿ 'ಚ'ಕಾರವಾಗುತ್ತದೆ.

ಉದಾ: ಕಿರು-ಚಿರು, ಕಿಳಿ-ಚಿಲುಕ, ಕೆಡು-ಚೆಡು, ಕಿವಿ-ಚೆವಿ

ಮೂಲ ದ್ರಾವಿಡರಲ್ಲಿ ಪದಾದಿಯಲ್ಲಿ ಇರಲಿಲ್ಲವೆಂದು ಪಂಡಿತರು ಭಾವಿಸುವ ನಾದಿ ಸ್ಪರ್ಶಗಳು ತೆಲುಗು ಪದಗಳ ಆದಿಯಲ್ಲಿವೆ.

ಉದಾ:- ಕಿಳ್ಳು-ಗಿಲ್ಲು, ಕೀರು-ಗೀರು, ತಿದ್ದು-ದಿದ್ದು

ತೆಲುಗುಲಿಪಿ:-

ಅಮರಾವತಿ ಶಾಸನವು ಬ್ರಾಹ್ಮಿ ಲಿಪಿಯ ಭಟ್ಟಿಪ್ರೋಲು ರೂಪದಲ್ಲಿದೆ. ಈ ಲಿಪಿಯು ಕ್ರಿ.ಪೂ.೫ನೇ ಶತಮಾನದಲ್ಲಿ ಅದರ ಮೂಲವರ್ಗದಿಂದ ಕವಲೊಡೆದು ಬೇರ್ಪಟ್ಟಿತು ಹಾಗೂ ಸುಮಾರು ಕ್ರಿ.ಶ.೪ನೇ ಶತಮಾನದ ಅಂತ್ಯಕ್ಕೆ ತನ್ನ ಪ್ರಯೋಜನವನ್ನು ಕಳೆದುಕೊಂಡು 'ವೆಂಗಿ ಚಾಲುಕ್ಯ' ಲಿಪಿಗೆ ಜನ್ಮ ನೀಡಿತು. ಇದನ್ನು 'ತೆಲುಗು-ಕನ್ನಡ' ಅಥವಾ 'ತಲೆಕಟ್ಟು ಲಿಪಿ' ಎಂದು ಸಾಮಾನ್ಯವಾಗಿ ಕರೆಯುತ್ತಾರೆ. ಮುಂದೆ ಈ ಲಿಪಿ ಮೂರು ಅವಸ್ಥಾಂತರಗಳನ್ನು ತಳೆದಿದೆ. ಇದರಲ್ಲಿ ಕೊನೆಯದನ್ನು ಬರ್ನಲ್‌ರವರು ಸ್ಥಿತ್ಯಂತರ ಲಿಪಿಯೆಂದು, ಜೆ.ಎಫ್. ಫ್ಲೀಟ್ ಅವರು ಹಳೇ ತೆಲುಗು-ಕನ್ನಡ ಲಿಪಿಯೆಂದು, ಕರೆದಿದ್ದಾರೆ. ಈ ಇಬ್ಬರು ವಿದ್ವಾಂಸರು ಈ ೨ ಭಾಷೆಗಳ ಅನೇಕ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಒಂದುಹೇಳಿಕೆಯಂತೆ ಈ ಎರಡೂ ಭಾಷೆಯ ಲಿಪಿಗಳು ೧೩೦೦ರಿದ ಬೇರೆ ಬೇರೆಯಾದವು ಅಲ್‌ಬೆರೂನಿಯು ಈ ವ್ಯತ್ಯಯವು ೧೦೩೦ರಿಂದಲೇ ಉಂಟಾಯಿತೆಂದು ಹೇಳುತ್ತಾನೆ.

ತೆಲುಗು ಉಪಭಾಷೆಗಳು:-

ತೆಲುಗು ಭಾಷೆಯು ಅನೇಕ ಉಪಭಾಷೆಗಳನ್ನು ಹೊಂದಿದೆ. ಪ್ರಾದೇಶಿಕವಾಗಿ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿರುವ ಆರ್ಥಿಕ, ಸಾಂಸ್ಕೃತಿಕ, ಜಾತೀಯ ಪರವಾದ ವ್ಯತ್ಯಾಸಗಳೂ ಕಂಡುಬರುತ್ತವೆ. ಇವಲ್ಲದೇ, ಲಿಖಿತ ಭಾಷೆ, ಆಡುಮಾತು, ಉಪನ್ಯಾಸ, ಸ್ತ್ರೀಯರ ಭಾಷೆ, ಪುರುಷರ ಭಾಷೆ, ಮಕ್ಕಳ ಭಾಷೆ ಮುಂತಾದ ಪ್ರಭೇದಗಳಿವೆ.

ಆಂಧ್ರಪ್ರದೇಶದಲ್ಲಿ ೩ ಮುಖ್ಯವಾದ ಪ್ರದೇಶಗಳನ್ನು ಗುರುತಿಸಲಾಗಿದೆ ಅವುಗಳೆಂದರೆ:-

೧. ತೆಲಂಗಾಣ

೨. ತೀರಾಂಧ್ರ

೩. ರಾಯಲಸೀಮೆ

ಹಾಗೆಯೇ ಭದ್ರಿರಾಜು ಕೃಷ್ಣಮೂರ್ತಿಯವರು ೪ ಪ್ರಾಂತ್ಯಗಳನ್ನು ಗುರುತಿಸಿದ್ದಾರೆ.

೧. ಪೂರ್ವ ಪ್ರಾಂತ್ಯ (ಕಳಿಂಗನಾಡು, ಶ್ರೀಕಾಕುಳಂ, ವಿಶಾಖಪಟ್ನಂ ಜಿಲ್ಲೆಗಳು)

೨. ದಕ್ಷಿಣ ಪ್ರಾಂತ್ಯ (ರಾಯಲಸೀಮೆ, ನೆಲ್ಲೂರು, ಪ್ರಕಾಶಂ ಜಿಲ್ಲೆಗಳು)

೩. ಉತ್ತರ ಪ್ರಾಂತ್ಯ(ತೆಲಂಗಾಣ)

೪. ಮಧ್ಯಪ್ರಾಂತ್ಯ (ಗೋದಾವರಿ, ಗುಂಟೂರು ಹಾಗೂ ಕೃಷ್ಣ ಜಿಲ್ಲೆಗಳು)[೭]

ಆಂಧ್ರಪ್ರದೇಶದ ಮೇಲಿನ ಭಿನ್ನ ಪ್ರಾಂತ್ಯಗಳಲ್ಲಿ ತೆಲುಗಿನ ಬೇರೆ ಬೇರೆ ಉಪಭಾಷೆಗಳು ಬಳಕೆಯಲ್ಲಿವೆ. ಶ್ರೀಕಾಕುಳಂ ಹಾಗೂ ವಿಶಾಖಪಟ್ನಂ ಜಿಲ್ಲೆಗಳು ೧೦ನೇ ಶತಮಾನದವರೆಗೂ ಕಳಿಂಗ ರಾಜ್ಯದಲ್ಲಿ ಒಂದು ಭಾಗವಾಗಿದ್ದು ಇತರ ಪ್ರಾಂತ್ಯಗಳೊಡನೆ ಹೆಚ್ಚು ಸಂಬಂಧವಿಲ್ಲದಿದುದರಿಂದ ಅಲ್ಲಿಯ ಆಡುನುಡಿಗಳು ವಿಲಕ್ಷಣವಾಗಿರುತ್ತವೆ. ರಾಯಲಸೀಮೆ ಹಾಗೂ ನೆಲ್ಲೂರು ಜಿಲ್ಲೆಗಳ ಭಾಷೆಯಲ್ಲಿ ಹೆಚ್ಚಿನ ಹೋಲಿಕೆ ಕಂಡಬರುತ್ತದೆ. ನೆಲ್ಲೂರು ಜಿಲ್ಲೆಯ ಪೆನ್ನಾನದಿಗೆ ಉತ್ತರದ ಮಾತಿಗೂ ದಕ್ಷಿಣದ ಮಾತಿಗೂ ವ್ಯತ್ಯಾಸ ಕಂಡುಬರುತ್ತದೆ. ಕಾಕತೀಯರು ಹಾಗೂ ಮಹಮದೀಯರು ಆಳಿದ ತೆಲಂಗಾಣ ಪ್ರಾಂತ್ಯದಲ್ಲಿ ಉರ್ದು ಭಾಷೆಯ ಪ್ರಭಾವ ಹೆಚ್ಚಾಗಿದೆ. ತೆಲಂಗಾಣ ಪ್ರಾಂತ್ಯಕ್ಕೆ ಸೀಮಿತವಾಗಿರುವ ದೇಶ್ಯ ಶಬ್ದಗಳೂ ಹಲವಿವೆ. ಮಧ್ಯಪ್ರಾಂತ್ಯದ ಪ್ರತಿಯೊಂದು ಮಾತು ಉಳಿದ ಪ್ರಾಂತ್ಯಗಳ ಯಾವುದೇ ಒಂದು ಮಾತಿಗೆ ಸರಿಹೋಗುವುದರಿಂದ ಅದನ್ನು ಮಿಶ್ರ ವ್ಯವಹಾರದ ಪ್ರಾಂತ್ಯವೆಂದು ಹೇಳಬಹುದು.

ಪ್ರಾದೇಶಿಕವಾಗಿ ಕಂಡುಬರುವ ವ್ಯತ್ಯಾಸಗಳು ಮಾತ್ರವಲ್ಲದೆ ಸಮಾಜದ ವಿವಿಧ ವರ್ಗಗಳ ಜನರ ಭಾಷೆಯಲ್ಲೂ ವ್ಯತ್ಯಾಸಗಳು ಕಾಣುತ್ತವೆ. ಉಚ್ಚಾರದಲ್ಲಿ ಶಿಷ್ಟರು ಮತ್ತು ಶಿಷ್ಟೇತರರ ನಡುವೆ ವ್ಯತ್ಯಾಸಗಳು ಕಂಡುಬರುತ್ತವೆ. ಈ ವ್ಯತ್ಯಾಸದ ಮೇಲೆ ಜಾತಿ ಪ್ರಭಾವಕ್ಕಿಂತ ವಿದ್ಯೆಯ ಪ್ರಭಾವವೇ ಹೆಚ್ಚಿದನೆಂದು ಹೇಳಬಹುದು. ಶಿಷ್ಟರ ಉಚ್ಚಾರಣೆಯಲ್ಲಿ ಮಹಾಪ್ರಾಣಾಕ್ಷರಗಳು 'ಹ' ಕಾರ ಇರುತ್ತವೆ. ಪಾಮರರ ಉಚ್ಚಾರದಲ್ಲಿ ಮಹಾ ಪ್ರಾಣಗಳಿರುವುದಿಲ್ಲ. 'ಹ'ಕಾರ 'ಅ' ಕಾರವಾಗಿಯೂ, 'ಫ'ಪಾಮರರ ಉಚ್ಚಾರದಲ್ಲಿ 'ಪ' ಆಗುತ್ತದೆ.

ಆಧುನಿಕ ಭಾಷೆ ಅಥವಾ ಶಿಷ್ಟಬಾಷೆ:-

೧೯೬೬ರಲ್ಲಿ ತೆಲುಗು ಆಂಧ್ರಪ್ರದೇಶದ ಅಧಿಕೃತ ರಾಜ್ಯ ಭಾಷೆಯಾಗಿ ಘೋಷಿತವಾಯಿತು. ಅಲ್ಲದೇ, ಅದನ್ನು ೧೯೬೮ರಿಂದ ವಿಶ್ವವಿದ್ಯಾನಿಲಯ ಮಟ್ಟದ ವಿದ್ಯಾಭ್ಯಾಸದ ಮಾಧ್ಯಮವಾಗಿಯೂ ಮಾಡಲಾಯಿತು. ಇದರಿಂದ ಸಹಜವಾಗಿಯೇ ಅದರ ಕಾರ್ಯಶಕ್ತಿ ಹೆಚ್ಚಾಗಬೇಕಾಯಿತು. ಹಾಗಾಗಿ ವೈಜ್ಞಾನಿಕ ಹಾಗೂ ಇತರ ಪಾರಿಭಾಷಿಕ ಪದಗಳನ್ನು ಇಂಗ್ಲಿಷಿನಿಂದಲೂ, ಇಂಗ್ಲಿಷಿನ ಮೂಲಕವೂ ತೆಲುಗು ಎರವಲು ಪಡೆಯಿತು. ಹೊಸ ಪದಗಳ ಸೃಷ್ಟಿ ವಿಶೇಷವಾಗಿ ಆಗದಿದ್ದರೂ, ಸಂಸ್ಕೃತ ಮೂಲದ ಪದಗಳ ಸೃಷ್ಟಿ ಆಗಿದೆ. ಆಧುನಿಕ, ವೈಜ್ಞಾನಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಉಪಯೋಗಿಸುವ ತೆಲುಗು ಕರಾವಳಿ ಪ್ರಭೇದ. ಇದರಲ್ಲಿ

ಇಂಗ್ಲೀಷಿನಿಂದ ತದ್ಭವೀಕರಣಗೊಂಡ ಹಾಗೂ ತದ್ಭವೀಕರಣಗೊಳ್ಳದ ಪದಗಳು ಇಲ್ಲಿಯವರೆಗೂ ಕೆಳ ತರಗತಿಯ ಆಡಳಿತದಲ್ಲಿರುವ ಪಾರ್ಸೊ-ಅರೆಬಿಕ್ ಪದಗಳನ್ನು ಸ್ಥಾನಾಂತರಗೊಳಿಸುತ್ತದೆ. ವಿದ್ಯಾಪ್ರಸಾರ, ಮನೋರಂಜನೆಗಾಗಿ ಬಳಕೆಯಾಗುತ್ತಿರುವ ಸಮೂಹ ಮಾಧ್ಯಮಗಳ ಕಾರಣದಿಂದ ಉಪಭಾಷಾ ಪ್ರಭೇದಗಳ ಭಿನ್ನತೆ ಮಾಯವಾಗುತ್ತಿದೆ. ಕರಾವಳಿಯಲ್ಲಿ ಬಳಕೆಯಾಗುತ್ತಿರುವ ಉಪಭಾಷೆ ಕೆಲವು ಮಾರ್ಪಾಡುಗಳೊಡನೆ ಇಂದು ಶಿಷ್ಟ ತೆಲುಗು (Modren Standard Telugu) ಆಗಿದೆ. ಶಿಷ್ಟ ವ್ಯವಹಾರದಲ್ಲಿರುವ ಆಧುನಿಕ ತೆಲುಗು ಭಾಷೆಯನ್ನೇ ಕಥೆ, ಕಾದಂಬರಿ, ಪ್ರಬಂಧ ಮುಂತಾದ ಗದ್ಯರಚನೆಗಳಲ್ಲಿಯೂ, ಸಿನಿಮಾ, ರೇಡಿಯೋ, ಪತ್ರಿಕೆ ಮುಂತಾದ ಜನಪ್ರಿಯ ಮಾಧ್ಯಮಗಳಲ್ಲಿಯೂ ಬಳಸಲಾಗುತ್ತಿದೆ. ಶಿಷ್ಟ ತೆಲುಗು ಭಾಷೆ ಸ್ಥೂಲವಾಗಿ ಮಧ್ಯಾಂಧ್ರ ವಿದ್ಯಾವಂತರ ಆಡುಮಾತಿನ ಆಧಾರದಿಂದ ರೂಪುಗೊಂಡಿದೆ. ಇತ್ತೀಚಿನ ಕೆಲವು ದಶಕಗಳಿಂದ ರಚನೆಗಳು ಬಹುಪಾಲು ಈ ಉಪಭಾಷೆಯಲ್ಲೇ ನಡೆಯುತ್ತಿರುವುದರಿಂದ ಹೆಚ್ಚಿನ ಲೇಖಕರು ಈ ಪ್ರಾಂತ್ಯದವರೇ ಆಗಿರುವುದರಿಂದ, ಮಧ್ಯಾಂಧ್ರದ ಶಿಷ್ಟ ಭಾಷೆ ಇಡೀ ಆಂಧ್ರಪ್ರದೇಶದ ಶಿಷ್ಟ ಭಾಷೆಯಾಗಿ ಬಳಕೆಯಾಗುತ್ತಿದೆ. ಬೇರೆ ಬೇರೆ ಉಪಭಾಷೆಗಳ ಪ್ರಯೋಗಗಳು ಈ ಶಿಷ್ಟ ಬಾಷೆಯೊಂದಿಗೆ ಸೇರಿ ಇದು ವಿಸ್ತೃತವಾಗುತ್ತಿದೆ. ಸಾಮಾನ್ಯವಾಗಿ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಪ್ರಾಧಾನ್ಯವಿರುವ ರಾಜಧಾನಿಗಳ ಭಾಷೆ ಶಿಷ್ಟಭಾಷೆ ಆಗಿರುತ್ತದೆ. ಕನ್ನಡಕ್ಕೆ ಮೈಸೂರು, ವಂಗಭಾಷೆಗೆ ಕಲ್ಕತ್ತಾ ಕೇಂದ್ರಗಳಾಗಿರುವಂತೆ ತೆಲುಗುನಾಡಿನಲ್ಲಿ ಯಾವುದೂ ಇಲ್ಲ. ಆದ್ದರಿಂದ ಶ್ರೀಮಂತವಾದ ಕೃಷ್ಣ ಮತ್ತು ಗೋದಾವರಿ ಪರಿಸರದ ಮಧ್ಯಪ್ರಾಂತ್ಯ ತೆಲುಗುನಾಡಿನ ಶಿಷ್ಟ ಭಾಷೆಯನ್ನು ನೀಡಿತು.

ಶಾಸನ ಕಾಲದ ತೆಲುಗುಭಾಷೆ:

ಪ್ರಾಚೀನ ಆಂಧ್ರ ಭಾಷೆಯ ಸ್ವರೂಪವನ್ನು ಗುರುತಿಸಲು ಶಾಸನಗಳೇ ಮುಖ್ಯ ಆಧಾರಗಳಾಗಿವೆ. ಮೊಟ್ಟ ಮೊದಲನೆಯ ತೆಲುಗು ಶಾಸನವಾದ ಧನಂಜಯನ ಕಲಮುಳ್ಳ ಶಾಸನ ಕ್ರಿ.ಶ.೫೭೫ಕ್ಕೆ ಸೇರಿದ್ದು, ಕ್ರಿ.ಪೂ.೨ನೇಯ ಶತಮಾನದಿಂದ ಕ್ರಿ.ಶ.೬ನೇ ಶತಮಾನದವರೆಗೆ ತೆಲುಗು ದೇಶದಲ್ಲಿ ಬೆಳಕಿಗೆ ಬಂದ ಶಾಸನಗಳು ಪ್ರಾಕೃತ ಮತ್ತು ಸಂಸ್ಕೃತದಲ್ಲಿವೆ. ಶಾತವಾಹನರು, ವಿಷ್ಣುಕುಂಡಿನರು, ಬ್ರಹತ್ಫಲಾಯನರು, ಪಲ್ಲವರು ಮುಂತಾದ ರಾಜರು ಹಾಕಿಸಿದ ಈ ಶಾಸನಗಳಲ್ಲಿ ಗ್ರಾಮ ಮತ್ತು ವ್ಯಕ್ತಿ ನಾಮಗಳಿವೆ. ೬ನೇ ಶತಮಾನದಿಂದ ನನ್ನಯ್ಯನ ಭಾರತ ಹೊರಬಂದಿತು. ೧೧ನೇಯ ಶತಮಾನದವರೆಗೆ ಅನೇಕ ತೆಲುಗು ಗದ್ಯಪದ್ಯ ಶಾಸನಗಳು ಲಭಿಸುತ್ತವೆ. ಪ್ರಾಚೀನ ಕಾಲದ ತೆಲುಗು ಭಾಷಾಸ್ವರೂಪವನ್ನು ತಿಳಿಯಲು ಈ ಎಲ್ಲಾ ಶಾಸನಗಳು ನೆರವಾಗುತ್ತವೆ. ಶಾಸನಕಾಲದ ತೆಲುಗು ಭಾಷೆಯಲ್ಲಿ ೧೦ ಸ್ವರಗಳು ಹಾಗೂ ೨೩ ವ್ಯಂಜನಗಳಿದ್ದವು.

ಆಧುನಿಕ ತೆಲುಗು ಭಾಷೆ:-

ವರ್ಣಮಾಲೆ :

ಸ್ವರಗಳು : ಅ ಆ ಇ ಈ ಉ ಊ ಎ ಏ ಒ ಓ - ೧೦ ಸ್ವರಗಳು.

ವ್ಯಂಜನಗಳು: ಕ,ಗ,ಚ,ಜ,ಟ,ಡ, ತ,ದ,ಪ,ಬ ಎಂಬ ಸ್ಪರ್ಶಗಳು ಆಧುನಿಕ ತೆಲುಗು ಭಾಷೆಯಲ್ಲಿವೆ.

ನ, ణ, ಹಾಗೂ ಮ ಎಂಬ ಮೂರು ಅನುನಾಸಿಕಗಳು ಮಾತ್ರ ಇವೆ. ಊಷ್ಮ ಗಳಲ್ಲಿ 'ಸ' ಎಂಬುದೊಂದು ಮಾತ್ರ ವಿಶಿಷ್ಟದ ಧ್ವನಿ ಆಗಿದೆ. ಲ,ಳಗಳು ಆಧುನಿಕ ತೆಲುಗಿನ ಪಾರ್ಶ್ವಕಗಳಾಗಿವೆ. ಕಂಪಿತ ವರ್ಣಗಳಲ್ಲಿ 'ರ' ಎಂಬುದೊಂದು ಮಾತ್ರ ಕಂಡುಬರುತ್ತದೆ. 'ಯ' 'ವ' ಗಳು ಅರ್ಧ ಸ್ವರಗಳು ಇತರೆ ಭಾಷೆಗಳಿಂದ ಬಂದ ವ್ಯಂಜ್ಞನಗಳೆಂದರೆ ಖ,ಘ,ಛ,ಝ, ಠ,ಡ, ಢ, ಥ,ಫ, ಭ,ಶ,ಷ, ಹ,ಙ ಞ ಇವುಗಳಲ್ಲಿ 'ಫ' ಎಂಬುದನ್ನು ಬಿಟ್ಟು ಉಳಿದ ವರ್ಣಗಳು ಸಂಸ್ಕೃತ, ಪ್ರಾಕೃತ, ಹಿಂದಿ ಮುಂತಾದ ಇಂಡೋ-ಆರ್ಯನ್ ಭಾಷೆಗಳಿಂದ ಬಂದ ಮಾತುಗಳ ಮೂಲಕ ತೆಲುಗಿಗೆ ಬಂದಿದೆ. 'ಹ' ಕನ್ನಡದಿಂದ ಬಂದ ಕೆಲವು ಪದಗಳಲ್ಲಿದೆ.

ಉದಾ: ಹೆಚ್ಚು, ಹೊನ್ನು

ಕೆಲವು ತೆಲುಗು ಪದಗಳಲ್ಲಿ ಕೃತಕವಾದ ಮಹಾಪ್ರಾಣ ಉಚ್ಚಾರ ಕಂಡುಬರುತ್ತದೆ.

ಉದಾ: ಖಾರಂ, ಭಾವಿ ಇತ್ಯಾದಿ

ತೆಲುಗಿನಲ್ಲಿ ಮಹಾಪ್ರಾಮದ ಉಚ್ಚಾರಕ್ಕೆ ಅರ್ಥಭೇಧವನ್ನುಂಟು ಮಾಡುವ ಸಾಮರ್ಥ್ಯವಿಲ್ಲ. ಆಧುನಿಕ ಕಾಲದ ತೆಲುಗು ಭಾಷೆಯ ಲಿಪಿಯಲ್ಲಿ ಕಂಡುಬರುವ ಶ,ಷ ಹಾಗೂ ಸ ಗಳಲ್ಲಿ ಕೊನೆಯದು ಮಾತ್ರ ಪ್ರಾಚೀನ ಕಾಲದಿಂದಲೂ ಮುಂದವರಿದಿದೆ. ಶ, ಷ ಗಳು ಸಂಸ್ಕೃತ ಮತ್ತು ಹಿಂದಿ ಮಾತುಗಳ ಮೂಲಕ ಬಂದಿವೆ. 'ಶ' ವರ್ಣಕ್ಕೆ ನಿರ್ದಿಷ್ಟವಾದ ಉಚ್ಚಾರ ತೆಲುಗಿನಲ್ಲಿಲ್ಲ ಫ ಉರ್ದು ಹಾಗೂ ಇಂಗ್ಲಿಷಿನಿಂದ ಬಂದ ಪದಗಳಲ್ಲಿ ಮುಖ್ಯವಾಗಿ ಕಂಡುಬರುತ್ತದೆ. ಕೆಲವರು ಈ ವರ್ಣವನ್ನು ಸಂಸ್ಕೃತ ಪದಗಳಲ್ಲೂ ಬಳಸುತ್ತಾರೆ.

ಉದಾ: ಕಫ, ಫಲಿತಂ ಇತ್ಯಾದಿ.

ನಾಮಪದಗಳು:-

ಏಕವಚನ ನಾಮಪದಕ್ಕೆ 'ಲು' ಪ್ರತ್ಯಯವನ್ನು ಸೇರಿಸಿದರೆ ಬಹುವಚನವಾಗುತ್ತದೆ. ಪ್ರಕೃತಿ, ಪ್ರತ್ಯಯವೆಂಬ ವಿಭಾಗವಿಲ್ಲದೆಯೇ ಕೆಲವು ನಾಮಪದಗಳು ಬಹುವಚನ ಸೂಚಕಗಳಾಗಿರುತ್ತವೆ.

ಉದಾ: ಪಾಲು(ಹಾಲು), ನೀಳ್ಳು (ನೀರು) ಬಿಯ್ಯಂ(ಅಕ್ಕಿ)

ಇವುಗಳಿಗೆ ಏಕವಚನ ಪ್ರಯೋಗಗಳಿಲ್ಲ. ಬಹುವಚನ ಪ್ರತ್ಯಯವನ್ನು ಸೇರಿಸುವಾಗ ದೀರ್ಘಸ್ವರಾಂತ್ಯ ಶಬ್ದಗಳಲ್ಲಿ ಏನೂ ಬದಲಾವಣೆಯಾಗುವುದಿಲ್ಲ. ಸರ್ವನಾಮಗಳ ಏಕವಚನ ಹಾಗೂ ಬಹುವಚನ ರೂಪಗಳು ಕೆಳಗಿದಂತಿವೆ. ನೇನು-ನೇಮು, ಮನಮು, ನೀವು, ನುವ್ವು-ಮೀರು, ಆತನು-ಆಯನ, ವಾಡು- ವಾರು, ವಾಳ್ಳು.

ವಿಭಕ್ತಿಗಳು:-

ದ್ವಿತೀಯಾ ವಿಭಕ್ತಿ ಪ್ರತ್ಯಯವಾದ 'ನು' ಇಕಾರಾಂತ ಶಬ್ದಗಳಿಗೆ ಸೇರಿದಾಗಿ 'ನಿ' ಆಗುತ್ತದೆ. ಈ ವಿಭಕ್ತಿ ಪ್ರತ್ಯಯ ಸೇರಿದಾಗ ಸರ್ವನಾಮಗಳಲ್ಲಿ ಕೆಳಗಿನಂತೆ ಬದಲಾವಣೆಗಳಾಗುತ್ತವೆ.

ನಾ+ನು - ನನ್ನು(ನನ್ನನ್ನು),

ನೀ+ನು -ನಿನ್ನು(ನಿನ್ನನ್ನು),

ಮ+ನು -ಮಮ್ಮಲ್ನಿ(ನಮ್ಮನ್ನು),

ಮೀ+ನು -ಮಿಮ್ಮಲ್ನಿ(ನಿಮ್ಮನ್ನು)

ಮನ+ನು - ಮನನಿ, ಮನ (ನಮ್ಮನ್ನು-ಉಭಯಾರ್ಥಕ)

'ಉಂಡು' ಕ್ರಿಯಾಪದಕ್ಕೆ ಸಮನಾರ್ಥಕವಾಗಿ 'ಕು' ಹಾಗೂ 'ಕಿ'ಗಳನ್ನು ಬಳಸಲಾಗುತ್ತದೆ.

ಉದಾ: ನಾಕು ಇಲ್ಲು ಉಂದಿ (ನನಗೆ ಮನೆ ಇದೆ) ವಾಡಿಕಿ ಪೊಲಂ ಉಂದಿ (ಅವನಿಗೆ ಹೊಲವಿದೆ)

ಆಯನಕು ಒಕ್ಕ ಕೊಡುಕು (ಆತನಿಗೆ ಒಬ್ಬ ಮಗ)

ಕನ್ನಡದ ಜೊತೆಗೆ ಒಡನೆ, ಇಂದ ಮುಂತಾದ ಅರ್ಥಗಳಲ್ಲಿ 'ತೋ' ಎಂಬ ಪ್ರತ್ಯಯವನ್ನು ಬಳಸುತ್ತಾರೆ.

ಉದಾ:- ವಾಡುತೋ ವೆಳ್ಳಾಡು (ಅವನ ಜೊತೆ ಹೋದ)

ಆತನಿತೋ ಮಾಟ್ಲಾಡಾನು(ಆತನೊಡನೆ ಮಾತನಾಡಿದೆ)

ಲೋ, ನುಂಚಿ, ಕೋಸಂ, ಗುರಿಂಚಿ, ದಗ್ಗರ, ಮೀದ,ಪೈನ, ವಲ್ಲ ಮುಂತಾದವು ಬೇರೆ ಬೇರೆ ವಿಭಕ್ತಿಗಳಲ್ಲಿ ಬಳಕೆಯಾಗುತ್ತಿರುವ ಪ್ರತ್ಯಯಗಳಾಗಿವೆ.

ಕ್ರಿಯಾಪದಗಳು:- ತೆಲುಗಿನ ಕ್ರಿಯಾಪದಗಳಲ್ಲಿ ಸಮಾಪಕ ಮತ್ತು ಅಸಮಾಪಕ ಎಂದು ೨ ವಿಧಗಳನ್ನು ಹೇಳುವುದು ಸಂಪ್ರದಾಯ. ಅಸಮಾಪಕ ಕ್ರಿಯಾರೂಪಗಳು ಉಪವಾಕ್ಯದ ಅಂತ್ಯದಲ್ಲಾಗಲೀ, ಪ್ರಧಾನ ವಾಕ್ಯದ ಒಂದು ಪದ ಬಂಧದ ಸ್ಥಾನದಲ್ಲಾಗಲೀ ಬರುತ್ತವೆ. ಅಸಮಾಪಕ ಕ್ರಿಯಾಪದಗಳಿಗೆ ವಿಭಕ್ತಿಗಳಿರುವುದಿಲ್ಲ. ಕ್ರಿಯೆಯಲ್ಲಿ ಬಹಳ ಮಟ್ಟಿಗೆ ಕ್ರಿಯಾ ವಿಭಕ್ತಿಗಳು ಕಂಡುಬರುತ್ತವೆ.

ಕ್ರಿಯಾ ವಿಭಕ್ತಿಗಳು	ಏಕವಚನ	ಬಹುವಚನ
ಉತ್ತಮ	ನು	ಮು
ಮಧ್ಯಮ	ವು	ರು
ಪ್ರಥಮ ಮಹತ್	ಡು	ರು
ಪ್ರಥಮ ಮಹತೀ ಅಮಹತ್	ದಿ	ವಿ

ವಾಕ್ಯ ನಿರ್ಮಾಣ:- ತೆಲುಗು ಕರ್ತೃ. ಕರ್ಮಪದ, ಕ್ರಿಯಾಪದ ಬಂಧವುಳ್ಳ ಭಾಷೆ, ತೆಲುಗಿನ ಸಾಮಾನ್ಯ ವಾಕ್ಯಗಳು ಕ್ರಿಯಾರಹಿತ ಹಾಗೂ ಕ್ರಿಯಾಸಹಿತ ಎಂಬ ೨ ವಿಧಗಳಿವೆ. ಒಂದೇ ವಿಷಯವನ್ನು ಸೂಚಿಸುವ ಎರಡು ನಾಮಪದಗಳನ್ನು ಒಂದು ಕಡೆ ಸೇರಿಸಿದಾಗ ಕ್ರಿಯಾರಹಿತ ವಾಕ್ಯಗಳೇರ್ಪಡುತ್ತವೆ. ಮೊದಲನೆಯದು ಸಾಮಾನ್ಯವಾಗಿ ಸರ್ವನಾಮ ಅಥವಾ ವಿಶೇಷ ನಾಮಪದಗಳಾಗಿರುತ್ತವೆ. ಎರಡನೆಯದು ಹೆಸರಾಗಲಿ, ವಿಶೇಷಣಾದಿಗಳಿಂದ ಉತ್ಪನ್ನವಾದ ನಾಮಪದವಾಗಲೀ ಆಗಿರಬಹುದು.

ಉದಾ:- ವಾಡು ರಾಮುಡು (ಅವನು ರಾಮ)

ಈಮೆ ಸೀತ (ಈಕೆ ಸೀತೆ)

ಹೀಗೆ ವಿಶೇಷ ಪದಗಳಿಗೆ ವಾಡು, ದಿ, ವಾರು, ವಾಳ್ಳು, ಟಿ ಎಂಬ ಪ್ರತ್ಯಯಗಳನ್ನು ಸೇರಿಸುವುದರಿಂದ ನಾಮಪದಗಳು ಉತ್ಪನ್ನವಾಗುತ್ತವೆ.

ಉದಾ:- ಮಂಚಿವಾಡು (ಒಳ್ಳೆಯವನು)

ಪೆದ್ದವಾಳ್ಳು(ದೊಡ್ಡವರು)

ಅಂದ ಮೈನದಿ(ಅಂದವಾದುದು)

ಕ್ರಿಯಾಸಹಿತ ವಾಕ್ಯಗಳಲ್ಲಿ ಕ್ರಿಯಾರಹಿತ ವಾಕ್ಯಗಳು, ಕ್ರಿಯಾಸಹಿತ ವಾಕ್ಯಗಳು ಎಂಬೆರಡು ವಿಧಗಳಿವೆ. ಕರ್ತೃರಹಿತ ವಾಕ್ಯಗಳಲ್ಲಿ ಅಕರ್ಮಕ ವಾಕ್ಯಗಳು, ಸಕರ್ಮಕ ವಾಕ್ಯಗಳು, ಪ್ರೇರಣ ವಾಕ್ಯಗಳೆಂಬ ೩ ವರ್ಗಗಳು ಕಂಡುಬರುತ್ತವೆ.

ಅಕರ್ಮಕಕ್ಕೆ ಉದಾ: ವಾಡು ನಿದ್ರ ಪೋಯಡು (ಅವನು ನಿದ್ದೆ ಮಾಡಿದ)

ಸಕರ್ಮಕಕ್ಕೆ ಉದಾ: ವಾಡು ಪುಸ್ತಕಂ ಚದುವ್ಯಾಡು (ಅವನು ಪುಸ್ತಕ ಓದಿದ)

ಪ್ರೇರಣವಾಕ್ಯಕ್ಕೆ ಉದಾ : ವಾಡು ಆಮೆ ಚೇತ ಪುಸ್ತಕಂ ಚದಿವಿಂಚಾಡು (ಅವನು ಆಕೆಯಿಂದ ಪುಸ್ತಕ ಓದಿಸಿದ)

ಕ್ರಿಯಾವಿಶೇಷಣಗಳು ಕರ್ತೃಪದದ ನಂತರ ಕ್ರಿಯೆಗೆ ಮೊದಲು ಇರುತ್ತವೆ. ಒಂದೊಂದು ಸಾರಿ ಈ ಕ್ರಮದಲ್ಲಿ ವ್ಯತ್ಯಾಸ ಕಂಡುಬರುತ್ತವೆ.

ಸಂಖ್ಯಾವಾಚಕಗಳು:- ಶಾಸನಕಾಲದ ಸಂಖ್ಯಾವಾಚಕಗಳು ಇಂದಿನ ತೆಲುಗು ಸಂಖ್ಯಾವಾಚಕಗಳಿಗಿಂತ ಭಿನ್ನವಾಗಿವೆ. ಒಕಟಿ(ಒಂದು) ರೆಣ್ಡು (ಎರಡು) ಮೂನ್ಸ್(ಮೂರು) ನಾಲ್ಕು, ಏನು(ಐದು) ಆಮಿ(ಆರು) ತೊಂಭ(ಒಂಬತ್ತು) ಪದಿ(ಹತ್ತು) ನೂಱು(ನೂರು) ವೆಯಿ(ಸಾವಿರ)

ನಂತರದ ಕಾಲದಲ್ಲಿ ಸಂಖ್ಯಾವಾಚಕಗಳಲ್ಲಿ ಸ್ವಲ್ಪ ಬದಲಾವಣೆಗಳಾದವು. ಮೊದಲನೆಯ ಸಂಖ್ಯಾವಾಚಕಕ್ಕೆ ಮಹತ್, ಮಹತೀ ಹಾಗೂ ಅಮಹತ್ ರೂಪಗಳು ಮೂರು ಇವೆ. ಅಮಹತ್ ರೂಪವೇ ವಿಶೇಷವಾಗಿದೆ.

ಮಹದ್ವಾಚಕ : ಒಕರುಡು, ಒಕಡು, ಒಕ್ಕಡು,

ಮಹತೀ ವಾಚಕ: ಒಕ್ಕಟಿ, ಒಕ್ಕತೆ, ಒಕ್ಕರ್ತೆ

ಅನ್ಯದೇಶ್ಯ ಪದಗಳು :-

ಸಂಸ್ಕೃತ, ಪ್ರಾಕೃತಗಳಲ್ಲದೇ ಅನೇಕ ವಿದೇಶೀಯ ಪದಗಳು ತೆಲುಗಿಗೆ ಸೇರುತ್ತಲೆ ಬಂದಿವೆ. ತೆಲುಗು ಕಾವ್ಯಗಳಲ್ಲಿ ಜಮಾ, ಬಜಾರ್, ಸೆಬಾಸು, ತೇಜಿ, ಶಿಕಾರ್, ವಜೀರ್, ಫೌಜು, ಜುಲುಮ್, ಬಂದಿಖಾನಾ ಮುಂತಾದ ಪದಗಳು ಬಳಕೆಯಾಗಿವೆ.

ಕನ್ನಡ ತೆಲುಗು ಭಾಷೆಗಳಲ್ಲಿ ಸ್ವೀಕರಣ ಕಾರ್ಯ ಸಾಕಷ್ಟು ವ್ಯಾಪಕವಾಗಿಯೇ ನಡೆದಿದೆ. ವಿಜಯನಗರ ಸಾಮ್ರಾಜ್ಯದ ಆಡಳಿತಾವಧಿಯಲ್ಲಂತೂ ಇವರ ಸಂಪರ್ಕ ಅತ್ಯಂತ ನಿಕಟವಾಗಿತ್ತು. ತೆಲುಗು ಭಾಷೆಯಲ್ಲಿ ಪದಾದಿಯ 'ಚ್' ರೂಪಗಳು, 'ಸ್' ರೂಪಗಳು ಮತ್ತು 'ಇ' ಅಥವಾ 'ಎ' ಸ್ವರಗಳ ಮೊದಲು ಬರುವ 'ಕ್' ರೂಪಗಳು ಬಹುಮಟ್ಟಿಗೆ ಕನ್ನಡ ಭಾಷೆಯಿಂದ ಬಂದಿದೆ. ಹಾಗೆಯೇ ಕನ್ನಡದಲ್ಲಿ 'ಣ್ಣ' ಇರುವ ಕಡೆ ತೆಲುಗಿನಲ್ಲಿ 'ನ್ನ' ಇರುತ್ತದೆ.

ಉದಾ: - ಅಣ್ಣ-ಅನ್ನ, ಚಿಣ್ಣ-ಚಿನ್ನ, ಸುಣ್ಣ-ಚುನ್ನಮು, ಕಣ್-ಕನ್ನು, ಮಣ್- ಮನ್ನು ಇತ್ಯಾದಿ

ತೆಲುಗು ಭಾಷೆಯಲ್ಲಿನ ಸಾಹಿತ್ಯ ಚರಿತ್ರೆಯ ವಿಭಾಗ ಕ್ರಮ:-

ತೆಲುಗು ಸಾಹಿತ್ಯದ ಬಗೆಗೆ ನೋಡುವುದಾದರೆ ತಲುಗುವಿನಲ್ಲಿ ಪ್ರಾಚೀನ ಕಾಲದಿಂದಲೂ ವಿಪುಲವಾದ ಸಾಹಿತ್ಯ ಸೃಷ್ಟಿಯಾಗಿದೆ. ಅದನ್ನು ಅಧ್ಯಯನದ ದೃಷ್ಟಿಯಿಂದ ಕೆಲವು ವಿಭಾಗಗಳಾಗಿ ವಿಂಗಡಿಸಿಕೊಳ್ಳಬಹುದು.

ಅವುಗಳೆಂದರೆ:-

ನನ್ನಯ ಪೂರ್ವಯುಗ :- ಇದನ್ನೇ ಕೆಲವರು ಪ್ರಾಚೀನಯುಗ, ಶಾಸನಯುಗ, ಅಂಧಕಾರಯುಗ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಲಭ್ಯ ಕೃತಿಗಳಲ್ಲಿ ಮೊದಲನೆದಾದ ಮಹಾಭಾರತದ ಕರ್ತೃ ಆದಿಕವಿ ನನ್ನಯನಿಗೆ ಪೂರ್ವದಲ್ಲಿ ಬೆಳೆದುಬಂದ ಭಾಷಾ ಸಾಹಿತ್ಯಗಳ ಸ್ಥಿತಿಯನ್ನು ತಿಳಿಸುವುದರಿಂದ ಇದನ್ನು ನನ್ನಯ ಪೂರ್ವಯುಗ ಎನ್ನಬಹುದು. ಈ ಕಾಲದ ಸಾಹಿತ್ಯ ಪ್ರಧಾನವಾಗಿ ವಾಚಕರೂಪದ್ದು, ಲಿಖಿತ ರೂಪದ ಸಾಹಿತ್ಯ ಕೆಲವು ಶಾಸನಗಳಲ್ಲಿ ಮಾತ್ರ ಪದ್ಯರೂಪದಲ್ಲಿ ಕಾಣಿಸುತ್ತದೆ.

ಪುರಾಣಯುಗ: ೧೧ನೇ ಶತಮಾನದವರೆಗಿನ ಕಾಲವನ್ನು ಸ್ಥೂಲವಾಗಿ ಪುರಾಣಯುಗವೆಂದು ಕರೆಯಬಹುದು. ಇದನ್ನೇ ಅನುವಾದಯುಗ, ಕವಿತ್ರಯಯುಗ ಎಂದೂ ಕರೆಯುವರು. ಈ ಕಾಲದಲ್ಲಿ ರಾಮಾಯಣ, ಮಹಾಭಾರತ ಇತರ ಪುರಾಣಗಳ ಅನುವಾದಗಳೇ ಹೆಚ್ಚಾಗಿ ರಚಿತವಾಗಿವೆ. ತೆಲುಗು ಸಾಹಿತ್ಯದಲ್ಲಿ ಕಾಲದ ದೃಷ್ಟಿಯಿಂದ , ಕಾವ್ಯಪ್ರಕಾರದ ದೃಷ್ಟಿಯಿಂದ ಇದು ಪುರಾಣಯುಗವೇ ಆಗುತ್ತದೆ.ನನ್ನಯ, ತಿಕ್ಕನ, ಎರ್ರನರೆಂಬ ಕವಿತ್ರಯದ ಮಾರ್ಗಸಾಹಿತ್ಯಕ್ಕೆ ಭಿನ್ನವಾಗಿ ಬೆಳೆದುಬಂದ ಶಿವಕವಿಗಳ ಸ್ವತಂತ್ರ ಕಾವ್ಯಗಳನ್ನು ಪುರಾಣಯುಗದಲ್ಲಿ ಸೇರಿಸಬಹುದು.

ಕಾವ್ಯಯುಗ:- ಶ್ರೀನಾಥ, ಪೋತನ, ಪಿನವೀರನ ಮುಂತಾದವರ ರಚನೆಗಳನ್ನು ಕಾವ್ಯವೆಂಬ ರೂಢಿನಾಮದಿಂದ ಕರೆಯುವುದುಂಟು. ಈ ಕಾಲದಲ್ಲೂ ಕೆಲವು ಪುರಾಣಗಳಿದ್ದರೂ ಅವು ಪುರಾಣಯುಗದ ರಚನೆಗಳಿಗಿಂತ ಭಿನ್ನವಾಗಿದ್ದು ಅನಂತರ ಕಾಲದ ಪ್ರಬಂಧವೆಂಬ ವಿಶಿಷ್ಟ ಕಾವ್ಯಪ್ರಕಾರಕ್ಕೆ ಸ್ಫೂರ್ತಿ ನೀಡಿದೆ. ಪುರಾಣ ಹಾಗೂ ಪ್ರಬಂಧ ಯುಗಗಳ ನಡುವೆ ಒಂದು ಸೇತುವೆಯಂತಿರುವ ಈ ಕಾವ್ಯಯುಗವನ್ನೇ ಕೆಲವರು ಸಂಧಿಯುಗವೆಂದು ಕರೆದಿದ್ದಾರೆ.

ಪ್ರಬಂಧಯುಗ:- ಶ್ರೀಕೃಷ್ಣದೇವರಾಯನ ಆಳ್ವಿಕೆಯ ಕಾಲವನ್ನು ತೆಲುಗು ಸಾಹಿತ್ಯದ ಸುವರ್ಣಯುಗವೆಂದು ಭಾವಿಸಲಾಗಿದೆ. ಈ ಕಾಲದಲ್ಲಿ ಪ್ರಬಂಧವೆಂಬ ವಿಶಿಷ್ಟ ಕಾವ್ಯರೂಪವೊಂದು ರೂಪುಗೊಂಡಿತು. ಪುರಾಣಗಳಿಂದ ಸಂಕ್ಷಿಪ್ತವಾಗಿ ಕತೆಯನ್ನು ತೆಗೆದುಕೊಂಡು ಅಷ್ಟಾದಶ ವರ್ಣನೆಗಳಿಂದ ಅದನ್ನು ಬೆಳೆಸಿ ಒಂದು ಸ್ವತಂತ್ರ ಕಾವ್ಯದಂತೆ ರೂಪಿಸಿದರೆ ಅದು ಪ್ರಬಂಧವಾಗುತ್ತದೆ. ಶ್ರೀಕೃಷ್ಣದೇವರಾಯನ ಕಾಲದಲ್ಲಿ ಹಾಗೂ ಅನಂತರದ ಕಾಲದಲ್ಲಿ ತೆಲುಗಿನಲ್ಲಿ ಅನೇಕ ಪ್ರಬಂಧಗಳು ರಚಿತವಾಗಿವೆ.

ದಕ್ಷಿಣಾಂಧ್ರ ಯುಗ:- ಈ ಯುಗವನ್ನು ರಘುನಾಥಯುಗ, ಯಕ್ಷಗಾನಯುಗ ಮುಂತಾದ ಹೆಸರುಗಳಿಂದ ಕೆಲವರು ಕರೆದಿದ್ದರೂ, ದಕ್ಷಿಣಾಂಧ್ರಯುಗವೆಂಬ ಹೆಸರೇ ಹೆಚ್ಚು ಪ್ರಖ್ಯಾತವಾಗಿದೆ. ವಿಜಯನಗರ ಸಾಮ್ರಾಜ್ಯದ ಪತನಾನಂತರ ಅವರ ಸಾಮಂತರಾದ ನಾಯಕರಾಜರು ತಂಜಾವೂರಿನಲ್ಲಿ ಆಳ್ವಿಕೆ ನಡೆಸಿದರು. ರಾಜಾಶ್ರಯವನ್ನು ಕೋರಿ ಪಂಡಿತರು ತಂಜಾವೂರು ಮಧುರೈ, ಚೆಂಜಿ, ಪುದುಕ್ಕೋಟೆ, ಮೈಸೂರು ಮುಂತಾದ ಪ್ರದೇಶಗಳಿಗೆ ವಲಸೆಹೋದರು. ದಕ್ಷಿಣಾಂಧ್ರಯುಗದಲ್ಲಿ ಕೆಲವು ಪ್ರಬಂಧಗಳು ರಚಿತವಾದರೂ ಇದು ಮುಖ್ಯವಾಗಿ ಯಕ್ಷಗಾನಯುಗ.

ಆಧುನಿಕಯುಗ:- 20ನೇ ಶತಮಾನದ ಸಾಹಿತ್ಯವನ್ನು ಆಧುನಿಕ ಯುಗದ ಸಾಹಿತ್ಯವೆಂದು ಕರೆಯುವುದು ರೂಢಿ. ಇದು ಪ್ರಧಾನವಾಗಿ ಗದ್ಯಯುಗ, ಸಣ್ಣಕತೆ, ಕಾದಂಬರಿ, ನಾಟಕ, ವಿಮರ್ಶೆ ಮುಂತಾದ ಗದ್ಯ ಪ್ರಕಾರಗಳಲ್ಲಿ ಮಾತ್ರವಲ್ಲದೇ ಆಧುನಿಕ ಕಾವ್ಯದಲ್ಲೂ ವೈವಿಧ್ಯ ಕಂಡುಬರುತ್ತದೆ. ಆಧುನಿಕ ಯುಗದ ನವೋದಯ ಕಾಲದಲ್ಲಿ ತೆಲುಗು ಸಾಹಿತ್ಯಕ್ಕೆ ಪಾಶ್ಚಾತ್ಯರು ಮಾಡಿದ ಸೇವೆಯನ್ನು ಮರೆಯುವಂತಿಲ್ಲ.

ಹೀಗೆ ಕಾಲಾನುಕ್ರಮದಲ್ಲಿ ಹಂತಹಂತವಾಗಿ ಬೆಳೆದು ಬಂದ ತೆಲುಗು ಭಾಷೆ ದ್ರಾವಿಡ ಭಾಷೆಗಳಲ್ಲಿ ತನ್ನದೇ ಆದ ಮಹತ್ವದ ಸ್ಥಾನವನ್ನು ಪಡೆದುಕೊಂಡು ಮತ್ತಷ್ಟು ಪ್ರಖರವಾಗಿ ಬೆಳೆಯುತ್ತಲೇ ಇದೆ ಎನ್ನಬಹುದು.

ಮಲೆಯಾಳಂ ಭಾಷೆ

ಪಂಚ ದ್ರಾವಿಡ ಭಾಷೆಗಳಲ್ಲಿ ಮಲೆಯಾಳಂ ಸಹ ಪ್ರಮುಖ ಭಾಷೆಯಾಗಿದೆ. ಮಲೆಯಾಳಂ ಕೇರಳ ರಾಜ್ಯದ ಅಧಿಕೃತ ಭಾಷೆಯಾಗಿದೆ. ಹಾಗೇ ಇದು ಲಕ್ಷದ್ವೀಪದಲ್ಲಿ ಕೂಡ ಪ್ರಮುಖ ಭಾಷೆಯಾಗಿದೆ. ಅನೇಕ ಶತಮಾನಗಳ ಚರಿತ್ರೆಯುಳ್ಳ ಒಂದು ಪುರಾತನ ರಾಜ್ಯ ಕೇರಳ ರಾಮಾಯಣ, ಮಹಾಭಾರತದಲ್ಲೂ ಕೇರಳವನ್ನು ಕುರಿತ ಉಲ್ಲೇಖಗಳು ದೊರೆಯುತ್ತವೆ. ಕ್ರಿ.ಪೂ. ೪ನೇ ಶತಮಾನದಲ್ಲಿ ಅಲೆಗ್ಸಾಂಡರ್‌ನ ಸೇನಾಧಿಪತಿ ಆಗಿದ್ದ ಸೆಲ್ಯೂಕಸ್‌ನ ರಾಯಭಾರಿಯಾಗಿ ಭಾರತಕ್ಕೆ ಬಂದಿದ್ದ ಮೆಗಾಸ್ತನೀಸನು ಕೇರಳವನ್ನು ಮತ್ತು ಕೇರಳವನ್ನಾಳುತ್ತಿದ್ದ ರಾಜನನ್ನು ಕುರಿತು ಉಲ್ಲೇಖಿಸಿದ್ದಾನೆ. ಅಶೋಕನ ಶಾಸನಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳ ಸಮೂಹದಲ್ಲಿ ಕೇರಳದ ವಿಷಯವನ್ನೇ ಪ್ರತ್ಯೇಕವಾಗಿ ತಿಳಿಸಲಾಗಿದೆ. ತಿರುವಂಚಿಕುಳಂ ಅನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ಚೇರರಾಜರ ಆಡಳಿತ

ಕಾಲದಲ್ಲಿ ಕೇರಳವು ದಕ್ಷಿಣಭಾರತದ ಪ್ರಮುಖ ರಾಜ್ಯಗಳಲ್ಲೊಂದಾಗಿತ್ತು ಎನ್ನುವುದಕ್ಕೆ ಸಾಕಷ್ಟು ಪುರಾವೆಗಳು ದೊರೆಯುತ್ತವೆ. 'ಪದಿಟ್ಟುಪತ್ತು', 'ಶಿಲಪದಿಕಾರಂ', 'ಮಣಿಮೇಖಲ' ಮುಂತಾದ ಪ್ರಾಚೀನ ಚೆಂದಮಿಳು ಕೃತಿಗಳು ಚೇರರಾಜರ ಆಡಳಿತ ಕಾಲದ ಸಾಹಿತ್ಯದ ಹಿರಿಮೆಗೆ ಸಾಕ್ಷಿಗಳಾಗಿವೆ.

ಮಲೆಯಾಳಂ ಪದದ ನಿಷ್ಪತ್ತಿ:-

ದಕ್ಷಿಣ ಸಮುದ್ರ ತೀರದ ಪ್ರದೇಶ ಹಾಗು ಅಲ್ಲಿನ ಭಾಷೆಯನ್ನು ಪ್ರತಿನಿಧಿಸುವ 'ಮಲೆಯಾಳಂ' ಎಂಬ ಹೆಸರು ಅತ್ಯಂತ ಹಳೆಯ ಹೆಸರಾಗಿರದೆ ಹೊಸ ಹೆಸರಿರಬೇಕೆಂದು ಕೆಲವರು ಭಾವಿಸಿದ್ದಾರೆ. ಏಕಂದರೆ 17 ನೇ ಶತಮಾನಕ್ಕಿಂತ ಹಿಂದಿನ ಶಾಸನಗಳಲ್ಲಾಗಲೀ ಅಥವಾ ಇತರ ಸಾಹಿತ್ಯ ಕೃತಿಗಲ್ಲಾಗಲೀ ಮಕಾರಾಂತವಾದ ಮಲೆಯಾಳಂ ಎಂಬ ಪದದ ಪ್ರಯೋಗ ದೊರೆತಿಲ್ಲ. 17ನೇ ಶತಮಾನಕ್ಕಿಂತಲೂ ಹಿಂದೆಯಿದ್ದ ಪದಗಳೆಂದರೆ 'ಮಲೆನಾಟ್ಟು' ಮತ್ತು 'ಮಲೆಯಾಳಿ' ಹಾಗೂ 'ಮಲೆಯಾಣ್ಮ' ಎಂಬುವು. ಇವುಗಳಲ್ಲಿ 'ಮಲನಾಟ್ಟು' ಎಂಬುದು ಆ ಜಾಗಕ್ಕೆ ಬಳಕೆಯಾಗುತ್ತಿದ್ದ ಹೆಸರು ಮಲೆಯಾಳರ್ ಅಥವಾ ಮಲೆಯಾಳಿ ಎಂಬುದು ಅಲ್ಲಿನ ಜನರಿಗೆ ಅನ್ವಯವಾಗುತ್ತಿದ್ದ ಹೆಸರು ಮಲೆಯಾಣ್ಮ ಎಂಬುದು ಅವರು ಆಡುವ ಭಾಷೆಗೆ ಇದ್ದ ಹೆಸರು. ಇವೆಲ್ಲ ಪದಗಳಿಗಿಂತಲೂ ಹಿಂದೆ ತಮಿಳ್ ಎಂಬ ಪದವನ್ನೆ ಈ ಭಾಷೆಗೂ ಬಳಸುತ್ತಿದ್ದಿರಬೇಕೆಂಬ ಮತ್ತೊಂದು ಊಹೆಯೂ ಇದೆ.[೧]

'ಮಲೆ' ಎಂದರೆ ಬೆಟ್ಟ ಇಲ್ಲವೇ ಪರ್ವತ ಉತ್ತರಾರ್ಧದ 'ಆಳಂ' ಎಂಬುದು 'ಆಳ' ಎನ್ನುವ ಅರ್ಥವಿರುವ 'ಅಲಂ'ನ ಪರ್ಯಾಯ ರೂಪವಿರಬಹುದು. ಇಲ್ಲಿ 'ಆಳ ಎಂದರೆ 'ಸಮುದ್ರ' ಸೂಚಿತವಾಗುವುದು ಹಾಗಾಗಿ ಮಲೆಯಾಳಂ ಎಂದರೆ ಪಶ್ಚಿಮ ಘಟ್ಟಗಳು ಹಾಗೂ ಸಮುದ್ರಗಳ ನಡುವೆ ಸ್ಥಳ ಎಂದು ಅರ್ಥ ಮಾಡಿಕೊಳ್ಳಬಹುದು ಹಾಗೆ 'ಆಳಂ' ಎಂದರೆ 'ಸ್ಥಳ'ವೆನ್ನುವ ಅರ್ಥವುಳ್ಳ ಪದದಿಂದಲೂ ನಿಷ್ಪನ್ನವಾಗಿರಬಹುದು ಹೀಗಾದಾಗ 'ಮಲೆಯಾಳಂ ಎಂದರೆ ಬೆಟ್ಟಗಳು ಹೆಚ್ಚಾಗಿರುವ ಸ್ಥಳ ಎಂದು ಅರ್ಥ ಸಾಧ್ಯ. ಆಗ ಈ ಪದವು ಮಲನಾಡು ಹಾಗೂ ಮಲಬಾರ್‌ಗಳೊಡನೆ ಸಮಾನಾರ್ಥಕವಾಗುತ್ತದೆ. ಈ ಭಾಷೆಯನ್ನು ಇನ್ನೂ ಬೇರೆ ಬೇರೆ ಹೆಸರುಗಳಿಂದಲೂ ಗುರುತಿಸಲಾಗಿದೆ. 'ಕೇರಳ ಭಾಷೆ, 'ಮಲಯಂಪಟಿ' 'ಮಲೆಯಾಳಿವ್' 'ಮಲೆಯಾಯ್ಮ' 'ಮಲೆಯಾಣ್ಮ' ಹಾಗೂ 'ಮಲೆಯಾಟ್ಮ' ಎಂಬ ರೂಪಗಳು ಬಳಕೆಯಾಗಿದೆ. ಇವುಗಳಲ್ಲಿ 'ಕೇರಳ ಭಾಷೆ ' ಎಂಬುದು 14 ನೇ ಶತಮಾನದ ಕಾವ್ಯಮೀಮಾಂಸಾ ಗ್ರಂಥ 'ಲೀಲಾ ತಿಲಕಂ' ನಲ್ಲಿ ಬಳಕೆಯಾಗಿರುವ ರೂಪ 1841 ರಲ್ಲಿ 'ಗ್ರಾಮರ ಆಫ್ ಮಲೆಯಾಳಿಮ್' ಪ್ರಕಟಿಸಿದ ಫ್ಲೀಟ್ ಮೊದಲಾಗಿ ಹಲವು ವಿದೇಶಿಯರು 'ಮಲೆಯಾಳಿಂ' ರೂಪ ಬಳಸಿದ್ದಾರೆ. 1891 ರವರೆಗಿನ ಲಿಖಿತ ದಾಖಲೆಗಳಲ್ಲಿ 'ಮಲೆಯಾಣ್ಮ ' ರೂಪ ಕಾಣಿಸುತ್ತದ್.

ಮಲೆಯಾಳಂ ಭಾಷೆಯ ಉಗಮ :-

ಹಲವು ವೈಯ್ಯಾಕರಣರು, ಮಲೆಯಾಳಂ ಸಾಹಿತ್ಯ ಚರಿತ್ರೆಕಾರರು ಮತ್ತಿತರ ವಿದ್ವಾಂಸರು ಮಾಲೆಯಾಳಂ

ಭಾಷೆಯ ಉಗಮವನ್ನು ಕುರಿತಂತೆ ತಮ್ಮ ನಿಲುವುಗಳನ್ನು ಮಂಡಿಸಿದ್ದಾರೆ ಈ ಸಂಬಂಧದಲ್ಲಿ ಮಂಡಿತವಾಗಿರುವ ಬಹುಪಾಲು ಆಧಾರಕಲ್ಪನೆಗಳಿಗೆ ಭಾಷೆಯ ಉಗಮ ಮತ್ತು ವಿಕಾಸಗಳನ್ನು ಕುರಿತ ವಿಚಾರಗಳ ಚರಿತ್ರೆಯಲ್ಲಿ ಮಾತ್ರ ಸ್ಥಾನ ದೊರೆಕುವುದು ಸಾಧ್ಯ. ಇವುಗಳಲ್ಲಿ ಅತ್ಯಂತ ಸಂಪ್ರದಾಯವಾದಿ ವಿಚಾರದಂತೆ ಮಲಯಾಳಂನ ಸಂಸ್ಕೃತದಿಂದ ಹುಟ್ಟಿ ಬಂದಿದೆ. ಇನ್ನೊಂದು ವಿಚಾರದ ಪ್ರಕಾರ ಮಲೆಯಾಳಂನ ಮೂಲ ಯಾವುದೋ ಒಂದು ಪ್ರಾಕೃತ ಭಾಷೆ. ಕೇರಳದ ಆದಿವಾಸಿ ಬುಡಕಟ್ಟಿನವರ ಸ್ವತಂತ್ರ ಭಾಷೆ ಹಾಗೂ ದ್ರಾವಿಡ ಭಾಷೆಗಳ ಮಲೆಯಾಳಂ ಎಂಬ ವಾದವೂ ಇದೆ. ಮಾಲೆಯಾಳಂ ಭಾಷೆಯು ತಮಿಳು ಮತ್ತು ಸಂಸ್ಕೃತಿಗಳ ಸಂಯೋಜನೆಯ ಫಲವೆಂಬ ಇನ್ನೊಂದು ಅಭಿಪ್ರಾಯ ಕೂಡ ಇದೆ. ತಮಿಳು ಹಾಗೂ ಮಲೆಯಾಳಂಗಳ ನಡುವೆಯಿಂದ ಎದ್ದು ಕಾಣುವ ಸಮಾನಾಂಶಗಳು ಹಾಗೂ ಅವುಗಳ ಸಂದೇಹಾತೀತ ಭಿನ್ನತೆ ಬಹುಕಾಲದಿಂದಲೂ ವಿದ್ವಾಂಸರನ್ನು ಆಕರ್ಷಿಸುವ ವಿಷಯವಾಗಿದ್ದು ಆ ಬಗೆಗೆ ವಾದಗಳು ನಡೆದಿವೆ. ಕೆಲವರು ಮಲೆಯಾಳಂ ತಮಿಳಿನ ಮಗಳು ಎಂದೆರೆ, ಇನ್ನುಳಿದವರು ಪೂರ್ವ ದ್ರಾವಿಡ ಭಾಷೆಯ ಮಗಳೂ, ತಮಿಳನ ಸೋದರಿಯೂ ಎಂದಿದ್ದಾರೆ. ಈ ಅಭಿಪ್ರಾಯವನ್ನೇ ಕಾಲ್ಡವೆಲ್ ತಮ್ಮ Comparative Grammar & Dravidian Languageನಲ್ಲಿ ಮಲಯಾಳಂ ಭಾಷೆಯನ್ನು ಕುರಿತು ಹೀಗೆ ಹೇಳಿದ್ದಾರೆ originally it is true I consider it to have been not a sister of tamil but a daughter ಎಂದಿದ್ದಾರೆ.

ಈಗ ತಮಿಳು, ಕೋತ, ತೋಡ, ಕೊಡಗು ಹಾಗೂ ಕನ್ನಡಗಳೊಡನೆ ಮಲೆಯಾಳಂ ಅದ್ನು ದಕ್ಷಿಣ ದ್ರಾವಿಡ ಭಾಷಾ ಗುಂಪಿಗೆ ಸೇರಿಸಬಹುದು. ಮಲೆಯಾಳಂಗೆ ತಮಿಳಿನೊಡನೆ ಅತಿ ಹೆಚ್ಚು ಪ್ರಮಾಣದ ಸಾಮಿಪ್ಯವಿದೆ ಪೂರ್ವ ತಮಿಳು ಮಲಯಾಳಂ ಎನ್ನಬಹುದಾದ ರೂಪದ ಪದಕೋಶವು ಈ ಎರಡೂ ಭಾಷೆಗಳಿಗೂ ಸಮಾನವಾಗಿರುವುದೇ ಅದಕ್ಕೆ ಕಾರಣ ಮಲೆಯಾಳಂ ಒಂದು ಸ್ವತಂತ್ರ ಭಾಷೆಯಾಗಿ ಉಗಮಗೊಂಡ ಸಾಕ್ಷ್ಯ ಒದಗಿಸುವ ಅತಿ ಪ್ರಾಚೀನ ಲಿಖಿತ ದಾಖಲೆಗಳು 9ನೇ ಶತಮಾನದ ಶಾಸನಗಳಲ್ಲಿವೆ. ಮಲೆಯಾಳಂ ಮತ್ತು ತಮಿಳಿಗೆ ಸಮಾನ ಪದಕೋಶ ಒದಗಿಸಿದ ಪೂರ್ವ-ತಮಿಳು -ಮಲೆಯಾಳಂ ರೂಪವು ವಿಘಟನೆಗೊಂಡು ಮಲಯಾಳಂ ಮತ್ತು ತಮಿಳು ಭಾಷೆಗಳು ಪ್ರತ್ಯೇಕಗೊಂಡಿದಕ್ಕೆ ಈ ಲಿಖಿತ ದಾಖಲೆಗಳು ಪುರಾವೆಗಳಾಗಿವೆ.ಈ ವಿಘಟನೆಯ ಪ್ರಕ್ರಿಯೆಯು ನಾಲ್ಕೈದು ಶತಮಾನಗಳ ಅವಧಿ (9 ರಿಂದ13) ಯಲ್ಲಿ ನಡೆದಿದೆ. ಈ ಕಾಲಾವಧಿಯ ಆಡು ಮಾತಿನ ರೂಪ ಹೇಗಿತ್ತೆಂಬುದರ ಪುನಾರಚನೆ ಇನ್ನೂ ನಡೆಯಬೇಕಾಗಿದೆ. ದ್ರಾವಿಡ ಭಾಷೆಗಳಲ್ಲಿ ತನ್ನ ಕೃತಿಗಳ ಮೂಲಕ ತನ್ನದೇ ಆದ ಸಾಹಿತ್ಯ ಪರಂಪರೆಯನ್ನು ರೂಪಿಸಿಕೊಂಡಿದ್ದರಲ್ಲಿ ಮಲೆಯಾಳಂ ಭಾಷೆಯೇ ಕೊನೆಯದ್ದೆಂದು ತೋರುತ್ತದೆ.

ಮಲೆಯಾಳಂ ವಿಕಾಸ ಮೊದಲ ಶತಕಗಳಲ್ಲಿ ತಮಿಳಿನ ಪ್ರಭಾವ ಎದ್ದು ತೋರುವಂತಿವೆ. ಮಲಯಾಳಂ ಜನಸಾಮಾನ್ಯರ ಭಾಷೆಯಾಗಿತ್ತಾದರೂ ಪಶ್ಚಿಮ ಕರಾವಳಿಯಲ್ಲಿ ಕೂಡ ತಮಿಳು ವಿದ್ವಾಂಸರ ಭಾಷೆಯ ಸ್ಥಾನವನ್ನು ಗಳಿಸತ್ತು ಹೀಗಿದ್ದರೂ ಅನಂತರದಲ್ಲಿ ಕೇರಳದ ಆಡುನುಡಿಗೆ ಮೇಲುಗೈ ದೊರಕಿತು.

ಇಡೀ ದಕ್ಷಿಣ ಭಾರತದಲ್ಲಿ ಅದರಲ್ಲೂ ಕೇರಳದಲ್ಲಿ ಆರ್ಯರು ಸ್ಥಾಪಿಸಿದ ಸಾಂಸ್ಕೃತಿಕ ವಿಜಯದ ನೇರ ಪರಿಣಾಮವೆಂದರೆ, ದೇಶ್ಯ ಭಾಷೆಗಳು ಸಂಸ್ಕೃತ ಮತ್ತು ಪ್ರಾಕೃತಗಳ ಪರಿಣಾಮಗಳಿಗೆ ಒಳಗಾಗಿದ್ದು, ಬ್ರಾಹ್ಮಣರು ಮತ್ತವರ ಭಾಷೆಯ ಪರಿಣಾಮ ಕೇರಳದ ಜನರ ಜೀವನ ಹಾಗೂ ಭಾಷೆಗಳ ಮೇಲೆ ಬೀರಿರುವ ಪರಿಣಾಮ ಗಮನಾರ್ಹವಾಗಿದೆ. ಧ್ವನಿರಚನೆ, ಆಕೃತಿಮಾರಚನೆ, ಸಂಧಿ, ವಾಕ್ಯರಚನೆ ಹಾಗೂ ಅರ್ಥ ವ್ಯವಸ್ಥೆ ಇವೇ ಮೊದಲಾದ ಎಲ್ಲಾ ಭಾಷಿಕ ನೆಲಗಳಲ್ಲೂ ಮಲೆಯಾಳಂ ಭಾಷೆಯ ಮೇಲೆ ಆರ್ಯರ ಪ್ರಭಾವ ಎದ್ದು ಕಾಣುತ್ತದೆ.

ಪ್ರಾದೇಶಿಕ ಭೇದಗಳೂ ಮತ್ತು ಉಪ ಭಾಷೆಗಳು:-

ಇಂದಿನ ಮಲೆಯಾಳಂ ನ ಒಟ್ಟು ಬಳಕೆಯಲ್ಲಿ ಹಲವು ಬಗೆಯ ಭಾಷಾ ಪ್ರಭೇದಗಳು ಕಂಡು ಬರುತ್ತವೆ. ಸಾಮಾನ್ಯವಾಗಿ ಹೇಳುವುದಾದರೆ ಈ ವ್ಯತ್ಯಾಸವನ್ನು 'ದಕ್ಷಿಣ' ಮತ್ತು 'ಉತ್ತರ' ಎಂದು ಎರಡು ವಿಭಾಗ ಮಾಡಬಹುದು. ಈ ರೀತಿಯ ವಿಭಾಗಕ್ಕೆ ಪ್ರಾದೇಶಿಕ ಭೇದವೇ ಆಧಾರವಾಗಿದ್ದರೂ ಒಂದೊಂದು ವಿಭಾಗಕ್ಕೂ ಪ್ರಾದೇಶಿಕವಾದ ಮೇರೆಯನ್ನು ನಿರ್ಣಯಿಸುವುದು ಸಾಧ್ಯವಿಲ್ಲ ಇದರಿಂದ ಮತ್ತೆ ದಕ್ಷಿಣ ಉತ್ತರ ಎನ್ನುವ ವಿಭಾಗಗಳುಂಟಾಗುತ್ತವೆ. ದಕ್ಷಿಣ ತಿರುವಾಂಕೂರು, ಉತ್ತರ ತಿರುವಾಂಕೂರು, ಕೊಚ್ಚಿ, ದಕ್ಷಿಣ ಮಲಬಾರ್, ಉತ್ತರ ಮಲಬಾರ್ ಮುಂತಾದ ಪ್ರದೇಶಗಳಲ್ಲಿ ಬಳಸಲ್ಪಡುವ ಭಾಷೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳಿವೆ. ಪ್ರಾದೇಶಿಕ ಹಾಗೂ ಸಾಮಾಜಿಕ, ಸಾಂಸ್ಕಾತಿಕ ಅಂಶಗಳ ಜೊತೆಗೆ ಕೇರಳದಲ್ಲಿ ಕಾಣಸಿಗುವ ಭಾಷಾ ಪ್ರಭೇದಗಳ ನಿರ್ದೇಶಕ ಬಿಂದುಗಳಲ್ಲಿ ಮತಧರ್ಮ ಹಾಗೂ ಜಾತಿಗಳು ಪಾತ್ರವಹಿಸುತ್ತವೆ. ಹೀಗಾಗಿ ಬ್ರಾಹ್ಮಣರು, ಹರಿಜನರು, ನಾಯರರು, ಕ್ರಿಶ್ಚಿಯನ್ನರು ಹಾಗೂ ಮುಸ್ಲಿಮರು ಆಡುವ ಉಪಭಾಷೆಗಳ ಮುಖ್ಯ ಲಕ್ಷಣಗಳನ್ನು ಗುರುತಿಸುವುದು ಸಾಧ್ಯವಾಗಿದೆ. ಸಾಮಾನ್ಯವಾಗಿ ಬ್ರಾಹ್ಮಣರ ಉಪಭಾಷೆಯಲ್ಲಿ ಅತ್ಯಧಿಕ ಪ್ರಮಾಣದ ಸಾಂಸ್ಕೃತದ ಪ್ರಭಾವವಿದ್ದರೆ, ಹರಿಜನರ ಭಾಷೆಯಲ್ಲಿ ಸಂಸ್ಕೃತದ ಪ್ರಭಾವ ಅತಿ ಕಡಿಮೆ ಪ್ರಮಾಣದಲ್ಲಿದೆ. ಕ್ರಿಶ್ಚಯನ್ನರ ಉಪ ಭಾಷೆಯಲ್ಲಿ ಇಂಗ್ಲಿಷ್, ಸಿರಿಯಾಕ್, ಲ್ಯಾಟಿನ್ ಹಾಗೂ ಪೋರ್ಚುಗೀಸ್ ಭಾಷೆಗಳಿಂದ ಎರವಲು ಪಡೆದ ಪದಗಳೇ ಮುಖ್ಯವಾಗಿವೆ. ಮುಸ್ಲೀಮರ ಉಪ ಭಾಷೆ ಅರಬಿಕ್ ಮತ್ತು ಉರ್ದುಗಳಿಂದ ಹೆಚ್ಚು ಪ್ರಭಾವಿತವಾಗಿದೆ.

ಅನ್ಯದೇಶ್ಯ ಶಬ್ಧಗಳ ಸ್ವೀಕರಣ:-

ಹಲವು ಶತಮಾನಗಳ ವಿಕಾಸ ಪಥದಲ್ಲಿ ಮಲೆಯಾಳಂ ಬೇರೆ ಬೇರೆ ಭಾಷೆಗಳೊಡನೆ ವಿಭಿನ್ನ ಪ್ರಮಾಣದ ಸಂಪರ್ಕವನ್ನು ಪಡೆಯಿತು. ಸಂಸ್ಕೃತ, ಪ್ರಾಕೃತ, ಪಾಲಿ, ಹಿಂದಿ, ಮರಾಠಿ, ಉರ್ದು, ಅರಾಬಿಕ್, ಪರ್ಶಿಯನ್ ಪೋರ್ಚುಗೀಸ್, ಇಂಗ್ಲಿಷ್ - ಹೀಗೆ ಇವೇ ಮೊದಲಾದ ಭಾಷೆಗಳ ಸಂಪರ್ಕದಿಂದಾಗಿ ಹಲವಾರು ಅನ್ಯಭಾಷಿಕ ಅಂಶಗಳು ಬಳಕೆಗೆ ಬಂದವು ಮಲೆಯಾಳಂನ ರಚನೆಯ ಮೇಲೆ ಅತಿ ಹೆಚ್ಚಿನ

ಪ್ರಮಾಣದ ಪ್ರಭಾವವನ್ನು ಬೀರಿದ ಭಾಷೆಯೆಂದರೆ ಸಂಸ್ಕೃತ ಮಲೆಯಾಳಂ ಲಿಪಿಗಳಲ್ಲಿ ಸಂಸ್ಕೃತದ ಎಲ್ಲಾ ಧ್ವನಿಮಾಗಳನ್ನು ಪ್ರತಿನಿಧಿಸುವುದು ಸಾಧ್ಯವಿದೆಯಾದ್ದರಿಂದ ನಾಮರೂಪ, ಅವ್ಯಯಾದಿಗಳನ್ನು ಮಾತ್ರವಲ್ಲದೆ ಸಂಸ್ಕೃತದಿಂದ ಕ್ರಿಯಾ ಧಾತುಗಳನ್ನು ಕೂಡ ಅಧಿಕವಾಗಿ ಮಲೆಯಾಳಂ ಎರವಲು ಪಡೆದಿದೆ. ಮಲೆಯಾಳಂನ ಪದಕೋಶದೊಳಗೆ ಕೂಡ ಸಂಸ್ಕೃತ ಪದಗಳು ನುಗ್ಗಿವೆ.

ಉದಾ : ನಖಂ (ಉಗುರು) ಮುಖಂ (ಮುಖ) ಭಾರ್ಯಾ (ಹೆಂಡತಿ) ಭರ್ತೃ (ಗಂಡ).

ನ್ಯಾಯಾಂಗಕ್ಕೆ ಸಂಬಂಧಿಸಿದ ಪದಗಳನ್ನು ಅರಾಬಿಕ್‌ನಿಂದ ಎರವಲು ಪೆಡಯಲಾಗಿದೆ.

ಉದಾ:- ಹರ್ಜಿ (ಅರ್ಜಿ) ಸನ್ನತ (ಘೋಷಣಾ ಪತ್ರ)

ಕಾರ್ಯಾಂಗಕ್ಕೆ ಸಂಬಂಧಿಸಿದ ಪದಗಳು ಪರ್ಷಿಯನ್‌ನಿಂದ ಬಂದಿವೆ.

ಉದಾ:- ಯಾದಾಸ್ತ (ಕೋರಿಕೆ ಪತ್ರ) ಗುಮಾಸ್ತನ್ (ಗುಮಾಸ್ತ) ಶುಪಾರ್ಶ (ಶಿಫಾರಸ್ಸು)

ಪೋರ್ಚುಗೀಸ್, ಡಚ್ ಹಾಗೂ ಫ್ರೆಂಚ್ ಭಾಷೆಗಳಿಂದ ಸುಮಾರು 200 ಪದಗಳು ಮಲೆಯಾಳಂಗೆ ಬಂದಿವೆ. ಪೋರ್ಚುಗೀಸ್ ಮೊದಲು ಪ್ರಭಾವಿಸಿದ ಕಾರಣ ಅವುಗಳ ಸಂಖ್ಯೆ ಹೆಚ್ಚಾಗಿದೆ. ಹಾಗೆಯೇ ಚರ್ಚ್‌ಗಳಲ್ಲಿನ ವಿಧಗಳಲ್ಲಿ ಧಾರ್ಮಿಕ ವ್ಯವಹಾರಗಳಲ್ಲಿ ಬಳಸಲಾಗುವ ಕೆಲವು ಪದಗಳು ಸಿರಿಯಾಕ್‌ನಿಂದ ಬಂದಿದೆ.

ಮಲೆಯಾಳಂ ಭಾಷೆಯ ಮೇಲೆ ಬೀರಿರುವ ಪ್ರಭಾವದ ದೃಷ್ಟಿಯಿಂದ ಸಂಸ್ಕೃತದ ಅನಂತರದ ಸ್ಥಾನ ಇಂಗ್ಲಿಷಿಗೆ ದೊರಕುತ್ತದೆ. ಇಂಗ್ಲಿಷ್‌ನಿಂದ ಎರವಲು ಪಡೆಯುವ ಪ್ರಕ್ರಿಯೆಯು ಇನ್ನೂ ಮುಂದುವರಿಯುತ್ತಿದ್ದು, ವಿಜ್ಞಾನ, ತಂತ್ರಜ್ಞಾನ, ವಾಣಿಜ್ಯ, ವ್ಯವಹಾರ, ಶಿಕ್ಷಣ, ಸಾಹಿತ್ಯ, ಸಾರಿಗೆ, ರಾಜಕೀಯ, ಸಾಮಾಜಿಕ ವ್ಯವಹಾರಗಳು ಇತ್ಯಾದಿ ವಲಯಗಳಲ್ಲಿ ಇಂಗ್ಲಿಷ್ ಪದಗಳು ಚಲಾವಣೆಗೆ ಬಂದು ಎಷ್ಟು ಮನ್ನಣೆ ಪಡೆದಿದೆಯೆಂದರೆ ಮೊದಲೇ ಭಾಷೆಯಲ್ಲಿ ಇದ್ದಿರಬಹುದುದಾದ ದೇಶ್ಯ ಶಬ್ದಗಳು ಚಲಾವಣೆ ಕಳೆದುಕೊಂಡಿವೆ. ಇಂಗ್ಲಿಷ್ ಭಾಷೆಯಿಂದ ಎರವಲು ಬಂದ ನೂರಾರು ಪದಗಳ ಜೊತೆಗೆ ಶಿಕ್ಷಿತ ಮಲೆಯಾಳಿಗಳ ಮಾತಿನಲ್ಲಿ, ಬರಹದಲ್ಲಿ, ಬಳಕೆಯಾಗುವ ಹಲವು ಪದಗಳು ಇಂಗ್ಲಿಷ್ ಮೂಲದಿಂದ ಬಂದಿದೆ.

ಉದಾ:- ಕರಿಂಕಾಲಿ (black leg) ಶೀತಲಸಮರ (cold war) ವೆಳ್ಳಾನ (white elefhant) ಮುಂತಾದ ರೂಪಗಳು ಭಾಷೆಯಲ್ಲಿ ಬಲವಾಗಿ ಬೇರೂರಿವೆ.

ಹೀಗೆ ಮಲೆಯಾಳಂ ಭಾಷೆಯು ಅನೇಕ ಭಾಷೆಗಳಿಂದ ಪದಗಳನ್ನು ಸ್ವೀಕರಿಸಿಕೊಂಡು ಬಂದಿದ್ದು ಹಂತಹಂತವಾಗಿ ಬೆಳೆಯುತ್ತಾ ಬರುವುದರ ಜೊತೆಗೆ ತನ್ನ ಭಾಷೆಯ ಪದಕೋಶವನ್ನು ವಿಸ್ತರಿಸಿ ಕೊಳ್ಳುವುದರ ಜೊತೆಗೆ, ತನ್ನ ಭಾಷೆಯ ಪದ ಸಂಪತ್ತನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ತನ್ನ ಭಾಷೆಯನ್ನು ಶ್ರೀಮಂತಗೊಳಿಸುತ್ತಿದೆ ಎಂದು ಹೇಳಬಹುದು.

ಮಲಯಾಳಂ ಲಿಪಿ:-

ಇಂದು ಮಲಯಾಳಂಗೆ ಸ್ವಂತವಾದ ಒಂದು ಲಿಪಿಯಿದೆ. ಆದರೆ ಮೊದಲು 'ವಟ್ಟೆಳುತ್ತು' ಎನ್ನುವ ಅಕ್ಷರಮಾಲೆ ಬಳಕೆಯಲ್ಲಿತ್ತು. ವಟ್ಟೆಳುತ್ತು ಚೇರ, ಪಾಂಡ್ಯ ರಾಜ್ಯಗಳಲ್ಲೆಲ್ಲ ಪ್ರಚಾರದಲ್ಲಿತ್ತು. ಕ್ರಿ. ಶ. 15ನೇ ಶತಮಾನದಿಂದ ಅದು ಆ ದೇಶಗಳಿಂದ ಮಾಯವಾಯಿತು. ಆದರೆ ಕೇರಳದಲ್ಲಿ ಸುಮಾರು ಕ್ರಿ. ಶ 18ನೇ ಶತಮಾನದವರೆಗೂ ಆ ಲಿಪಿಯ ಅಧಿಪತ್ಯವಿತ್ತು. ದಾಖಲೆಗಳು, ಬರಹಗಳು, ಗ್ರಂಥಗಳು, ಶಿಲಾಶಾಸನಗಳು - ಇವೆಲ್ಲವನ್ನೂ ಹೆಚ್ಚಾಗಿ ವಟ್ಟೆಳುತ್ತುವಿನಲ್ಲಿಯೇ ಬರೆಯಲಾಗುತ್ತಿತ್ತು. ಹಿಂದಿನ ಕಾಲದಲ್ಲಿ ಮಕ್ಕಳಿಗೆ ಅಕ್ಷರಮಾಲೆ ಕಲಿಸಿಕೊಡುವಾಗ ಮಲೆಯಾಳಂ ಮತ್ತು ತಮಿಳು ಲಿಪಿಗಳ ಜೊತೆಗೆ ವಟ್ಟೆಳುತ್ತನ್ನೂ ಕಲಿಸಿಕೊಡಲಾಗುತ್ತಿತ್ತು.

ವಟ್ಟೆಳುತ್ತಿನಿಂದ ಕಾಲಕ್ರಮೇಣ 'ಕೋಲೆಳತ್ತು' ಎನ್ನುವ ಲಿಪಿ ಹುಟ್ಟಿಕೊಂಡಿತು. ಕೋಲಿನಿಂದ ಬರೆಯುತ್ತಿದ್ದುದರಿಂದ ಅದಕ್ಕೆ ಆ ಹೆಸರು ಬಂದಿದ್ದು ವಟ್ಟೆಳುತ್ತಿಗಿಂತ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಅದಕ್ಕೆ ಇರಲಿಲ್ಲ. ಸಂವೃತೋಕಾರ, ಏಕಾರ, ಓಕಾರ, ಎಂಬಿವುಗಳಿಗೆ ಪ್ರತ್ಯೇಕ ಚಿಹ್ನೆಗಳು ಕೋಲೆಳುತ್ತಿನಲ್ಲಿವೆ ಎನ್ನುವ ವಿಶೇಷತೆ ಹೆಸರಿಸುವಂತದ್ದು ಈ ಲಿಪಿ ಸಂಪ್ರದಾಯಕ್ಕೆ ಕೊಚ್ಚಿ, ಮಲಬಾರ್‌ನಲ್ಲೂ ಹೆಚ್ಚು ಪ್ರಚಾರ ದೊರಕಿತು. ವೆಟ್ಟೆಳುತ್ತಿನಿಂದಲೇ ಉಂಟಾದದ್ದೂ, ಆದರಿಂದ ಸ್ವಲ್ಪ ವ್ಯತ್ಯಾಸವಿರುವುದೂ ಆದ ಮತ್ತೊಂದು ಲಿಪಿ ಪ್ರಭೇದವೇ 'ಮಲೆಯಾಣ್ಮ' ಲಿಪಿ. ಅದು ತಿರುವುನಂತಪುರದಿಂದ ದಕ್ಷಿಣಕ್ಕಿರುವ ಪ್ರದೇಶಗಳಲ್ಲಿ ಮಾತ್ರ ಹೆಚ್ಚು ಪ್ರಚಾರದಲ್ಲಿದ್ದದ್ದು .

ಮೇಲೆ ಹೇಳಿದ ಮೂರು ಲಿಪಿಗಳೂ ಅಸ್ತಿತ್ವದಲ್ಲಿದ್ದ ಕಾಲದಲ್ಲಿಯೇ ಅವುಗಳನ್ನು ಓದುವುದಕ್ಕೆ ಅಷ್ಟೊಂದು ಸುಲಭವಾಗಿದ್ದಂತೆ ತೋರುವುದಿಲ್ಲ ವಟ್ಟೆಳುತ್ತೇ ಆ ಮೂರು ಲಿಪಿಗಳಲ್ಲೂ ಹೆಚ್ಚು ಗಣ್ಯವಾಗಿದ್ದದ್ದು. ಅದು ಕೇರಳದಲ್ಲಿ ಹೆಚ್ಚು ಪ್ರಚಾರದಲ್ಲಿ ಇತ್ತು . ಅದಕ್ಕೆ ಹೆಚ್ಚು ಪ್ರಾದೇಶಿಕ ವ್ಯತ್ಯಾಸಗಳುಂಟಾಗಿರಲಿಲ್ಲ. ಆದರೆ ಸಂಯುಕ್ತಾಕ್ಷರಗಳು ಎ, ಒ, ಮುಂತಾದವುಗಳ ಅಭಾವ ಚಿಹ್ನೆಗಳಿಗೆ ಸಂಕೇತಗಳಿಲ್ಲದ್ದು ಮುಂತಾಗಿ ಅನೇಕ ರೀತಿಯ ತೊಂದರೆಗಳುಂಟಾದವು. ಪ್ರಾದೇಶಿಕ ವ್ಯತ್ಯಾಸದ ಕಾರಣ 'ಕೋಲೆಳುತ್ತಿ'ನಲ್ಲೂ ತೊಂದರೆ ಹೆಚ್ಚಾಗಿತ್ತು. ಮಲೆಯಾಣ್ಮ ದ ಮುಖ್ಯ ತೊಂದರೆಯೆಂದರೆ ಅದರ ಲಿಪಿ ಸಂಕೀರ್ಣತೆಯೂ, ತಮಿಳು ರೂಪಗಳು ಪದಗಳ ಸಂಕುಚಿತ ರೂಪಗಳೂ ಆಗಿವೆ. ಈ ರೀತಿಯ ತೆಂದರೆಗಳ ಕಾರಣದಿಂದ ಕಾಲಕ್ರಮೇಣ ಈ ಲಿಪಿ ಸಂಪ್ರಾದಾಯಗಳು ಅದೃಶ್ಯವಾಗಿ ಇಂದಿನ ಲಿಪಿಗೆ ಆಧಾರವಾದ ಗ್ರಂಥಲಿಪಿ ಮಲೆಯಾಳದಲ್ಲಿ ಅಂಗೀಕೃತವಾಗಿರುವುದಕ್ಕೆ ಎಡೆ ಮಾಡಿಕೊಟ್ಟದ್ದಾಗಿರಬೇಕು.

'ಗ್ರಂಥಾಕ್ಷರಲಿಪಿ' ಸುಮಾರು ಕ್ರಿ . ಶ. 7 ನೇ ಶತಮಾನಕ್ಕಿಂತ ಹಿಂದಿನಿಂದಲೂ ದಕ್ಷಿಣ ಭಾರತದಲ್ಲಿ ಪ್ರಚಾರದಲ್ಲಿತ್ತೆಂದು ಊಹಿಸಲಾಗುತ್ತದೆ. ಮಲೆಯಾಳ ದಲ್ಲಿ ಮಣಿ ಪ್ರವಾಳ ಸಾಹಿತ್ಯದ ಆವಿರ್ಭಾವದೊಂದಿಗೆ ಇಲ್ಲಿ ಅದಕ್ಕೆ ಸ್ಥಾನ ದೊರೆತದ್ದಾಗಿರಬೇಕು ಅದು ಕ್ರಮೇಣ ಮಲಯಾಳ ಲಿಪಿ

ಸಂಪ್ರದಾಯವನ್ನು ರೂಪಾಂತರಗೊಳಿಸಿತು. ಹಾಗೆ ಕ್ರಿ.ಶ. 9ನೇ ಶತಮಾನದ ಹೊತ್ತಿಗೆ ಲಿಪಿ ಸಂಪ್ರದಾಯ ಹೆಚ್ಚು ಕಡಿಮೆ ಒಂದು ವ್ಯವಸ್ಥೆಗೆ ಬಂದದ್ದರ ಫಲವಾಗಿ ಅದು 'ಆರ್ಯ ಎಳುತ್ತು' ಎನ್ನುವ ಹೆಸರಿನಿಂದೊಡಗೂಡಿ ಮಲೆಯಾಳ ಲಿಪಿಯಾಗಿ ಪರಿಣಮಿಸಿತು. ಅದೇ ಇಂದು ಪ್ರಚಾರದಲ್ಲಿರುವ ಲಿಪಿ ಸಂಪ್ರಾದಾಯ, ಇಂದಿನ ಮಲೆಯಾಳ ಅಕ್ಷರಮಾಲೆ ಈ ಕೆಳಗಿನಂತಿದೆ.

ಮಲೆಯಾಳಂ ಅಕ್ಷರಮಾಲೆ :-

ಸ್ವರಗಳು:- അ ആ ഇ ഈ ഉ ഊ ഋ ൠ ഌ ൡ എ ഏ ഐ ഒ ഓ ഔ

ವ್ಯಂಜನಗಳು :-

ക ഖ ഗ ഘ ങ
ച ഛ ജ ഝ ഞ
ട ഠ ഡ ഢ ണ
ത ഥ ദ ധ ന
പ ഫ ബ ഭ മ
യ ര ല വ ശ ഷ സ ഹ ള ക്ഷ ഴ റ

ಡಾ॥ ಬರ್ನೆಲ್ ಎನ್ನುವ ಭಾಷಾಶಾಸ್ತ್ರದ ದಕ್ಷಿಣ ಭಾರತದ ಲಿಪಿ ಸಂಪ್ರದಾಯಗಳೆಲ್ಲವೂ ಗುಹಾಲಿಪಿಗಳ (cave charaeters) ಪರಿಣಿತ ರೂಪಗಳೆಂದು ಅಭಿಪ್ರಾಯ ಪಡುತ್ತಾನೆ. ಗ್ರಂಥಲಿಪಿಗಳು ದಕ್ಷಿಣ ದೇಶದ ಅಶೋಕನ ಶಾಸನಗಳಲ್ಲಿ ಉಪಯೋಗಿಸಲಾದ ಲಿಪಿ ಸಂಪ್ರದಾಯದ ಒಂದು ಪ್ರಭೇದ, ಚೇರ, ಚೋಳ ದೇಶಗಳಲ್ಲಿ 'ವಟ್ಟೆಳುತ್ತು' ಅಶೋಕನ ಶಾಸನ ಲಿಪಿಗಳಿಂದ ವ್ಯತ್ಯಾಸವಿದ್ದರೂ ಆ ಎರಡೂ ರೀತಿಯ ಲಿಪಿಗಳೂ ಒಂದೇ ಪ್ರಾದೇಶಿಕ ಲಿಪಿಯಿಂದ ಉಂಟಾದುವೆಂದು ಬರ್ನಲ್ ಊಹಿಸಿದ್ದಾನೆ. ವಟ್ಟೆಳುತ್ತಿಗೂ ದಕ್ಷಿಣ ದೇಶದ ಅಶೋಕ ಲಿಪಿಗೂ, ಫಿನೀಶ್ಯನ್, ಅರೆಬಿಕ್ ಮುಂತಾದ ಮೆಡಿಟರೇನಿಯನ್ ಲಿಪಿಗಳೊಂದಿಗೆ ಕೆಲವು ಸಾದೃಶ್ಯಗಳನ್ನು ಅವಲಂಬಿಸಿಕೊಂಡು ಬರ್ನೆಲ್ ಈ ಊಹೆ ಮಾಡಿದ್ದಾರೆ. ಭಾರತೀಯರು ಬ್ಯಾಬಿಲೋನಿಯರೊಡನೆ ನಡೆಸುತ್ತಿದ್ದ ವಾಣಿಜ್ಯ ಸಂಪರ್ಕದಿಂದಾಗಿ ಸೆಮೆಟಿಕ್ ಲಿಪಿ ಭಾರತಕ್ಕೆ ಬಂದು ಅದರಿಂದ ಬ್ರಾಹ್ಮಿಲಿಪಿಯನ್ನು ರೂಪಿಸಿದರೆಂದೂ ಬರ್ನೆಲ್ ಹೇಳಿದ್ದಾರೆ.

ಮಲೆಯಾಳಂ - ಸಂಸ್ಕೃತ

ಮಲೆಯಾಳದ ಮೊಟ್ಟಮೊದಲನೆಯ ಶಾಸನವೆಂದರೆ ಸ್ಥಾಣುರವಿಯ ಕೊಟ್ಟಾಯಂ ಶಾಸನ ಮಲೆಯಾಳ ಭಾಷೆಯ ಮೇಲೆ ಸಂಸ್ಕೃತ, ತಮಿಳು ಭಾಷೆಗಳು ಬಹಳವಾದ ಪ್ರಭಾವ ಬೀರಿವೆ. ವ್ಯಾಕರಣದ ದೃಷ್ಟಿಯಿಂದ ನಾವು ತುಲನಾತ್ಮಕವಾಗಿ ವಿವೇಚಿಸುವಾಗ ವಿಶೇಷವಾಗಿ ತಮಿಳು ಮತ್ತು ಇತರ ದ್ರಾವಿಡ ಭಾಷೆಗಳೊಡನೆ ಮಲೆಯಾಳ ಭಾಷೆಗೆ ಇರುವ ನಿಕಟ ಬಾಂಧವ್ಯ ಎದ್ದು ಕಾಣುತ್ತದೆಯಾದರೂ ಶೈಲಿಯ ದೃಷ್ಟಿಯ ಮಲೆಯಾಳಂ ಭಾಷೆಯ ಮೇಲೆ ಸಂಸ್ಕೃತ ಭಾಷೆಯ ಆಳವಾದ ಪ್ರಭಾವ ಎದ್ದು ಕಾಣುತ್ತದೆ. ಇದರ ಶೈಲಿಯನ್ನು, ಬರವಣಿಗೆಯ ಬಂಧವನ್ನು ಗಮನಿಸಿದರೆ ಇತರ ದ್ರಾವಿಡ ಭಾಷೆಗಳಿಗೆ ಹೋಲಿಸಿದಾಗ ಸಂಸ್ಕೃತದ

ಭಾಷೆಯ ಪದಗಳು ಕನ್ನಡ - ತೆಲುಗು ಭಾಷೆಗಳಲ್ಲೂ ಸೇರಿವೆಯಾದರೂ ಮಲೆಯಾಳದ ಒಂದು ವಿಶಿಷ್ಟ ಶೈಲಿಯಲ್ಲಿ ಕಾಣುವಷ್ಟು ಮತ್ತೆಲ್ಲಿಯೂ ಕಂಡುಬರುವುದಿಲ್ಲ.

ಸಂಸ್ಕಾರ ಹಾಗೂ ಸಾಹಿತ್ಯ ಸಂಪನ್ನ ದ್ರಾವಿಡ ಭಾಷೆಗಳಲ್ಲಿ ಸಂಸ್ಕೃತದ ಪ್ರಭಾವ ಮಲೆಯಾಳದಲ್ಲೇ ಹೆಚ್ಚು. ತೆಲುಗು ಭಾಷೆ ತರುವಾಯವೂ ಕನ್ನಡ ಅನಂತರವೂ, ತಮಿಳು ತರುವಾಯವೂ, ಬರುತ್ತದೆ. ಸಂಸ್ಕೃತ ಭೂವಿಷ್ಟವಾದ ಮಲೆಯಾಳದ ಶೈಲಿಗೆ 'ಮಣಿ ಪ್ರವಾಳ ಶೈಲಿ 'ಎಂದು ಹೆಸರು ಇದು ಇತರ ದ್ರಾವಿಡ ಭಾಷೆಗಳಲ್ಲಿ ಇಲ್ಲದ ಮಲಯಾಳ ಭಾಷೆಯಲ್ಲಿ ಮಾತ್ರ ಕಾಣುವ ವಿಶೇಷ ಅಂಶ ಒಂದು ವಿಶಿಷ್ಟ ಶೈಲಿ. ಆದರೆ ಕನ್ನಡದಲ್ಲಿ ಪಾರ್ಶ್ವ ಪಂಡಿತ ಕವಿ ತನ್ನ ಪಾರ್ಶ್ವನಾಥ ಪುರಾಣದಲ್ಲಿ ಅಗ್ಗಳ ಕವಿ ಈ ಶೈಲಿಯಲ್ಲಿ ಕೃತಿರಚನೆ ಮಾಡಿ ಅಗ್ಗಳ ನೆನೆಸಿಕೊಂಡನೆಂದು ಕೊಂಡಾಡಿದ್ದಾನೆ. ಹಾಗೆಯೇ 14 ನೇ ಶತಮಾನದ ಕೃತಿಯಾದ 'ಲೀಲಾವತಿ ತಿಲಕ' ಎಂಬ ಕೃತಿಯಲ್ಲಿ ಈ ಮಣಿಪ್ರವಾಳ ಶೈಲಿಯ ನಿದರ್ಶನಗಳನ್ನು ಹಾಗೂ ಇದಕ್ಕೆ ಸಂಬಂಧಪಟ್ಟ ಇತರ ವಿಮರ್ಶೆಯ ವಿಚಾರಗಳನ್ನೂ ನೋಡಬಹುದು.[00]

ಸಂಸ್ಕೃತ ಭಾಷೆಯನ್ನು ಕಲಿಸಲು ಸಹಾಯವಾಗಿರುವ ಬಾಲ ಪ್ರಭೋದ ಎಂಬ ಪದ್ಯ ರೂಪದಲ್ಲಿರುವ ಜನಪ್ರಿಯ ಮಲೆಯಾಳ ವ್ಯಾಕರಣ ಗ್ರಂಥದಲ್ಲಿ ಸತಿ ಸಪ್ತಮಿ ಪ್ರಯೋಗಗಳಿಗೆ ಮಲೆಯಾಳ ಭಾಷೆಯಿಂದಲೇ ಉದಾಹರಣೆಗಳನ್ನು ಎತ್ತಿಕೊಡಲಾಗಿದೆ. ಕೇವಲ ಸಂಸ್ಕೃತ ನಿಷ್ಪನ್ನ ರೂಪಗಳನ್ನು ಅಲ್ಲದೇ ಸಂಸ್ಕೃತ ವಿಭಕ್ತ್ಯಂತ ರೂಪಗಳು ಮತ್ತು ಮಲೆಯಾಳದ ವಿಭಕ್ತ್ಯಂತ್ಯ ರೂಪಗಳು ಇವೆರಡೂ ಮಿಶ್ರಣಗೊಂಡು ರಚಿತ ವಾಗಿರುವ ಹೊಂದಾಣಿಕೆಯ ಶೈಲಿಯೇ ಈ ಮಣಿಪ್ರವಾಳ ಶೈಲಿ.

ಹಾಗೆಂದ ಮಾತ್ರಕ್ಕೆ ದ್ರಾವಿಡದ ಅಂಶ ಮಲೆಯಾಳ ಭಾಷೆಯಲ್ಲಿ ಇಲ್ಲವೇ ಇಲ್ಲವೆಂದು ತಿಳಿಯಬಾರದು ಅವು ಸಾಕಷ್ಟಿವೆ. ಮಲೆಯಾಳದಲ್ಲಿ ವಚನ ಪುರುಷ ಲಿಂಗ ಭೇದಗಳಿಲ್ಲದೇ ಕ್ರಿಯಾಪದ ಒಂದೇ ರೂಪದಲ್ಲಿ ವ್ಯವಹಾರವಾಗುತ್ತದೆ. ಇದು ಮುಖ್ಯವಾದ ಅಂಶ ದ್ರಾವಿಡ ಭಾಷೆಗಳಲ್ಲಿ ಲಿಂಗ ವ್ಯವಸ್ಥೆ ಮೂಲದಲ್ಲಿಲ್ಲವೆಂಬ ಅಭಿಪ್ರಾಯವಿದೆ. ಅಂದರೆ ಅರ್ಥ ಸಂದರ್ಭಾನುಸಾರವಿರುತ್ತಿತ್ತು . ಕ್ರಮೇಣ ನಾಮಪದಗಳಲ್ಲಿ ಲಿಂಗಭೇದ ತಲೆದೋರಿ ಅನಂತರ ಕ್ರಿಯಾಪದಗಳಲ್ಲಿ ಈ ವ್ಯತ್ಯಾಸ ಕಾಣಿಸಿಕೊಂಡಿತೆಂದು ಹೇಳುವರು. ಈ ಹೇಳಿಕೆಯನ್ನು ಮಲೆಯಾಳ ಭಾಷೆಯ ಮೇಲಿನ ವ್ಯವಸ್ಥೆ ಸಮರ್ಥಿಸುತ್ತದೆ. ಇದು ನಿಜವಿದ್ದಲ್ಲಿ ಈ ಭಾಷೆ ಮೂಲ ದ್ರಾವಿಡ ಸ್ವರೂಪ ವನ್ನು ಉಳಿಸಿಕೊಂಡು ಬಂದಿದೆಯೆಂದು ಹೇಳಬಹುದು.

ಮಲೆಯಾಳಂ ಧ್ವನಿ ಮತ್ತು ಧ್ವನಿಮಾ ರಚನೆಯ ಮುಖ್ಯ ಲಕ್ಷಣಗಳಲ್ಲಿ ಗಮನಾರ್ಹವಾದುದು ಹೀಗಿವೆ.

1) ಪದಾಂತ್ಯದಲ್ಲಿ ಉಚ್ಚಾರಣಾ ಸೌಲಭ್ಯದ ಸ್ವರವಿರುತ್ತದೆ. ಇದರಿಂದ ಬಹುಮಟ್ಟಿನ ವ್ಯಂಜನಗಳು ಪದಾಂತ್ಯದಲ್ಲಿರುವುದಿಲ್ಲ. ಇದನ್ನು ಇಂಗ್ಲಿಷಿನಿಂದ ಎರವಲು ಪಡೆದ ಬಸ್, ರೋಡ್, ಬುಕ್ ಇತ್ಯಾದಿ. ಪದಗಳನ್ನು ಮಲೆಯಾಳಿಗಳು ಉಚ್ಚರಿಸುವಲ್ಲಿ ಗಮನಿಸಬಹುದು.

2) ಮಹಾಪ್ರಾಣಗಳ ಘೋಷ ಹಾಗೂ ಅಘೋಷ ರೂಪಗಳ ಉಚ್ಚಾರಣೆಯಲ್ಲಿ ಯಾವ ವ್ಯತ್ಯಾಸವೂ ಇಲ್ಲದಿರುವುದು ಒಂದು ವೇಳೆ ವ್ಯತ್ಯಾಸವಿದ್ದರೂ ಅದು ಗಣನೀಯವಾಗಿಲ್ಲದಿರುವುದು.

ಉದಾ:- 'ನಖಂ' ಮತ್ತು 'ಮೇಘಂ' ಪದಗಳ 'ಖ' ಮತ್ತು 'ಘ' ಗಳ ಉಚ್ಚಾರಣೆ

3) ಮೂರ್ಧನ್ಯ ಘರ್ಷತಾಡಿತ 'ೞ' ಧ್ವನಿಯ ಪ್ರಾಚುರ್ಯ

ಉದಾ:- ಮೞೆ (ಮಳೆ) ಪುೞ (ನದಿ) ವೞಿ(ಹಾದಿ) ಇತ್ಯಾದಿ.

ಆಕೃತಿಮಾ ರೂಪಗಳ ಸಂಯೋಜನೆಯಿಂದ ಅನಂತರವೂ ಮೂಲ ರೂಪಗಳ ಸೀಮೆಗಳು ಸ್ಪಷ್ಟವಾಗಿ ಹಾಗೇ ಉಳಿಯುವುದರಿಂದಾಗಿ ಮಲೆಯಾಳಂ ಭಾಷೆಯನ್ನು ಆಕೃತಿಮಾ ರಚನೆಯ ದೃಷ್ಟಿಯಿಂದ ಅಂಟು ಭಾಷೆಯನ್ನಲಾಗಿದೆ. ಭಾಷೆಯ ಸ್ವಂತ ಪ್ರತ್ಯಯಗಳೆಲ್ಲವೂ ಅಂತ್ಯ ಪ್ರತ್ಯಯಗಳಾಗಿವೆ. ಮಲಯಾಳಂನ ವಿಭಕ್ತಿ ಪ್ರತ್ಯಯಗಳು ಪದಾಂತ್ಯ ಪ್ರತ್ಯಯಗಳಾಗಿರುತ್ತವೆ. ಇಂದಿನ ಮಲೆಯಾಳಂನ ಪೂರ್ಣ ಕ್ರಿಯಾ ರೂಪಗಳಲ್ಲಿ ಕೃರ್ತ್ಯವಿನೊಡನೆ ಹೊಂದಾಣಿಕೆ ತೋರುವ ಯಾವುದೇ ಪುರುಷ, ವಚನ ಹಾಗೂ ಲಿಂಗ ಸೂಚಕಗಳು ಇರುವುದಿಲ್ಲ.

ಮಲೆಯಾಳಂನ ವಾಕ್ಯಗಳ ಅನುಕ್ರಮ ಹೀಗಿದೆ. ಕರ್ತೃ ಪದ + ಕರ್ಮಪದ + ಕ್ರಿಯಾಪದ.

ಉದಾ:- ರಾಮ ಲಕ್ಷ್ಮಣನನ್ನು ನೋಡಿದನು. ಹೀಗಾಗಿ ಸಾಮಾನ್ಯವಾಗಿ ಮಲೆಯಾಳಂ ವಾಕ್ಯಗಳು ಕ್ರಿಯಾಪದಗಳಲ್ಲಿ ಕೊನೆಗೊಳ್ಳುತ್ತವೆ.

ಮಲೆಯಾಳಂ - ತಮಿಳು

ಮಲಯಾಳಂ ಭಾಷೆಯ ಹಳೆಯ ಗ್ರಂಥಗಳು ತಮಿಳು ಗ್ರಂಥಗಳಂತೆಯೇ ಇವೆ. ಈ ಕಾರಣದಿಂದಲೇ ಮಲಯಾಳ ಭಾಷೆಯನ್ನು ಸ್ವತಂತ್ರವಾದ ಅಥವಾ ಪ್ರತ್ಯೇಕವಾದ ಭಾಷೆ ಎನ್ನದೆ. ಒಮ್ಮೊಮ್ಮೆ ತಮಿಳು ಭಾಷೆಯ ಉಪಭಾಷೆ ಎಂದು ಕರೆಯುವರು ಅದಕ್ಕೆ ಕಾರಣವೂ ಇದೆ. ಮಲಯಾಳವೂ, ತಮಿಳೂ ಮೊದಲು ಪಶ್ಚಿಮಮ ಘಟ್ಟಗಳ ಅಕ್ಕ ಪಕ್ಕದಲ್ಲಿದ್ದು ಪ್ರತ್ಯೇಕಿಸಲ್ಪಟ್ಟು ಸ್ವತಂತ್ರವಾಗಿ ಬೆಳೆದು ಬಂದರೂ, ಅನಂತರದ ಕಾಲದಲ್ಲಿ ಚೋಳ, ಪಾಂಡ್ಯ ದೇಶಗಳೂ, ಕೇರಳವೂ ಒಟ್ಟುಗೂಡಿದ ಆಡಳಿತ ಸಂಬಂಧದಿಂದಾಗಿ ತಮಿಳಿನ ಪ್ರಭಾವ ಮಲೆಯಾಳದ ಮೇಲೆ ಅಸಾಮಾನ್ಯವಾದ ರೀತಿಯಲ್ಲಿ ಮುಂದುವರೆಯಲು ಕಾರಣವಾಯಿತು. ಎಷ್ಟೋ, ಶತಮಾನಗಳಿಂದ ಇಲ್ಲಿನ ರಾಜಶಾಸನಗಳು ಮಾತ್ರವಲ್ಲದೇ, ವಿದ್ಯಾವಂತರೂ, ವ್ಯವಹರಿಸುತ್ತಿದ್ದುದೂ ಚೆಂದಮಿಳನಲ್ಲಾಗಿತ್ತು. ಹೀಗೆ ಚೆಂದಮಿಳಿನ ಪ್ರಾಬಲ್ಯ ಕೇರಳವನ್ನು ಅಗಾಧವಾಗಿ ವ್ಯಾಪಿಸಿತು. ಚೆಂದಮಿಳಿನ ಪ್ರಭಾವಕ್ಕೂ ಅಧಿಪತ್ಯಕ್ಕೂ ಮೂಲದ್ರಾವಿಡ ಭಾಷೆಯಿಂದ ಮೊದಲೇ ಕೇರಳ ಭಾಷೆಗೆ ಸಿದ್ಧಿಸಿದ್ದ ವೈಶಿಷ್ಟ್ಯಗಳನ್ನು ಮೌಲಿಕವಾಗಿ ಬದಲಾಯಿಸಲು ಸಾಧ್ಯವಾಗಲಿಲ್ಲ. ಆದರೆ ಪಾಂಡ್ಯ ತಮಿಳನ್ನು ಮೇಲೆ ಹೇಳಿದ ಚೆಂದಮಿಳಿನ ಪ್ರಭುತ್ವವು ಹೆಚ್ಚು ಕಡಿಮೆ ರೂಪಾಂತರಗೊಳಿಸಿದರಿಂದ ಮೂಲ ದ್ರಾವಿಡರ ಮೂಲ ಲಕ್ಷಣಗಳು ಈ ಭಾಷೆಯಲ್ಲಿ ಹೆಚ್ಚು ಲೋಪಗೊಂಡವು.

ತಮಿಳಿನ ಅತ್ಯಂತ ಪ್ರಾಚೀನ ವ್ಯಾಕರಣ ಗ್ರಂಥವಾದ 'ತೊಲ್‌ಕಾಪ್ಪಿಯಂ'ದ ನಿಯಮವನ್ನು ಅನುಸರಿಸಿ ತಮಿಳಿನಲ್ಲಿ ಕಾಣಸಿಗದಿರುವ ಹಲವು ಪ್ರಾಚೀನ ಪ್ರಯೋಗಗಳು ಮಲೆಯಾಳದಲ್ಲಿ ಕಂಡು ಬರುತ್ತವೆಂಬುದನ್ನು ಪಂಡಿತರು ಎತ್ತಿ ತೋರಿಸುತ್ತಾರೆ. ಹಾಗೆಯೇ ಮಲೆಯಾಳದಲ್ಲಿ ಪ್ರಾಚೀನ ವೆನಿಸಿಕೊಂಡ ಹಲವು ಪದಗಳ ವಿಚಾರ, ಮೂಲ ದ್ರಾವಿಡ ಭಾಷೆಯಿಂದ ಸ್ವೀಕರಿಸಿರುವುವುಗಳನ್ನು ಪತ್ತುಪಾಟ್ಟು, ಶಿಲಪ್ಪದಿಕಾರಂ ಮುಂತಾದ ಕೇರಳದೊಡನೆ ಸಂಬಂಧವಿರುವ ತಮಿಳು ಕೃತಿಗಳು ತಿಳಿಸುವಂತೆಯೇ ಒಂದು ಕಾಲದಲ್ಲಿ ಸಾಧಾರಣ ಪ್ರಯೋಗದಲ್ಲಿದ್ದ ಎಷ್ಟೋ ದ್ರಾವಿಡ ಪದಗಳನ್ನು ನೀಡಿದ್ದಾರೆ.

ಉದಾ:- ಪೀಡಿಗೆ, ಅಳಿಯನ್, ಪತ್ತಾಯಂ, ಈಡ್, ತೋಣಿ, ಪಾಣಿ ಇತ್ಯಾದಿ.

ಮೇಲೆ ಹೇಳಿದ ಅಂಶಗಳಿಂದ ಮಲೆಯಾಳಕ್ಕೆ ಪ್ರತ್ಯೇಕವಾದ ಒಂದು ಸ್ಥಾನ ಮೊದಲೇ ಇತ್ತೆನ್ನುವ ಒಂದು ಅಂಶ ನಿಸ್ಸಂಶಯವಾಗಿ ಎದ್ದು ಕಾಣುತ್ತದೆ. ಒಂದೇ ಮೂಲಭಾಷೆಯ ಎರಡು ಪ್ರತ್ಯೇಕ ಶಾಖೆಗಳೆನ್ನುವ ದೃಷ್ಟಿಯಲ್ಲಿ ಮಲೆಯಾಳವೂ, ತಮಿಳೂ ಸ್ವತಂತ್ರವಾಗಿಯೇ ಬೆಳೆದು ಬಂದವು. ತಮಿಳು ಹಿಂದಿನ ಕಾಲದಲ್ಲಿ ಚೆಂದಮಿಳು ಎನ್ನುವ ಪರಿಷ್ಕೃತ ರೂಪಕ್ಕೊಳಗಾಗಿ ವ್ಯತ್ಯಾಸ ಹೊಂದಿದಾಗ ಮಲಯಾಳವು ಅಷ್ಟೊಂದು ಗಮನಾರ್ಹವಾದ ವ್ಯತ್ಯಾಸ ಹೊಂದಲಿಲ್ಲ ಆದರೆ ಚಾರಿತ್ರಿಕ ಕಾರಣಗಳಿಂದಲೂ ಭೌಗೋಳಿಕವಾದ ಪರಸ್ಪರ ಸಾಮಿಪ್ಯದಿಂದಲೂ ಹಿಂದಿನ ಕಾಲದಲ್ಲಿ ಅನೇಕ ಪದಗಳನ್ನು ಪಾಂಡ್ಯ ತಮಿಳಿನಿಂದ ಮಲೆಯಾಳ ಸ್ವೀಕರಿಸಬೇಕಾಗಿ ಬಂತು. ಆ ಕಾರಣದಿಂದ ಮೊದಲ ನೋಟಕ್ಕೆ ಮಲೆಯಾಳಕ್ಕೂ ತಮಿಳಿಗೂ ಗಾಢ ಸಂಬಂಧವಿರುವಂತೆ ತೋರಿದರೂ ಒಂದು ಮತ್ತೊಂದರಿಂದ ಹುಟ್ಟಿತು ಎಂದು ಕಲ್ಪಿಸಲು ಯಾವ ಆಧಾರವೂ ಇಲ್ಲ. ಕೇವಲ ಎರಡೂ ಭಾಷೆಗಳಲ್ಲಿ ಸಮಾನ ಶಬ್ದಗಳ ಉಭಯ ಸಾಧಾರಣತ್ವವು ಕಂಡು ಬರುವುದನ್ನು ಮಾತ್ರ ಗಮನಿಸಬಹುದು.

ಮಲೆಯಾಳವನ್ನು ಪ್ರಾಚೀನ ಕಾಲದಿಂದಲೂ ತಮಿಳು ಎನ್ನುವ ಹೆಸರಿನಿಂದ ಕರೆಯುತ್ತಿದ್ದದ್ದು ತಮಿಳೂ ಮಲೆಯಾಳವೂ ಒಂದೇ ಎಂದು, ಮಲೆಯಾಳ ತಮಿಳಿನ ಪ್ರಭೇದವೆಂದು ಭಾವಿಸಲು ಕಾರಣ ತಮಿಳಿನ ಪ್ರಭೇದವೆಂದೋ ಭಾವಿಸಲು ಕಾರಣವಾಯಿತು . ಆದರೆ 'ತಮಿಳು' ಶಬ್ದದ ಇಂದಿನ ಅರ್ಥದಲ್ಲಿರುವ ಹೆಸರಿನಿಂದ ಮಲಯಾಳವನ್ನು ಯಾವ ಕಾಲಕ್ಕೂ ಕರೆದಿರಲಿಲ್ಲ. ಮೂಲ ದ್ರಾವಿಡ ಭಾಷೆಯ ವಿಭಾಗಗಳೆನ್ನುವ ದೃಷ್ಟಿಯಲ್ಲಿ ಕರ್ನಾಟಕ ವನ್ನು 'ಕರಿನಾಟ್ಟು ತಮಿಳ್' ಎಂದೂ ತುಳುವನ್ನು 'ತುಳು ನಾಟ್ಟುತಮಿಳ' ಎಂದು ಕರೆದ ಹಾಗೆ ಮಲೆಯಾಳವನ್ನು 'ಮಲೆನಾಟ್ಟು ತಮಿಳ್' ಎಂದು ಪರಿಣಮಿಸಿದುವಾದರೂ ಮಲೆಯಾಳದ ವಿಷಯವಾಗಿ ಮೂಲಭಾಷೆಯನ್ನು ತಿಳಿಸುವ 'ತಮಿಲ್' ಸಂಜ್ಞೆಯೇ ಹಿಂದಿನ ಕಾಲದಲ್ಲೂ ಉಪಯೋಗದಲ್ಲಿದ್ದರಿಂದ ಭಾಷೆಯನ್ನು ಸಾಮಾನ್ಯಾರ್ಥ ವಾಚಕವಾಗಿ 'ತಮಿಜ್' ಶಬ್ದ ಮಲೆಯಾಳದಲ್ಲಿ ಉಳಿದು ಬಂದಿತು. ಹಾಗಾಗಿ ಕೆಲವು ಶುದ್ಧ ಮಲಯಾಳ ಕೃತಿಗಳನ್ನು ಇತ್ತೀಚಿನವರೆಗೂ ತಮಿಳು ಕೃತಿಗಳೆಂದು ಭಾವಿಸಲು ಕಾರಣವಾಯಿತು.

ಮಲೆಯಾಳಂ ಸಾಹಿತ್ಯದ ಕಾಲವಿಭಜನೆ :-

ಮಲೆಯಾಳ ಸಾಹಿತ್ಯಚರಿತ್ರೆಯ ಕಾಲವನ್ನು ಹಲವರು ಹಲವು ರೀತಿಯಲ್ಲಿ ವಿಭಜಿಸಿದ್ದಾರೆ. ಭಾಷಾ ಸ್ವರೂಪದ ಸ್ಥಿತಿಯನ್ನು ಅನುಸರಿಸಿ ಪ್ರಾಚೀನ, ಮಧ್ಯಕಾಲೀನ, ನವೀನ ಎಂದು ಮೂರು ಭಾಗಗಳಾಗಿ ಮಲೆಯಾಳ ಸಾಹಿತ್ಯ ಚರಿತ್ರೆಯನ್ನು ವಿಭಜಿಸಲು ಅನೇಕ ಪಂಡಿತರು ಪ್ರಯತ್ನಿಸಿದ್ದುಂಟು.

ಮಲೆಯಾಳ ಮೂಲ ದ್ರಾವಿಡದಿಂದ ಪ್ರತ್ಯೇಕವಾಗಿ ಸ್ವತಂತ್ರವಾದ ಅಸ್ತಿತ್ವವನ್ನು ಪಡೆದ ಬಳಿಕ ಮೊದಲು ಚೆಂದಮಿಳಿನ, ಅನಂತರ ಸಂಸ್ಕೃತ ಪ್ರಭಾವದಿಂದ ಇದೊಂದು ಸಾಹಿತ್ಯಭಾಷಾ ಎನ್ನುವ ನೆಲೆಯಲ್ಲಿ ಬೆಳವಣಿಗೆಯನ್ನು ಪಡೆಯಿತು. 'ಪಾಟ್ಟು' ಮಣಿಪ್ರವಾಳ ಎನ್ನುವ ಪ್ರಸ್ಥಾನಗಳಿದ್ದ ಎಷ್ಟೋ ಕೃತಿಗಳಿಂದ ಪರಿಪುಷ್ಟ ಹೊಂದಿದುದೇ ಪ್ರಥಮಾವಸ್ಥೆ. ಸುಮಾರು ಕ್ರಿಶ. 10-15 ನೇ ಶತಮಾನವರೆಗಿನ ಸಾಹಿತ್ಯವನ್ನು ಈ ಕಾಲಕ್ಕೆ ಒಳಪಡಿಸಬಹುದು.

ಕ್ರಿ. ಶ. 11ನೇ ಶತಮಾನದಲ್ಲಿದ್ದ ಚೆರುಶ್ಶೇರಿ ಕವಿಯ ಶೈಲಿಯಲ್ಲಿ ನವೀನತೆಯ ಲಕ್ಷಣಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಆದರೂ ಆಧುನಿಕ ಮಲೆಯಾಳ ಕಾವ್ಯ ರಚನೆಯು ಸ್ಪಷ್ಟವಾಗಿ ಪ್ರಾರಂಭವಾದದ್ದು ಕಂಡು ಬರುವುದು 17ನೇ ಶತಮಾನದಲ್ಲಿದ್ದ ಎಳುತ್ತಚ್ಛನ್ ಕವಿಯ ಕಾವ್ಯಗಳಲ್ಲಿ ಮಾತ್ರ. ಆದರೂ ಭಾಷೆ ಸ್ವರೂಪದಲ್ಲೂ ಶೈಲಿಯಲ್ಲೂ ಆಧುನಿಕ ಯುಗದ ಲಕ್ಷಣಗಳು ಹೆಚ್ಚು ಸ್ಪಷ್ಟವಾಗಿ ಕಂಡು ಬರುವುದು. ಎಳುತ್ತಚ್ಛನ್ ಕವಿಯ ಕಾವ್ಯದಲ್ಲಿ ಇಂದಿಗೂ ಎಷ್ಟೋ ಕವಿಗಳು ಎಳುತ್ತಚ್ಛನ್ ಕವಿಯ ಶೈಲಿಯನ್ನೇ ಅನುಸರಿಸಿ ಬರೆಯುವುದನ್ನು ಕಾಣುವುದು ಕಷ್ಟವೇನಲ್ಲ.

ಇಂಗ್ಲಿಷ್ ಸಾಹಿತ್ಯದ ಪ್ರಭಾವವು ಸ್ಪಷ್ಟವಾಗಿ ಕಂಡುಬಂದಂದಿನಿಂದ ಮಲಯಾಳ ಸಾಹಿತ್ಯದಲ್ಲಿ ಆಧುನಿಕ ಯುಗ ಪ್ರಾರಂಭವಾಯಿತೆಂದು ಹೇಳಬಹುದು. ಇದು ಪ್ರಾರಂಭವಾಗಿ ಒಂದು ನೂರು ವರ್ಷಕ್ಕಿಂತ ಹೆಚ್ಚಾಗಲಿಲ್ಲ. 19 ನೇ ಶತಮಾನದಲ್ಲಿ ಬ್ರಿಟಿಷರ ಆಳ್ವಿಕೆ ಪ್ರಾರಂಭವಾದಂದಿನಿಂದ ಪಾಶ್ಚಾತ್ಯ ಸಾಹಿತ್ಯ ಮತ್ತು ಸಂಸ್ಕೃತಿಗಳೊಡನೆ ಮಲಯಾಳಿಗುಂಟಾದ ಸಂಪರ್ಕವು, ಅವರ ಫಲವಾಗಿ ಹುಟ್ಟಿಕೊಂಡ ನೂತನ ರೀತಿಗಳೇ ಈ ಯುಗದ ಪ್ರಧಾನ ಲಕ್ಷಣಗಳು. ಗದ್ಯದಲ್ಲೂ, ಪದ್ಯದಲ್ಲೂ, ಮಲೆಯಾಳ ಭಾಷೆ ನಾವೀನ್ಯ ತುಂಬಿದ ಸಾಹಿತ್ಯದ ಹಲವು ಪ್ರಭೇದಗಳನ್ನು ಸ್ವೀಕರಿಸಿತು. ಖಂಡಕಾವ್ಯಗಳು, ಭಾವಗೀತೆ, ಪ್ರಬಂಧಗಳು, ಕವಿತಾ ಪ್ರಕಾರಗಳೂ, ಕಾದಂಬರಿಗಳು, ಸಣ್ಣಕತೆಗಳು, ಪ್ರಬಂಧಗಳು, ಉಪನ್ಯಾಸಗಳು, ನಾಟಕಗಳು, ಸಾಹಿತ್ಯವಿಮರ್ಶೆಗಳು ಮುಂತಾದ ಗದ್ಯ ಪ್ರಕಾರಗಳು, ಮುದ್ರಣ, ಗ್ರಂಥ ಪ್ರಚಾರ,ಪತ್ರಿಕಾ ಪ್ರಕಟಣೆ ಇತ್ಯಾದಿ ಪ್ರಕಾಶನ ಸಾಧನಗಳೂ ಇವೇ ಮುಂತಾದ ಹಲವು ತೆರನಾದ ಪಾಶ್ಚಾತ್ಯ ಪ್ರಭಾವಗಳಿಂದ ಈ ಆಧುನಿಕಯುಗ ವೈಶಿಷ್ಟ್ಯದಿಂದ ಕೂಡಿತು.

ಮಲೆಯಾಳಂನ ಪ್ರಥಮ ವ್ಯಾಕರಣ ಗ್ರಂಥ ಲೀಲಾತಿಲಕಂ ಇದು ಸಂಸ್ಕೃತದಲ್ಲಿ ರಚಿತವಾಗಿದೆ. ಇದಕ್ಕೂ ಮೊದಲೇ 'ಭಾಷಾ ಕೌಟಲ್ಯ' ವ್ಯಾಕರಣ ಕೃತಿ ಇದ್ದುದಾಗಿ ವಿದ್ವಾಂಸರ ಅಭಿಪ್ರಾಯ.

ಕ್ರಿ.ಶ.13-14ನೇ ಶತಮಾನದಲ್ಲಿ ರಚಿತವಾದ 'ರಾಮಚರಿತಂ' ಮಲಯಾಳದ ಪ್ರಥಮ ಕೃತಿ 18ನೇ ಶತಮಾನದಿಂದ ವ್ಯಾವಹಾರಿಕವಾಗಿ ಹೆಚ್ಚು ಬಳಕೆಯಾಗುತ್ತಿರುವುದರಿಂದ ಮಲಯಾಳದಲ್ಲಿ ವಿಶಿಷ್ಟ ಹಾಗೂ ವಿನೂತನ ರೀತಿಯಲ್ಲಿ ಬಳಕೆಯಾಗುತ್ತಿದೆ.

ತುಳು ಭಾಷೆ

ಕರ್ನಾಟಕ ರಾಜ್ಯದ ಪಶ್ಚಿಮ ಕರಾವಳಿಯ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಈಗ ಕೇರಳಕ್ಕೆ ಸೇರಿಕೊಂಡಿರುವ ಕಾಸರಗೋಡು ಜಿಲ್ಲೆಯ ಭೂಪ್ರದೇಶದಲ್ಲಿ ಪ್ರಧಾನವಾದ ಆಡು ಭಾಷೆಯಾದ ತುಳು ದ್ರಾವಿಡ ಭಾಷಾ ಕುಟುಂಬದಲ್ಲಿ ಒಂದು ಪ್ರಾಚೀನವಾದ ಮತ್ತು ಪ್ರಮುಖವಾದ ಭಾಷೆ. ಈಗಿನ ಉಡುಪಿ ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಗಳನ್ನು ಒಳಗೊಂಡ ಸಾಂಸ್ಕೃತಿಕ ಪ್ರದೇಶವನ್ನು ಪರಂಪರಾಗತವಾಗಿ ತುಳುನಾಡು ಎಂದು ಕರೆಯುತ್ತಿದ್ದರು. ಈ ಪ್ರದೇಶದಲ್ಲಿನ ಬಹುಭಾಗದ ಜನರ ಆಡುನುಡಿ ತುಳು ಮಾತ್ರವಲ್ಲದೆ, ಅದು ಇತರ ಭಾಷೆಗಳನ್ನು ಮನೆಮಾತಾಗಿ ಉಳ್ಳ ಜನರ ನಡುವಿನ ಸಂಪರ್ಕಭಾಷೆಯು ಹೌದು. ಭಾಷಾವಿಜ್ಞಾನಿಯಾದ ಡಾ.ರಾಬರ್ಟ್ ಕಾಲ್ಡ್‌ವೆಲ್ ಅವರು ತಮ್ಮ ತೌಲನಿಕ ದ್ರಾವಿಡ ವ್ಯಾಕರಣದಲ್ಲಿ ದ್ರಾವಿಡ ಭಾಷಾ ಕುಟುಂಬದಲ್ಲಿ ತುಳು ಚೆನ್ನಾಗಿ ಬೆಳೆದ ಹಾಗೂ ಅತ್ಯಂತ ವೈಜ್ಞಾನಿಕ ಭಾಷೆ ಎಂದು ಹೇಳಿದ್ದಾರೆ. ಸುಮಾರು 2000 ವರ್ಷಗಳ ಪ್ರಾಚೀನತೆಯಿದೆ ಎಂದು ಹೇಳಲಾದ ತುಳು ಭಾಷೆಯಲ್ಲಿ ಮೌಖಿಕ ಪರಂಪರೆಯ ಜನಪದ ಸಾಹಿತ್ಯ ಹೇರಳವಾಗಿದೆ. ಸಂಧಿ, ಕಬಿತ, ಉರಳ್, ಹಾಡುಗಳು, ಮದಿಪು, ಕತೆ, ಗಾದೆ, ಒಗಟು, ಐತಿಹ್ಯ ಪುರಾಣ, ನುಡಿಗಟ್ಟು ಇಂತಹ ಬಹು ಪ್ರಕಾರಗಳ ಮೌಖಿಕ ಸಾಹಿತ್ಯ ತುಳುವಿನಲ್ಲಿ ಶ್ರೀಮಂತವಾಗಿದೆ.ಆದರೆ ತುಳುವಿನಲ್ಲಿ ಅಕ್ಷರ ರೂಪದ ಲಿಖಿತ ಸಾಹಿತ್ಯ ನಿರ್ಮಾಣವಾದದ್ದು, 19ನೇ ಶತಮಾನದ ಪೂರ್ವಾರ್ಧದಲ್ಲಿ ಜರ್ಮನ್ ಮಿಶನರಿಗಳು ಮಂಗಳೂರಿಗೆ ಬಂದು ಮುದ್ರಣ ಮತ್ತು ಪ್ರಕಾಶನದ ಕೆಲಸವನ್ನು ಆರಂಭ ಮಾಡಿದ ಬಳಿಕ ಅವರು ಬೈಬಲ್ ಮತ್ತು ಸುವಾರ್ತೆಗಳ ತುಳು ಅನುವಾದವನ್ನು ಮಾಡಿ ಪ್ರಕಟಣೆಗಳನ್ನು ಹೊರತಂದರು.[೧೧]

ದ್ರಾವಿಡ ಭಾಷಾ ಬುಡಕಟ್ಟಿಗೆ ಸೇರಿದ ತುಳು ಭಾಷೆಯ ಆರಂಭ, ಬೆಳವಣಿಗೆ ಮತ್ತು ವಿಕಾಸಗಳನ್ನು ವಿವರಿಸಲು ಸಿಗುವ ಸಾಮಗ್ರಿ ಅತ್ಯಲ್ಪ. ಇದಕ್ಕೆ ಸಂಬಂಧಿಸಿದಂತೆ ಗ್ರಂಥಗಳು , ಶಾಸನಗಳು ಮತ್ತು ಉಲ್ಲೇಖಗಳು ತೀರಾ ಕಡಿಮೆ. ತುಳು ಭಾಷೆಯನ್ನು ತುಳುವ ಭಾಷೆಯೆಂದೂ ಕರೆಯುವರು.ತುಳು ಎಂಬ ಶಬ್ದ ಯಾವ ಕಾಲದಲ್ಲಿ ಬಳಕೆಗೆ ಬಂತೆಂದು ನಿಶ್ಚಯವಾಗಿ ತಿಳಿಯದು. 12 ನೇ ಶತಮಾನದ ಪೂರ್ವಾರ್ಧದ ವಿಷ್ಣುವರ್ಧನನ ಕಾಲದ ಶಾಸನವೊಂದರಲ್ಲಿ ಬರುವ ಪದ್ಯದಲ್ಲಿ ತುಳು ಎಂಬ ಪದವಿದೆ. ಹಾಗೆ ಕೋಟೀಶ್ವರನೆಂಬ ಜೈನಕವಿ ತನ್ನ ಜೀವಂಧರ ಷಟ್ಪದಿ ಕಾವ್ಯದಲ್ಲಿ 'ತುಳು ಮಹಾದೇಶದೊಳು ಬಯಿದೂರೊಳಗೆ' ಎಂಬಲ್ಲಿ ಇದರ ಪ್ರಸ್ತಾಪವಿದೆ . ಹಾಗೆ ರತ್ನಾಕರವರ್ಣಿ ಸಹ 'ಅಯ್ಯಯ್ಯ ಎಂಚ ಪೊರ್ಲಾಂಡೆಂದು ತುಳುವರು ಮೈಯುಬ್ಬಿ ಕೇಳಬೇಕಣ್ಣಾ' ಎಂದು ಹೇಳಿದ್ದಾರೆ.[೧೨]

ಭಾಷಿಕ ರಚನೆಯ ನಿಖರತೆ ಪದಕೋಶದ ಸಮೃದ್ಧಿ, ಪ್ರಾಚೀನತೆಯ ನೆಲೆಯಲ್ಲಿ ತುಳು ಭಾಷೆ ಕನ್ನಡ,ತೆಲುಗು, ಮಲಯಾಳಂಗಳಿಗೆ ಎರಡನೆಯದಲ್ಲ.ಆದರೆ ಕೆಲವೊಂದು ಚಾರಿತ್ರಿಕ ಕಾರಣಗಳಿಂದಾಗಿ ತನ್ನದೇ ಆದ ಲಿಪಿಯಿದ್ದಾಗಲೂ ಬಳಕೆಯ ಕೊರತೆಯಿಂದಾಗಿ ದೊಡ್ಡ ಪ್ರಮಾಣದ ಲಿಖಿತ ಸಾಹಿತ್ಯ ರಚನೆಯಾಗದೆ ಹೋಗಿ ಕನ್ನಡ, ತಮಿಳು, ತೆಲುಗು, ಮಲಯಾಳಂ ಭಾಷೆಗಳಂತೆ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಳ್ಳುವುದರಲ್ಲಿ ವಿಫಲವಾಯಿತು. ತುಳುನಾಡಿನಲ್ಲಿನ ಶಾಸನಗಳೂ ಕನ್ನಡದಲ್ಲೇ ಬರೆಯಲ್ಪಟ್ಟವು. ತುಳುನಾಡಿನ ಅರಸರು ಕನ್ನಡದ ಕವಿಗಳನ್ನೇ ಬೆಂಬಲಿಸಿ ಕಾವ್ಯ ಬರೆಸಿದರು. ಹೀಗಾಗಿ ತುಳು ಪಂಚದ್ರಾವಿಡ ಭಾಷೆಗಳಲ್ಲಿ ಅಂಚಿಗೆ ತಳ್ಳಲ್ಪಟ್ಟಿತು.

ಆದರೆ ಇದು ತುಳುವಿನ ಮೌಖಿಕ ಸಾಹಿತ್ಯದ ಅಭಿವೃದ್ಧಿಗೆ ಕಾರಣವಾಯಿತು. ಲಿಪಿಯ ಕೊರತೆಯ ಫಲವಾಗಿ ತುಳುವರು ತಮ್ಮ ಸೃಜನಶೀಲ ಪ್ರತಿಭೆಯನ್ನು ಮೌಖಿಕ ರೂಪದಲ್ಲೇ ಬೆಳೆಸಿಕೊಂಡು ಬಂದರು. ತುಳು ಭಾಷೆಗೆ ಲಿಪಿಯಿಲ್ಲದಿದ್ದರೂ ಅದನ್ನು ಅಸಂಸ್ಕೃತ ದ್ರಾವಿಡ ಭಾಷೆಗಳ ಪಟ್ಟಿಗೆ ಸೇರಿಸದೆ ಸಂಸ್ಕಾರ ಸಂಪನ್ನ ದ್ರಾವಿಡ ಭಾಷೆಗಳ ಗುಂಪಿಗೆ ಸೇರಿಸಲು ಕಾರಣ ತುಳು ಭಾಷೆಯಲ್ಲಿ ಉಪಲಬ್ಧವಾದ ಹಾಡುಗಳು ತುಳುವಿನ ಸಾಹಿತ್ಯ ಸಂಪತ್ತನ್ನು ಸಾರುತ್ತವೆ. ಲಕ್ಕಣ್ಣನಂತಹ ತುಳು ಕವಿಗಳನೇಕರು ಆಗಿಹೋಗಿರಬೇಕೆಂಬುದು ಇದರಿಂದ ತಿಳಿಯುತ್ತದೆ. ಆದ್ದರಿಂದಲೇ ತುಳುವನ್ನು ಸೇರಿಸಿಕೊಂಡೇ ಕನ್ನಡ ,ತಮಿಳು , ತೆಲುಗು, ಮಲೆಯಾಳಂ ಭಾಷೆಗಳನ್ನು ಪಂಚದ್ರಾವಿಡ ಭಾಷೆ ಎಂದು ಕರೆಯಲಾಯಿತು.

19 ನೇ ಶತಮಾನದ ಮೊದಲ ಅರ್ಧದ ಮುಂಚಿತವಾಗಿಯೇ (1934) ಭಾರತಕ್ಕೆ ಬಂದ ಜರ್ಮನ್ ಮಿಷನರಿಗಳು ಪ್ರಾದೇಶಿಕ ಭಾಷೆ ಮತ್ತು ಸಂಸ್ಕೃತಿಗಳ ಅಧ್ಯಯನಕ್ಕೆ ತೊಡಗಿದರು. ರೆವರೆಂಡ್ ಎ. ಮ್ಯಾನರ್‌ನ ತುಳು ನಿಘಂಟುಗಳು ಮತ್ತು ತುಳು ಪಾಡ್ದನಗಳ ಸಂಗ್ರಹ, ರೆವರೆಂಡ್ ಜೆ. ಬ್ರಿಗೆಲ್‌ನ ತುಳು ವ್ಯಾಕರಣ ಗ್ರಂಥಗಳಂತಹ ವಿದ್ವತ್ತಿನ ಪ್ರಕಟಣೆಗಳು ಬೆಳಕು ಕಂಡವು . ಮುಂದೆ 20ನೇ ಶತಮಾನದ ಆರಂಭದಲ್ಲಿ ರಾಷ್ಟ್ರೀಯ ಚಳುವಳಿಯ ಹಿನ್ನಲೆಯಲ್ಲಿ ತುಳುನಾಡಿನಲ್ಲಿತುಳು ಭಾಷೆಯ ಬಗ್ಗೆ ಹೊಸ ಎಚ್ಚರ ಕಾಣಿಸಿಕೊಂಡಿತು.

ರಾಬರ್ಟ್ ಕಾಲ್ಡವೆಲ್ ತನ್ನ 'A comparitive grammar of the dravidian or south Indian languages' ಎಂಬ ಗ್ರಂಥದಲ್ಲಿ ತುಳುವನ್ನು ದ್ರಾವಿಡ ಭಾಷೆ ಕುಟುಂಬಕ್ಕೆ ಸೇರಿದ ಭಾಷೆ ಎಂದು ಪರಿಗಣಿಸಿದ್ದಾನೆ. ಹಾಗೆ ಭಾಷಾ ಸಾದೃಶ್ಯತೆಯನ್ನು ಪ್ರಸ್ತಾಪಿಸುತ್ತಾ, ತುಳು ಮಲಯಾಳಂನ ಉಪಭಾಷೆ ಎಂಬ ಈ ಮೊದಲಿನ ಅಭಿಪ್ರಾಯವನ್ನು ತಿರಸ್ಕರಿಸಿ ತುಳು ಮಲಯಾಳಂಗಿಂತ ತೀರಾ ಭಿನ್ನವಾದ ಭಾಷೆ. ತಮಿಳು ಮಲಯಾಳಂನ ನಡುವೆ ಹೆಚ್ಚು ನಿಕಟತೆಯಿರುವಂತೆ ತುಳು -ಮಲಯಾಳಂ ನಡುವೆ ಅಷ್ಟು ಸಾಮ್ಯವಿಲ್ಲ. ತುಳು ಕನ್ನಡದಿಂದ ಭಿನ್ನ ಎನಿಸಿದರೂ ಅದು ಅಷ್ಟೇನೂ ಭಿನ್ನವಿಲ್ಲ. ಆದರೆ ಕೂರ್ಗ್ ಮತ್ತು ತುಳುವಿನ ನಿಕಟತೆಯನ್ನು ಗಮನಿಸಿದರೆ ಕನ್ನಡಕ್ಕಿಂತ ಕೂರ್ಗ್ ತುಳುವಿಗೆ ಹೆಚ್ಚು ನಿಕಟವಾಗಿದೆ ಎಂದು

ಕಾಲ್ಡವೆಲ್ ಅಭಿಪ್ರಾಯ. ಯೂಲ್ಸ್‌ಬ್ಲಾಕ್ ಎಂಬ ಮತ್ತೊಬ್ಬ ವಿದ್ವಾಂಸ ಕೂಡ ''ಈ ಉಪಭಾಷೆಯಾದ ತುಳು ಕನ್ನಡಕ್ಕೆ ನಿಕಟವಾಗಿರುವುದು ಸ್ಪಷ್ಟ. ಆದರೆ ಅವೆರಡರ ನಡುವೆ ನೇರ ಸಂಬಂಧಯಿದೆ ಎನ್ನುವುದು ಮಾತ್ರ ತೀರಾ ವಿವಾದಾಸ್ಪದ ವಾದವಾಗುತ್ತದೆ''.

ಈ ಇಬ್ಬರ ಹೇಳಿಕೆಗಳನ್ನು ಗಮನಿಸಿದಾಗ ಈ ಇಬ್ಬರು ಮಹನೀಯರು ಇತರ ದ್ರಾವಿಡ ಭಾಷೆಗಳನ್ನು ಕುರಿತು ಏನನ್ನು ಹೇಳಿಲ್ಲವಾದರೂ ತುಳು ಮತ್ತು ಕನ್ನಡದ ಮತ್ತು ಕೊಡಗು ಭಾಷೆಯ ನಡುವೆ ಕೆಲವು ಸಾಮ್ಯತೆಗಳನ್ನು ಗಮನಿಸಿದ್ದಾರೆ.

ತುಳು ಭಾಷಾ ಪ್ರಭೇದಗಳು :-

ತುಳು ಭಾಷೆಯು ಆಡುಮಾತಿನಲ್ಲೇ ಹೆಚ್ಚು ಪ್ರಚಾರವಾಗಿರುವ ಕಾರಣ ಇದರಲ್ಲಿ ಅನೇಕ ಭಾಷಾ ಪ್ರಭೇದಗಳುಂಟಾಗಿವೆ. ತುಳುವಿನಲ್ಲಿ ಸಹಜವಾಗಿ ಭೌಗೋಳಿಕ ನೆಲೆಯಲ್ಲಿ ಆಡುನುಡಿಗಳ ರೂಪವೈವಿಧ್ಯ ಹೆಚ್ಚಿತು. ತುಳುವಿನ ಪ್ರಾದೇಶಿಕ ಪ್ರಭೇದಗಳಿಗೆ ಕಾರಣವಾದ ಪ್ರದೇಶಗಳು ಮುಖ್ಯವಾಗಿ ಐದು. ಅವುಗಳೆಂದರೆ,

1. ದಕ್ಷಿಣ-ಪಶ್ಚಿಮ : ತುಳುನಾಡಿನ ನೈರುತ್ಯ ಭಾಗವಾದ ಕೇರಳದ ಕಾಸರಗೋಡು ತಾಲ್ಲೂಕು.
2. ದಕ್ಷಿಣ - ಪೂರ್ವ : ತುಳುನಾಡಿನ ಆಗ್ನೇಯ ಭಾಗವಾದ ಸುಳ್ಯ ತಾಲ್ಲೂಕು .
3. ದಕ್ಷಿಣ- ಮಧ್ಯೆ: ದ.ಕ. ಜಿಲ್ಲೆಯ ಪುತ್ತೂರು, ಬಂಟ್ವಾಳ, ಬೆಳ್ತಂಗಡಿ ತಾಲ್ಲೂಕುಗಳು.
4. ಉತ್ತರ - ಪಶ್ಚಿಮ: ತುಳುನಾಡಿನ (ಈಗಿನ ದ. ಕ. ಜಿಲ್ಲೆಯ) ವಾಯುವ್ಯ ಭಾಗದಲ್ಲಿರುವ ಮಂಗಳೂರು ಮತ್ತು ಉಡುಪಿ ತಾಲ್ಲೂಕುಗಳು .
5. ಉತ್ತರ -ಪೂರ್ವ : ತುಳುನಾಡಿನ ಈಶಾನ್ಯ ಭಾಗದಲ್ಲಿರುವ ಕಾರ್ಕಳ ತಾಲ್ಲೂಕು.[೩]

ದಕ್ಷಿಣದಲ್ಲಿ ಮಲೆಯಾಳವೂ, ಉತ್ತರದಲ್ಲಿ ಕನ್ನಡವೂ ತುಳುವಿಗೆ ಗಡಿನಾಡ ಭಾಷೆಗಳಾಗಿವೆ . ತುಳುನಾಡಿನ ಬಹುಭಾಗವು ಕರ್ನಾಟಕದಲ್ಲಿ ಒಳಗೊಂಡಿರುವುದರಿಂದ ಮತ್ತು ಇಲ್ಲಿಯ ಅಧಿಕೃತ ಭಾಷೆ ಕನ್ನಡವಾಗಿರುವುದರಿಂದ ತುಳು ಮಾತೃಭಾಷೆಯ ಹೆಚ್ಚಿನ ಜನರು ಕನ್ನಡದಲ್ಲಿಯೂ ನಿರರ್ಗಳವಾಗಿ ಮಾತನಾಡಬಲ್ಲರು. ಹಾಗೆಯೇ ತುಳುನಾಡಿನ ತೆಂಕತುದಿಯಲ್ಲಿಯ ಗಡಿನಾಡ ಭಾಷೆ ಮಲೆಯಾಳವಾಗಿರುವುದರಿಂದ ಆ ಪ್ರದೇಶದ ತುಳುವರು ಸುಲಭವಾಗಿ ಮಲೆಯಾಳದಲ್ಲೂ ವ್ಯವಹರಿಸಬಲ್ಲರು.ಭೌಗೋಳಿಕ ಪ್ರಭೇದದೊಂದಿಗೆ ತುಳುವಿನಲ್ಲಿ ಕೆಲವು ಸಾಮಾಜಿಕ ಪ್ರಭೇದಗಳನ್ನು ಗುರುತಿಸಬಹುದು , ತುಳುವರಲ್ಲಿ

ಬ್ರಾಹ್ಮಣ , ಜೈನ , ಬಂಟ , ಬಿಲ್ಲವ , ಗೌಡ , ಕುಂಬಾರ , ಮೇರ , ಮನ್ಸ , ಹರಿಜನ ಮೊದಲಾದ ಸಾಮಾಜಿಕ ಪ್ರಭೇದಗಳು ಪ್ರಚಲಿತದಲ್ಲಿವೆ. ಹಿಂದಿನ ಕಾಲದಲ್ಲಿ ಈ ವರ್ಗಗಳೊಳಗೆ ಬಹಳ ಕಟ್ಟುನಿಟ್ಟಾದ ಸಂಪರ್ಕ ನಿಷೇಧವಿದ್ದುದ್ದರಿಂದ ಪರಸ್ಪರ ಒಡನಾಡುವ ಅವಕಾಶವಿರಲಿಲ್ಲ. ಹಾಗಾಗಿ ತುಳುವಿನಲ್ಲಿ

ಸಾಮಾಜಿಕ ಪ್ರಭೇದಗಳುಂಟಾದವು. ತುಳುವಿನಲ್ಲಿ ಹೀಗೆ ಉಂಟಾದ ಹಲವಾರು ಸಾಮಾಜಿಕ ಪ್ರಭೇದಗಳನ್ನು ಕೆಲವು ವರ್ಗಗಳಾಗಿ ವರ್ಗೀಕರಿಸಬಹುದು.

1. ಬ್ರಾಹ್ಮಣರ ತುಳು :- ಈ ವಿಭಾಗದಲ್ಲಿ ಶಿವಳ್ಳಿ ಹಾಗೂ ಸ್ಥಾನಿಕ ಬ್ರಾಹ್ಮಣರ ಆಡುನುಡಿ ಸೇರುತ್ತದೆ.
2. ಜೈನರ ತುಳು :- ಈ ವಿಭಾಗದಲ್ಲಿ ಜೈನರ ಆಡುನುಡಿ ಸೇರುತ್ತದೆ.
3. ಸಾಮಾನ್ಯರ ತುಳು :- ಈ ಗುಂಪಿನಲ್ಲಿ ಬಂಟ, ಬಿಲ್ಲವ, ಗೌಡ, ಮೊಗವೀರ, ಕುಂಬಾರ ಮತ್ತು ಬೇರೆ ವಿಭಾಗಗಳಲ್ಲಿ ಸೇರದ ಇತರ ವರ್ಗದ ಆಡುನುಡಿಗಳು ಒಳಗೊಳ್ಳುತ್ತವೆ.
4. ಹರಿಜನ, ಗಿರಿಜನರ ತುಳು :- ಮೇರ, ಮನ್ಸ ಮತ್ತಿತರ ಹರಿಜನ ವರ್ಗದವರ ಆಡುನುಡಿಗಳು ಈ ಗುಂಪಿನಲ್ಲಿ ಸೇರುತ್ತವೆ.[19]

ಈ ವರ್ಗಗಳ ಆಡು ನುಡಿಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳು ಕಂಡು ಬರುತ್ತವೆ. ಅವುಗಳನ್ನು ನೋಡುವುದಾದರೆ,

ಬ್ರಾಹ್ಮಣರ ತುಳು	ಅರ್ಥ	ಹರಿಜನರ ತುಳು
ಇಮ್ಬೊಳು	= ಈ ಹೆಂಗಸು	ಮೋಳು - ಇವಳ್
ಉಣ್ಪು	= ಆಹಾರ	ನುಪ್ಪು - ಉಣ್
ಏನ್	= ನಾನು	ಯಾನ್ - ಯಾ/ ಆನ್
ಕೋಳಿ	= ಕೋಳಿ	ಕೋರಿ - ಕೋವೆ
ಸೋಜ	=ತೋರು	ತೋಜ್ - ತೋನ್ರು

ಹೀಗೆ ಅನೇಕ ವ್ಯತ್ಯಾಸಗಳನ್ನು ಕಾಣಬಹುದು. ಬ್ರಾಹ್ಮಣೇತರ ತುಳು (ಸಪಲಿಗ) ಉಪಭಾಷೆಯಲ್ಲಿ 'ನ್' ಮತ್ತು 'ಣ್' ಗಳು ಸ್ವಚ್ಛಂದ ಪರಿವರ್ತನದಲ್ಲಿದ್ದು 'ನ್' ಧ್ವನಿಮಾದ ಉಪಧ್ವನಿಗಳಾಗಿವೆ. ಹೀಗೆಯೇ 'ಲ್' ಮತ್ತು 'ಳ್' ಗಳು 'ಲ್' ಧ್ವನಿಮಾದ ಉಪಧ್ವನಿಗಳಾಗಿವೆ. ಇದರಲ್ಲಿ 'ಹ್' ಧ್ವನಿಯ ಬಳಕೆಯಿಲ್ಲ. ಶಿವಳ್ಳಿ ಬ್ರಾಹ್ಮಣರ ತುಳುವಿನಲ್ಲಿ 'ಳ್' ಬರುವ ಕಡೆಯೆಲ್ಲ ಸಪಲಿಗರ ತುಳುವಿನಲ್ಲಿ 'ರ್' ಧ್ವನಿ ಇರುತ್ತದೆ.

ಅಸಂದೆ, ಕುರಿ, ಕೋರಿ, ಗುರಿ, ತಾರಿ, ಪರ ಇವು ಕ್ರಮವಾಗಿ ಅಳಸಂದೆ, ಕುಳಿಪು, ಕೋಳಿ, ಗುಳಿ, ತಾಳಿ, ಪಳೆ, (ಪಳ) ಎಂಬ ರೂಪದಲ್ಲಿವೆ.ತುಳು ಭಾಷೆಯ ಮೇಲೆ ಆದ ಕನ್ನಡದ ಪ್ರಭಾವಿಗಳಲ್ಲಿ ಪ-ಹ ಭೇದ ಮುಖ್ಯವಾದುದು. ವಾಸ್ತವವಾಗಿ ತುಳುವಿನಲ್ಲಿ ಪ-ಹ ಆಗಿಲ್ಲ. 'ಪ' ಕಾರ 'ಪ'ಕಾರವಾಗಿಯೇ ಉಳಿದಿದೆ. ಪರನ್ದ್, ಪಾರ್, ಪಾಡ್, ಇತ್ಯಾದಿ. ಆದರೆ 'ಪ'ಕಾರ ಇರುವ ಪದಗಳ ಜೊತೆಗೆ ಕೆಲವು 'ಹ'ಕಾರದ ಪದಗಳೂ ಬಳಕೆಗೆ ಬಂದುಬಿಟ್ಟಿವೆ. ಅಂಥ ಪದಗಳೆಲ್ಲಾ ಕನ್ನಡದಿಂದ ತೆಗೆದುಕೊಂಡ ಪದಗಳು.

ಉದಾಹರಣೆ : ಹಗಲು,ಹನಿ, ಹಲವು ಇತ್ಯಾದಿ.

ಜೈನರ ತುಳುವಿನಲ್ಲಿ ಕನ್ನಡ ಭಾಷೆಯ ಪ್ರಭಾವ ಹೆಚ್ಚಾಗಿರುವಂತೆ ಕಾಣುತ್ತದೆ. ಜತೆಗೆ ಜೈನರ ತುಳು

ಹರಿಜನರ ತುಳುವಿಗೆ ಹತ್ತಿರವಾಗಿದೆ. ಜೈನರ ತುಳು ಹರಿಜನ ಗಿರಿಜನರ ತುಳುವಿನ ಶಿಷ್ಟ ರೂಪದಂತಿದೆ. ಕನ್ನಡದೊಡನೆ ಹೋಲಿಸಿದಾಗ ತುಳು ಭಾಷೆಯಲ್ಲಿ ಕಾಣುವ ಇತರ ಕೆಲವು ಧ್ವನಿ ವ್ಯತ್ಯಾಸಗಳಲ್ಲಿ ಕೆಲವು ಈ ಕೆಳಗಿನಂತಿವೆ ಕೆಲವು ಧ್ವನಿ ವ್ಯತ್ಯಾಸಳಲ್ಲಿ ಕೆಲವು ಈ ಕೆಳಗಿನಂತಿವೆ

ಕನ್ನಡ	ತುಳು
ಆರು	ಆಜಿ
ಬರಲೆ (ಳೆ)	ಉದಲ್
ಮೂರು	ಮೂಜಿ
ತೋರು	ಸೋ/ತೋಜ್

ಮಾಲದ್ರಾವಿಡದ 'ಚ್' ಮತ್ತು 'ತ' ಧ್ವನಿ ಮಾನಗಳು ಬಹುಮಟ್ಟಿಗೆ ಐಕ್ಯಗೊಂಡಿದೆ ಕೆಲವು ಕಡೆ 'ಚ್' 'ಸ್' ಆಗಿವೆ. ಇದು ಕನ್ನಡದಿಂದ ಆದ ಸ್ವೀಕರಣವಿರಬಹುದು.

ಕನ್ನಡ	ತುಳು
ಏಳು	ಏಳಿ
ಕೀಳು	ಕೀಳ
ಮುಳುಗು	ಮುರ್ಕುಣಿ
ಕೊಳಲು	ಕೊಳಲಿ

1.ಕನ್ನಡ ಭಾಷೆಯೊಡನೆ ಹೋಲಿಸಿದಾಗ ತುಳು ಭಾಷೆಯಲ್ಲಿ ಓಷ್ಟ್ಯ ವ್ಯಂಜನ ಧ್ವನಿಮಾಗಳ ಮುಂದಿರುವ 'ಇ' ಕಾರ 'ಉ' ಕಾರವಾಗುತ್ತದೆ. ಆದರೆ ಮುಂದೆ ಪ್ರತಿವೇಷ್ಟಿತ ವ್ಯಂಜನ ಧ್ವನಿ ಬಂದಾಗ ಕೆಲವು ವ್ಯತ್ಯಾಸಗಳಾಗುತ್ತವೆ.

ಉದಾ; ಬುಡು = ಬಿಡು
ಮುಡಿ = ಮಿಡಿ
ಪುಂಡಿ = ಹಿಂಡಿ

ಆದರೆ ಈ ನಿಯಮ ಸಾರ್ವತ್ರಿಕವೇನೂ ಅಲ್ಲವೆನ್ನಬಹುದು. ಏಕೆಂದರೆ ಈನಿಯಮಕ್ಕೆ ಅಪವಾದಗಳೂ ಇವೆ

ಉರ್ದು > ಉದ್ದು - ಉರ್ದು (ತುಳು)
ಪೊಮ್ತು > ಹೊತ್ತು - ಪೊರ್ತು (ತುಳು)

ಕೆಲವೊಮ್ಮ ಕನ್ನಡದ ಪದಾಂತ್ಯ 'ಲ್' ಕಾರದ ಸ್ಥಾನದಲ್ಲಿ ತುಳು ಭಾಷೆಯಲ್ಲಿ 'ರ್' ಕಾರವಿರುತ್ತದೆ.

ಕನ್ನಡ	ತುಳು
ಕಾಲು	ಕಾರು
ತಲೆ	ಹರೆ
ಪಲ್ಲು	ಪರು

ಆದರೆ ಪುಲ್ಲು = ಹುಲ್ಲು, ಕಲ್ಲು= ಕಲ್ಲು ಎಂಬ ಪದಗಳೂ ಇವೆ. ಸಂಯುಕ್ತ ವ್ಯಂಜನಗಳಿದ್ದಾಗ 'ಲ್ಲ' ಅಬಾಧಿತವಾಗಿರುವಂತೆ ತೋರುತ್ತದೆ

ಕನ್ನಡದ ಅಕಾರಾಂತ ನಾಮಪದಗಳು ತುಳುವಿನಲ್ಲಿ ಎಕಾರಾಂತವಾಗಿವೆ.

ಕನ್ನಡ	ತುಳು
ಅಮ್ಮ	ಅಮ್ಮೆ
ಮಗ	ಮಗ್ಗೆ
ಅಣ್ಣ	ಅಣ್ಣೆ
ಅಕ್ಕ	ಅಕ್ಕೆ

ಕನ್ನಡದ ಕೆಲವು ಗಾದೆ ಮಾತುಗಳು ತುಳುವಿನಲ್ಲಿ ಬಳಕೆಯಾಗುವ ರೀತಿ

1) ಉಪ್ಪು ತಿಂದವನ್ನು ನೀರು ಕುಡಿಯುತ್ತಾನೆ- ಕನ್ನಡ

ಉಪ್ಪು ತಿಂದಿನಾಯೆ ನೀರು ಪರ್ವೆ- ತುಳು

2) ಮಂಗನ ಕೈಗೆ ಮಾಣಿಕ್ಯ ಕೊಟ್ಟ ಹಾಗೆ - ಕನ್ನಡ

ಮಂಗನ ಕೈಗೆ ಮಾಣಿಕ ಕೊರಿಲೆಕ್ಕ.

ತುಳು ಭಾಷೆಯಲ್ಲಿ ಒಂದರಿಂದ ಮೊದಲುಗೊಂಡು ಸಂಖ್ಯಾವಾಚಗಳಲ್ಲಿ ದ್ರಾವಿಡದ ಪದಗಳೇ ಉಳಿದಿವೆ.

ಉದಾ; ಒಂಜಿ = ಒಂದು , ರಡ್= ಎಂಡು , ಮೂಜಿ = ಮೂರು, ನಾಲ್ =ನಾಲ್ಕು,ಐನ್ =ಐದು , ಪತ್ತ್=ಹತ್ತು, ಪತ್ತೊಂಜಿ =ಹನ್ನೊಂದು ,ಇರ್ವ= ಇಪ್ಪತ್ತು ,ಮುಪ್ಪ=ಮೂವತ್ತು, ನೂದು>ನೂತ= ನೂರು, ಸಾರ =ಸಾವಿರ , ನೂರು ಎಂಬುದಕ್ಕೆ ಶ(ಸಂಬರ್)ಎಂಬ ರೂಪವೂ ಬಳಕೆಯಲ್ಲಿದೆ.

ಜೈನರ ತುಳು:

ತೌಲನಿಕವಾಗಿ ಜೈನರ ಸಂಖ್ಯೆ ಕಡಿಮೆಯಾಗಿರುವುದಾದರೂ ಕೆಲವು ವಿಶಿಷ್ಟ ಲಕ್ಷಣಗಳಿಂದಾಗಿ ಇವರ ತುಳುವು ಇತರರ ತುಳುವಿಗಿಂತ ಪ್ರತ್ಯೇಕವಾಗಿ ನಿಲ್ಲುತ್ತದೆ. ಇವರು ಜೈನಮತಾವಲಂಬಿಗಳಾಗಿರುವುದರಿಂದ ಅದಕ್ಕೆ ಸಂಬಂಧಪಟ್ಟ ಕೆಲವು ಪಾರಿಭಾಷಿಕ ಪದಗಳು ಇವರ ತುಳುವಿನಲ್ಲಿ ಸೇರ್ಪಡೆಗೊಂಡಿವೆ. ಇತರ ವರ್ಗದವರು ತುಳುವಿನಲ್ಲಿ ಬಳಕೆಯಾಗುವ'ತ' ಕಾರ 'ಸ' ಕಾರಾದಿಯಾಗುವ ಕೆಲವು ಪದಗಳ ಆದಿಯ ತ/ಸಗಳು ಇವರು ತುಳುವಿನಲ್ಲಿ 'ಹ' ಕಾರಾದಿಯಾಗಿರುವುದು ಕಂಡುಬರುತ್ತದೆ.

ಉದಾ:	ಸಪಲಿಗ ತುಳು	ಜೈನರ ತುಳು
	ತಜಪ್ಪ	ಹಜಪ್ಪು
	ತಲಿ	ಹಲಿ
	ತವ್ವು	ಹವ್ವು

ಸಾದಿ	ಹಾದಿ
ಸಾರಗೆ	ಹಾರಗೆ
ಸಾರ್	ಹಾರ್

ಇತ್ಯಾದಿ ಜೈನರಾಡುವ ತುಳುವಿನ ಇಂತಹ ವೈಲಕ್ಷಣಗಳೇ ಈ ಪ್ರಭೇದಕ್ಕೆ ಒಂದು ಪ್ರತ್ಯೇಕ ಸ್ಥಾನವನ್ನು ಕಲ್ಪಿಸಲಿಕ್ಕೆ ಮುಖ್ಯ ಕಾರಣ.

ಸಾಮಾನ್ಯ ತುಳು:

ಈ ಪ್ರಭೇದವು ಬಂಟ, ಬಿಲ್ಲವ, ಮೊಗವೀರ, ಗೌಡ, ಕುಂಬಾರ ಮೊದಲಾದ ಐದಾರು ವರ್ಗಗವರು ತುಳು ಭಾಷಾ ಭೇದಗಳ ಒಂದು ಗುಂಪೆಂದು ಪರಿಗಣಿಸಲಾಗಿದೆ. ಈ ವರ್ಗದವರ ಆಡುನುಡಿಗಳೊಳಗೆ ಬಹಳ ಸಾಮ್ಯ ಹಾಗೂ ಸಮಾನ ಲಕ್ಷಣಗಳಿರುವುದರಿಂದ ಅವುಗಳನ್ನೆಲ್ಲಾ ಒಟ್ಟಾಗಿ 'ಸಾಮಾನ್ಯ ತುಳು ' ಎನ್ನಲಾಗಿದೆ. ಈ ಪ್ರಭೇದವು ಅನ್ಯದೇಶ್ಯ ಮುಖ್ಯವಾಗಿ ಸಂಸ್ಕೃತ ಪದಗಳನ್ನು ಸ್ವೀಕರಿಸಿದುದು ಬಹಳ ಕಡಿಮೆ. ಒಂದು ವೇಳೆ ಎರವಲು ಪದಗಳನ್ನು ಬಳಸಬೇಕಾದ ಸಂದರ್ಭ ಬಂದರೆ ಅದನ್ನು ತನ್ನ ಸ್ವಭಾವಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ಸ್ವೀಕರಿಸುವುದು ಈ ತುಳು ಪ್ರಭೇದದ ವೈಶಿಷ್ಟ್ಯ. ಇಲ್ಲಿ ಲ-ಳ, ನ- ಣ ಶ-ಷ-ಸ ಗಳೊಳಗಿನ ಬೇದ ಕಡಿಮೆಯನ್ನಬಹುದು ತುಳುವಿನ ಅತ್ಯಂತ ಪ್ರಮುಖವಾಗಿರುವ ಬಾಯ್ದೆರೆ ಸಾಹಿತ್ಯವು ರಚನೆಯಾಗಿರುವುದು ಸಾಮಾನ್ಯ ತುಳುವಿನಲ್ಲಿ ಎಂಬುದು ಗಮನಾರ್ಹ ಸಂಗತಿ. ಅದೇ ರೀತಿ ತುಳು ಪತ್ರಿಕೆಗಳು, ಕಾದಂಬರಿಗಳು, ಕವಿತೆಗಳು ಮುಂತಾದ ಸಾಹಿತ್ಯ ಪ್ರಕಾರವೆಲ್ಲ ಈ ತುಳುವಿನಲ್ಲಿ ರಚನೆಯಾಗುತ್ತಿರುವುದರಿಂದ ಇದನ್ನು 'ಸಾಮಾನ್ಯ ತುಳು ' ವೆಂದೇ ಹೆಸರಿಸುವುದು ಸೂಕ್ತವೆನಿಸುತ್ತದೆ.

ತುಳು ಲಿಪಿಯ ಮೂಲ ಮತ್ತು ವಿಕಾಸ:

ಕ್ರಿ. ಶ. ಸುಮಾರು 5ನೇ ಶತಮಾನದ ವೇಳೆಗೆ ಕೇರಳದಲ್ಲಿದ್ದ ಅನೇಕ ಜೈನ ಕ್ಷೇತ್ರಗಳೂ, ಬೌದ್ಧ ಮತ ವಿಹಾರಗಳು ದೇವಾಲಯಗಳಾಗಿ ಮಾರ್ಪಾಡು ಹೊಂದಿದವು ಎಂದು ಚರಿತ್ರೆಗಳಿಂದ ತಿಳಿದುಬರುತ್ತದೆ. ಈ ದೇವಾಲಯಗಳಲ್ಲಿ ಪೂಜೆ ಮಾಡಲು ಯೋಗ್ಯ ಅರ್ಚಕರ ಅವಶ್ಯವಿತ್ತು. ತುಳುನಾಡಿನ ಬಹುಮಂದಿ ಬ್ರಾಹ್ಮಣ ಕುಟುಂಬಗಳು ಈ ಪೂಜಾ ವೃತ್ತಿಗಾಗಿ ಕೇರಳಕ್ಕೆ ವಲಸೆ ಹೋದರು. ಹೀಗೆ ತುಳುನಾಡಿನಿಂದ ಬಂದ ಬ್ರಾಹ್ಮಣರನ್ನು ಕೇರಳಿಯರು 'ತುಳು ನಂಬಿ'ಗಳೆಂದು ಕರೆದರು. ತುಳುನಂಬಿಗಳು ತಮಗೆ ಬೇಕಾದ ವೇದ ಮಂತ್ರಗಳು ಮತ್ತು ಆಚಾರ ವಿಚಾರಗಳನ್ನು ಬರೆದಿಟ್ಟುಕೊಳ್ಳಲು ಬಳಕೆಗೆ ತಂದ ಲಿಪಿ ಸಂಪ್ರದಾಯವೇ 'ತುಳು ಮಲಯಾಳಂ ಲಿಪಿ ' ಎಂದು ಪ್ರಸಿದ್ಧಿ ಪಡೆಯಿತು.

ತುಳು ಲಿಪಿಯು ಕೇರಳದಲ್ಲಿ 'ತುಳು ಮಲಯಾಳಂ ಲಿಪಿ' ಎಂಬ ಹೆಸರಿನಿಂದ ಪ್ರಸಿದ್ಧಿವಾಗಿದೆ. ಒಂದು ಕಾಲದಲ್ಲಿ ಈ ಲಿಪಿಯ ಕೇರಳದಲ್ಲಿ ತುಳುನಾಡಿನಲ್ಲಿ ಸಮಾನವಾಗಿ ಪ್ರಚಾರದಲ್ಲಿದ್ದುದರಿಂದ ಇದಕ್ಕೆ ತುಳು ಮಲೆಯಾಳಂ ಲಿಪಿ ಎಂಬ ಹೆಸರು ಬಂದಿದೆ. ಇದನ್ನು ಹೋಲುವ ಇನ್ನೊಂದು ಶೈಲಿಯ ಲಿಪಿಯು

'ತಿಗಳಾರಿ ಲಿಪಿ' ಎಂಬ ಹೆಸರಿನಿಂದ ಉತ್ತರ ಕನ್ನಡ ಜಿಲ್ಲೆ ಮತ್ತು ಗಟ್ಟದ ಮೇಲೆ ಸಹ ಪ್ರಚಾರದಲ್ಲಿದೆ. ತುಳು ತಿಗಳಾರಿ ಮತ್ತು ಮಲೆಯಾಳ ಲಿಪಿಗಳ ಮೂಲವು ತಮಿಳು ಗ್ರಂಥ ಲಿಪಿ ಅಥವಾ ಆರ್ಯ ಲಿಪಿಯಾದುದರಿಂದ ಇವುಗಳೊಳಗೆ ಪರಸ್ಪರ ಹೋಲಿಕೆಯಿರುವುದು ಕಂಡು ಬರುತ್ತದೆ. ತುಳು ಮಲಯಾಳ ಲಿಪಿಯನ್ನು 'ಆರ್ಯಲಿಪಿ' ಪರಿಷ್ಕೃತ ರೂಪ ಎನ್ನಬಹುದು. ಕೇರಳದಲ್ಲಿ ಒಟ್ಟು 4 ತರದ ಲಿಪಿಗಳು ರೂಢಿಯಲ್ಲಿದ್ದವು. ವಟ್ಟೆಳುತ್ತು, ಕೋಲೆಳುತ್ತು, ಮಲಯಾಣ್ಮ ಮತ್ತು ಆರ್ಯ ಎಳುತ್ತು. ಇವುಗಳಲ್ಲಿ ಅತ್ಯಂತ ಪ್ರಾಚೀನವಾದುದು 'ವಟ್ಟೆಳುತ್ತು.'

ಮಧ್ವಾಚಾರ್ಯರ ಕಾಲಕ್ಕೆ ತುಳು ಲಿಪಿಯು ತುಳುನಾಡಿನಲ್ಲಿ ಸಾಕಷ್ಟು ಪ್ರಚಾರವನ್ನು ಪಡೆಯಿತು ಮಧ್ವಾಚಾರ್ಯ ಕೃತವಾದ ಗ್ರಂಥಗಳೆಲ್ಲವೂ ತುಳು ಲಿಪಿಯಲ್ಲಿ ಬರೆಯಲ್ಪಟ್ಟವು. ಅಂತೂ ಸುಮಾರು 11-12 ನೇ ಶತಮಾನದ ಅನಂತರದ ಕಾಲಘಟ್ಟವನ್ನು ತುಳು ಲಿಪಿಯ ವಿಕಾಸದ ಕಾಲವೆನ್ನಬಹುದು. ಈ ಲಿಪಿಯ ಹೆಚ್ಚಿನ ಅಕ್ಷರಗಳು ಪ್ರದಕ್ಷಿಣಾಕಾರವಾಗಿ ಬರೆಯಲ್ಪಡುವುದರಿಂದ ಇದರ ಬಗ್ಗೆ ಜನರಿಗೆ ಪೂಜ್ಯ ಭಾವನೆಯೂ ಇತ್ತು ಮಂತ್ರಗಳನ್ನು ತುಳುಲಿಪಿಯಲ್ಲಿಯೇ ಬರೆಯಬೇಕು ಎಂಬ ದೃಢ ಸಂಕಲ್ಪವೂ ಇತ್ತು.

ತುಳುವಿನ ವರ್ಣಮಾಲೆ

ಸ್ವರಗಳು

ಮೊಟ್ಟ ಮೊದಲು ತುಳು ವ್ಯಾಕರಣವನ್ನು ಬರೆದವರು ರೆವರೆಂಡ ಜೆ . ಬ್ರಿಗಲ್ ಎಂಬುವರು. ಅವರ 'A grammar of tulu language' ಎಂಬ ಪುಸ್ತಕದಲ್ಲಿ ತುಳು ವರ್ಣಮಾಲೆಯನ್ನು ಕುರಿತು 15 ಸ್ವರಗಳು, 2 ಮಧ್ಯಸ್ವರಗಳು, 34 ವ್ಯಂಜನಗಳು ಎಂದು ಹೇಳಿದ್ದಾರೆ. ಸ್ವರಗಳು ಕುರಿತು ಈ ರೀತಿ ಹೇಳಿದ್ದಾರೆ. ಅ ಆ ಇ ಈ ಉ ಊ ಋ ೠ ಎ ಏ ಐ ಒ ಓ ಔ ಈ ಪಟ್ಟಿಯನ್ನು ಕಾಣುವಾಗ ಕನ್ನಡದಲ್ಲಿ ಅಕಾರಾದಿಯಾಗಿ ಔಕಾರಾಂತ್ಯದ ವರೆಗಿನ 14ಸ್ವರಗಳಿರುವಂತೆಯೇ ತುಳುವಿನಲ್ಲಿ ಇವೆ. ಇವುಗಳಲ್ಲದೇ ಇನ್ನೊಂದು ಸ್ವರವು ಪ್ರತ್ಯೇಕವಾಗಿದ್ದು ಇದು ಅನಿರ್ದಿಷ್ಟ ಎಂಬ ಸಂಜ್ಞೆಯುಳ್ಳದ್ದೆಂದೂ ತೋರಿಬರುತ್ತದೆ.

ಆದರೆ ನಂತರದಲ್ಲಿ ತುಳು ವ್ಯಾಕರಣವನ್ನು ತುಳು ಭಾಷೆಯಲ್ಲಿ ಬರೆದ ಎಸ್,ಯು ಪಣಿಯಾಡಿಯವರು ತುಳು ಸ್ವರಮಾಲೆಯಲ್ಲಿ 'ಅ ಇ ಉ್ ಉ ವ್ ಎ ಒ - ಈ 7 ಸ್ವರಗಳು ಮಾತ್ರ ಇವೆ. ಎಂದಿದ್ದಾರೆ. ಅಕಾರಾಧಿ ಸ್ವರಗಳು ಪ್ರತಿಯೊಂದಕ್ಕೆ ಹದಿನೆಂಟು ಭೇದಗಳಿದ್ದರೂ ಸಾಧಾರಣ ವ್ಯವಹಾರಕ್ಕೆ ಹ್ರಸ್ವ ದೀರ್ಘಗಳು ಮಾತ್ರ ಸಾಕು 'ಐ' ፡ಔ' ಕಾರಗಳು ತುಳು ಭಾಷೆಯ ಶಬ್ದಗಳನ್ನು ಉಪಯೋಗಿಸಲು ಆಗತ್ಯವಿಲ್ಲದಿದ್ದರೂ ಬೇರೆ ಭಾಷೆಯ ಶಬ್ದಗಳನ್ನು ಉಪಯೋಗಿಸುವುದಕ್ಕಾಗಿ ಬೇಕು. ಆದ್ದರಿಂದ ತುಳು ಭಾಷೆಯ ಸ್ವರಮಾಲೆಯನ್ನು ಈ ರೀತಿಯಲ್ಲಿ ಇಟ್ಟುಕೊಳ್ಳಬಹುದೆಂದು ತಿಳಿಸಿದ್ದಾರೆ.

ಅ ಆ ಇ ಈ ಉ್ ಊ್ ಉ ಊ ವ್ ಏ್ ಎ ಏ ಐ ಒ ಓ ಔ.

ಶ್ರೀ ಸೇಡಿಯಾಪು ಕೃಷ್ಣಭಟ್ಟರು ತಮ್ಮ 'ಕನ್ನಡ ವರ್ಣಗಳು' ಎಂಬ ಪುಸ್ತಕದಲ್ಲಿ 'ಐ' ಮತ್ತು 'ಔ' ಎಂಬ ಸ್ವರಗಳು ಸಹಜವಾಗಿ ಇಲ್ಲ ಎಂಬುವುದನ್ನು ತೋರಿಸಿಕೊಟ್ಟಿದ್ದಾರೆ. ತುಳುವಿನಲ್ಲಿಯೂ ಈ ಎರಡು ಸ್ವರಗಳು ಸಹಜವಾಗಿ ಇಲ್ಲ ತುಳುವಿನಲ್ಲಿ ಕಯ್ ಎಂದರೆ ಹಸ್ತ, ಮಯ್ ಎಂದರೆ ಕಾಡಿಗೆ, ಅಯ್ನು ಎಂದರೆ ಪಂಚ ಎಂಬರ್ಥದ ಸಂಖ್ಯಾವಾಚಕ ಹೊಸಗನ್ನಡದಲ್ಲಿ ಈ 'ಯ' ಕಾರಯುಕ್ತವಾದ ಇಂತಹ ಶಬ್ದಗಳನ್ನು ಐ ಎಂಬ ಒಂದೇ ಬಗೆಯಲ್ಲಿ ಬರೆಯುತ್ತಾರೆ ಮತ್ತು ಓದುತ್ತಾರೆ ಕೂಡ. ಮೇಲಿನ ಉದಹರಣೆಗಳಿಂದ ತುಳುವಿನಲ್ಲಿ 'ಐ' ಎಂಬುದಿಲ್ಲದೆ ಅಯ್ ಮತ್ತು ಎಯ್ ಎಂಬ ರೂಪಗಳಿವೆಯೆಂದು ಸ್ಪಷ್ಟವಾಗುತ್ತದೆ. ಅದೇ ರೀತಿ 'ಔ' ಎಂಬುದು 'ಒವು' ಮತ್ತು 'ಎವು' ಎಂದೂ ಉಚ್ಚರಿಸುವುದಿದೆ. ಹಾಗೆಯೇ ತುಳುವಿನಲ್ಲಿ 'ಔ' ಎಂಬ ಸ್ವರವಿಲ್ಲ·ವೆಂದು ನಿರ್ಧರಿಸಬಹುದು. ಈ ಬಗೆಯಲ್ಲಿ ತುಳುವಿನ ಸ್ವರಮಾಲೆಯಲ್ಲಿ ಈ ಕೆಳಗಣ ಸ್ವರಗಳಿವೆಯೆಂದು ಇಟ್ಟುಕೊಳ್ಳೋಣ.

ಅ ಆ ಇ ಈ ಉ ಊ ಎ ಏ ಐ ಒ ಓ.

ಈ ಹನ್ನೆರಡು ಸ್ವರಗಳು ಇಂದು ವ್ಯವಹಾರದಲ್ಲಿರುವ ತುಳುವಿನಲ್ಲಿ ಬಳಕೆಯಲ್ಲಿವೆ.

ವ್ಯಂಜನಗಳು :-

ರೆವರಂಡೆ ಬ್ರಿಗಲ್ ಸ್ವರಗಳಂತೆ ವ್ಯಂಜನಗಳನ್ನು ಈ ಕೆಳಗಿನಂತೆ ನೀಡಿದ್ದಾರೆ.

ವರ್ಗೀಯ ವ್ಯಂಜನಗಳು (25)

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಅವರ್ಗೀಯ ವ್ಯಂಜನಗಳು (9)

ಯ ಱ ಲ ವ ಶ ಷ ಸ ಹ ಳ

ಶ್ರೀ ಎಸ್,ಯು ಪಣಿಯಾಡಿಯವರು ಈ ಕೆಳಗಿನಂತೆ ವ್ಯಂಜನಗಳನ್ನು ನೀಡಿದ್ದಾರೆ.

ಕ ಗ ಙ
ಚ ಜ ಞ
ಟ ಡ ಣ
ತ ದ ನ
ಪ ಬ ಮ


ಯ ರ ಲ ವ ಸ ಹ ಳ ಱ ೞ - ಒಟ್ಟು 24 ವ್ಯಂಜನಗಳು ಎಂದಿದ್ದಾರೆ.


ಶ್ರೀ ಸೇಡಿಯಾಪು ಕೃಷ್ಣ ಭಟ್ಟರ 'ಕನ್ನಡ ವರ್ಣಗಳು' ಎಂಬ ಪುಸ್ತಕದಲ್ಲಿ ಸರಿಯಾದ ಸಮಾಧಾನವು ದೊರೆಯುತ್ತದೆ. ಇಂದು ಬಳಕೆಯಲ್ಲಿರುವ ತುಳುವಿನಲ್ಲಿ ಈ ಕೆಳಗಿನ ವ್ಯಂಜನಗಳಿವೆ ಎಂದು ಅಂಗೀಕರಿಸಬಹುದು.


ಕ ಗ ಙ
ಚ ಜ ಞ
ಟ ಡ ಣ
ತ ದ ನ
ಪ ಬ ಮ
ಯ ರ ಲ ವ ಸ ಳ

ಒಟ್ಟು 21 ವ್ಯಂಜನಗಳು , 12 ಸ್ವರಗಳನ್ನು ಕೂಡಿಸಿಕೊಳ್ಳವಾಗ ತುಳುನಲ್ಲಿ ಸಹಜವಾಗಿ 33 ವರ್ಣಗಳಿವೆಯೆಂದು ಸಿದ್ದವಾಗುತ್ತದೆ.

ತುಳು ಮತ್ತು ಕನ್ನಡ ಲಿಪಿ







ಜಾನಪದ ಪಾಡ್ದನಗಳು:-

ಪಾಡ್ದನ ತುಳು ಜಾನಪದ ಗೀತೆಗಳ ಒಂದು ಪ್ರಕಾರ. ತುಳುನಾಡಿನ ಬದುಕನ್ನು ಬಹು ಪುರಾತನ ಕಾಲದಿಂದಲೇ ನಿರ್ದೇಶಿಸುತ್ತ ಬಂದಿರುವ ಭೂತಾರಾಧನೆಯ ಸಂದರ್ಭದಲ್ಲಿ ವಿಧಿವತ್ತಾಗಿಯೂ, ಇತರ ಸಂದರ್ಭದಲ್ಲಿ ಹವ್ಯಾಸಕ್ಕಾಗಿಯೂ ನಿರೂಪಿಸುವ ವಿಶಿಷ್ಟ ಪಳಮೆಗಳೇ 'ಪಾಡ್ದನ' ಅಥವಾ 'ಸಂಧಿಗಳು'. ಇವುಗಳನ್ನು ತುಳುನಾಡಿನ ವಿಶಿಷ್ಟ ಪುರಾಣಗಳೆನ್ನಬಹುದು. ದೈವ ಸೇವೆಯ ವಿಧಿಯ ಪೂರ್ವರಂಗದಲ್ಲಿ ಆಯಾ ದೈವದ ಹುಟ್ಟು-ಕಟ್ಟು, ಆಯ-ಬೀರ, ಕಲೆ-ಕಾರಣಿಕಗಳನ್ನು ವರ್ಣಿಸುವ ಪಾಡ್ದನಗಳನ್ನು ನಿರ್ದಿಷ್ಟ ಧಾಟಿಯಲ್ಲಿ 'ತೆಂಬರ' ಮೊದಲಾದ ಚರ್ಮವಾದ್ಯದೊಂದಿಗೆ ದೈವ ಪರಿಚಾರಕರು ಹಾಡುತ್ತಾರೆ. ಆರಾಧನಾ ಸಂದರ್ಭವಿಲ್ಲದೆಯೂ ಇವುಗಳಲ್ಲಿ ಕೆಲವನ್ನು ಹಾಡಬಹುದು. ದೈವ ಕಥನಕ್ಕೆ ಹೊರತಾದ ಲೌಕಿಕ ವಸ್ತುಗಳುಳ್ಳ ಪಾಡ್ದನಗಳೂ ಇವೆ. ಪಾಡ್ದನಗಳನ್ನು ಸಂಧಿಗಳೆಂದೂ ಕರೆಯುತ್ತಾರೆ. ಕೆಲವು ದೀರ್ಘ ಪಾಡ್ದನಗಳನ್ನು ಬೇರೆ ಬೇರೆ ಸಂಧಿಗಳಂದ ಕೂಡಿದೆ.

ಉದಾ: ಕೋಟಿ ಚೆನ್ನಯ, ಸಿರಿ

ದೈವಗಳಿಗೆ ಸಂಬಂಧಪಟ್ಟ ಪಾಡ್ದನಗಳನ್ನು ಆಯಾ ದೈವಗಳ ನೇಮ, ಕೋಲ, ಅಯನ, ಬಂಡಿ, ಧರ್ಮನೇಮ ಇತ್ಯಾದಿ ಉತ್ಸವಾಚರಣೆಗಳ ನಿರ್ದಿಷ್ಟ ಸಂದರ್ಭಗಳಲ್ಲಿ ಹಾಡುತ್ತಾರೆ.

ಪಾಡ್ದನ ಶಬ್ದದ ಮೂಲ ದ್ರಾವಿಡವೇ ಆಗಿದೆ. 'ಪಾಡ್' ಧಾತುವಿಗೆ 'ದ್‌ನ' ಎಂಬ ಭೂತ ಕದಂತ ಪ್ರತ್ಯಯ ಸೇರಿ ಪಾಡ್ದನ ಹಾಡಿದ್ದು ಎಂದಾಗಿರಬೇಕು ಅದೇ ಶಬ್ದವು ಮುಂದೆ ಪಾಡ್ದನ, ಪಾಡ್ದನೋ, ಪಾಡ್ದೊನೆ ಎಂದು ಪ್ರಾದೇಶಿಕ ವ್ಯತ್ಯಾಸದಿಂದ ಬೇರೆ ಬೇರೆ ಧ್ವನಿಮಾಗಳನ್ನು ಪಡೆದಿರಬೇಕು ತನ್ನದೇ ಆದ ವೈಶಿಷ್ಟ್ಯವನ್ನು ಪಡೆದಿರುವ ತುಳು ಜನಪದ ಸಾಹಿತ್ಯದ ಈ ಪ್ರಕಾರಕ್ಕೆ ಅನ್ಯ ಭಾಷೆಗಳ ಹೆಸರು ಇರುವುದು ಸಹಜವಲ್ಲ ಪಾಡ್ದನ ಶಬ್ದದ ಈ ರೀತಿಯ ನಿಷ್ಪತ್ತಿ ಹೆಚ್ಚು ಸಮಂಜಸವಾಗಿದೆ.[19]

ಪಾಡ್ದನಗಳು ಹಾಡಿದವುಗಳು ಬಾಯಿಂದ ಬಾಯಿಗೆ ಹಾರಿದು ಬಂದವುಗಳು. ಬ್ರಾಹ್ಮಣ ಜಾತಿಯವರನ್ನು ಬಿಟ್ಟರೆ ಉಳಿದ ತುಳುವರು ಸಾಮಾನ್ಯ ಪಾಡ್ದನಗಳನ್ನು ಹಾಡುತ್ತಾರೆ. ಆದರೆ ಹೆಚ್ಚಾಗಿ ನಲ್ಕೆ, ಪರವ, ಪಂಬದ ಮೊದಲಾದ ವರ್ಗದವರು ಹಾಡುವರು. ಪಾಡ್ದನಗಳು ಹಿಂದಿನಿಂದ ಹರಿದು ಬಂದು ಇಂದಿನವರೆಗೆ ಉಳಿದಿರುವುದು ಇವರಿಂದಲೇ ಎನ್ನಬಹುದು.

ತುಳು ವ್ಯಾಕರಣ:-

ಲಿಂಗ ವಿವಕ್ಷೆ:-

ಇತರ ದ್ರಾವಿಡ ಭಾಷೆಗಳ ಲಿಂಗ ವಿವಕ್ಷೆಯನ್ನು ತುಳುವೂ ಒಳಗೊಂಡಿದೆ. ತುಳುವಿನಲ್ಲಿ ಕೆಳಗೆ ಕೊಟ್ಟಿರುವ ರೀತಿಯಲ್ಲಿ ಲಿಂಗ ವ್ಯವಸ್ಥೆ ಇದೆ.

ಪುಲ್ಲಿಂಗ - ಏಕವಚನ - ಆಯೆ (ದೂರನಿರ್ದೇಶಕ)

ಇಂಚೈ(ಸಮೀಪ ನಿರ್ದೇಶಕ)
ಸ್ತ್ರೀಲಿಂಗ - ಏಕವಚನ (ಆಲ್ ಮೋಲ್)
ಮಾನವ ಬಹುವಚನ (ಅಕುಲ್ ಮೊಕುಲ್)
ನಪುಂಸಕ ಬಹುವಚನ (ಐಕಾಲು ಎಂದೆಕಾಲು)

ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಂಡಿರುವಂತೆ ನಿರ್ದೇಶಕ ಸರ್ವನಾಮ ಮತ್ತು ಕ್ರಿಯಾಪದಗಳಲ್ಲಿ ಸ್ತ್ರೀ ವರ್ಗದ ಸೃಷ್ಟಿ ಈ ಗುಂಪಿನ ಭಾಷೆಗಳಲ್ಲಿ ಸಮಾನವಾದ ಹೊಸ ಬೆಳವಣಿಗೆಯಾಗಿದೆ. ಉಳಿದ ದ್ರಾವಿಡ ಭಾಷಾ ಗುಂಪಿನಲ್ಲಿ ತುಳುವನ್ನು ಗುರುತಿಸಿಕೊಳ್ಳುವುದಕ್ಕೆ ಈ ಸಮಾನ ಭಾಷಿಕಾಂಶವು ಸಹಾಯ ಮಾಡುತ್ತದೆ.

ಸರ್ವನಾಮ:-

ದಕ್ಷಿಣ ಮತ್ತು ಉತ್ತರ ದ್ರಾವಿಡ ಭಾಷೆಗಳಲ್ಲಿ ಆಗಿರುವಂತೆ ತುಳುವಿನ ಉತ್ತಮ ಪುರುಷ ಏಕವಚನದ ಪ್ರಥಮ ವಿಭಕ್ತಿಯೇತರ ರೂಪಗಳು ಮತ್ತು ವ್ಯಾವರ್ತಕ ಬಹುವಚನ ಸರ್ವನಾಮಗಳಾದ 'ಎನ್' ಮತ್ತು 'ಎಂಕಲು' ಇವುಗಳು ಮೂಲ ದ್ರಾವಿಡ ಯ ವು ಎ ಆಗಿ ತುಳುವಿನಲ್ಲಿ ಪರಿವರ್ತನೆಗೊಂಡಿರುವ ಬೆಳವಣಿಗೆಯನ್ನು ತೋರಿಸುತ್ತದೆ. ಎಂಕಲು 'ನಾವು' ಮತ್ತು ನಿಕುಲು (ನೀವು) ಅಕುಲು (ಅವರು) ಮೊಕಾಲು (ಇವರು) ಅಯಿಕುಲು (ಅವು) ಉಂದೆಕುಲು (ಇವು) ಇವೆಲ್ಲವೂ ಬಹುವಚನ ನಾಮಪದಗಳಿಗೆ ಬಹುವಚನ ಸೂಚಕ 'ಕುಲು' ಹೆಚ್ಚುವರಿ, ಸೇರ್ಪಡೆಯಾಗಿರುವುದನ್ನು ತೋರಿಸಿಕೊಡುತ್ತದೆ. ಈ ಬೆಳೆವಣಿಗೆಯನ್ನು ತಮಿಳು, ಮಲಯಾಳಂ, ಗೊಂಡಿ, ತೆಲುಗು ಭಾಷೆಗಳಲ್ಲಿ ಕಾಣಬಹುದು.

ಕಾಲ ಸೂಚಕ ಪ್ರತ್ಯಯ:-

ಭೂತಕಾಲ ಸೂಚಕ ಪ್ರತ್ಯಯ:- ತುಳುವಿನ ಭೂತಕಾಲದಲ್ಲಿ ಎರಡು ಕಾಲ ಸೂಚಕ ಪ್ರತ್ಯಯಗಳಿವೆ.

1) ಅಪೂರ್ಣ ಭೂತಕಾಲ -ಯ್,ತ್,ವ್.

2) ಪೂರ್ಣ ಭೂತಕಾಲ ತದ್ - ತ್- ದ್

ಭೂತೇತರ ಪ್ರತ್ಯಯಗಳು:-

ಸಾಮಾನ್ಯವಾಗಿ ತುಳುವಿನಲ್ಲಿ ವರ್ತಮಾನ ಭವಿಷ್ಯತ್ ಕಾಲ ಸೂಚಕ ಪ್ರತ್ಯಯ ಪ್-ಪುಬ್-ಬ್ ಮತ್ತು ಭವಿಷ್ಯತ್ ಕಾಲ ಸೂಚಕ ಪ್ರತ್ಯಯ ಪ- ವ್- ಬ್ ಹೀಗೆ ಕಾಣಿಸಿಕೊಳ್ಳುತ್ತವೆ.

ಹೀಗೆ ತುಳು ಭಾಷೆಯ ಈ ರೀತಿಯ ಬೆಳೆವಣಿಗೆಯನ್ನು ಗಮನಿಸಿ ಹೇಳುವುದಾದರೆ, ತುಳು ಮೂಲತಃ ದಕ್ಷಿಣ ದ್ರಾವಿಡ ಉಪಗುಂಪಿನ ಭಾಷೆ ಎಂಬುವುದನ್ನು ಬಹಳ ನಿಖರವಾಗಿ ಸ್ಪಷ್ಟಪಡಿಸುತ್ತದೆ. ದಕ್ಷಿಣ ದ್ರಾವಿಡ ಭಾಷೆಗಳ ಜೊತೆಗೆ ತುಳುವನ್ನು ಸೇರಿಸಲು ಅನುಕೂಲವಾಗುವ ಅನೇಕ ಹೊಸ ಅನ್ವೇಷಣೆಗಳಾದ ಸಮಾನ ಭಾಷಿಕಾಂಶಗಳು ದಕ್ಷಿಣ ದ್ರಾವಿಡ ಮತ್ತು ತುಳು ಭಾಷಾ ಗುಂಪಿನಲ್ಲಿ ಇವೆ. ಆದರೆ ಮಧ್ಯದ್ರಾವಿಡ ಅಥವಾ ಉತ್ತರ ದ್ರಾವಿಡ ಭಾಷಾ ಗುಂಪಿನಲ್ಲಿ ತುಳುವನ್ನು ಗುರುತಿಸಿಕೊಳ್ಳಲು ಯಾವುದೇ ಸಮಾನ ಭಾಷಿಕಾಂಶಗಳು ದೊರೆಯುವುದಿಲ್ಲ. ಹಾಗಾಗಿ ತುಳುವನ್ನು ದಕ್ಷಿಣ ದ್ರಾವಿಡ ಭಾಷಾ ಗುಂಪಿಗೆ ಸೇರಿಸುವುದೇ ಸೂಕ್ತ.

ಅಡಿ ಟಿಪ್ಪಣಿಗಳು

1. ಡಾ|| ತಂಗ ಮಣಿಯನ್ -ತಮಿಳು ಭಾಷಾ ಚರಿತ್ರೆ -ಪುಟ -1
2. (ಲೇ) ಎಸ್ . ವಿ. ಷಣ್ಮುಗಂ , ಕೆ. ಕುಶಾಲಪ್ಪಗೌಡ -ತಮಿಳು
   (ಸಂ) ಎಲ್ . ಎಸ್ ,ಶೇಷಗಿರಿ ರಾವ್ - ಭಾರತೀಯ ಸಾಹಿತ್ಯ ಸಮೀಕ್ಷೆ ಪುಟ -28
3. ಡಾ|| . ಎ.ವಿ. ನರಸಿಂಹ ಮೂರ್ತಿ - ಕನ್ನಡ ಲಿಪಿಯ ಉಗಮ ಮತ್ತು ವಿಕಾಸ - ಪುಟ
4. ಆರ್ವಿಯಸ ಸುಂದರಂ - ತೆಲುಗು ಭಾಷೆ ಮತ್ತು ಸಾಹಿತ್ಯ - ಪುಟ -1
5. (ಲೇ) ಬಿ. ರಾಧಾಕೃಷ್ಣ - ಕೆ. ಕುಶಾಲಪ್ಪಗೌಡ -ತೆಲುಗು
   (ಸಂ) ಎಲ್ . ಎಸ್. ಶೇಷಗಿರಿರಾವ್ - ಭಾರತೀಯ ಸಾಹಿತ್ಯ ಸಮೀಕ್ಷೆ - ಪುಟ -31
6. ಆರ್ವಿಯಸ್ ಸುಂದರಂ - ತೆಲುಗು ಭಾಷೆ ಮತ್ತು ಸಾಹಿತ್ಯ -ಪುಟ -20
7. ಹಂಪ: ನಾಗರಾಜಯ್ಯ -ದ್ರಾವಿಡ ಭಾಷಾ ವಿಜ್ಞಾನ -ಪುಟ -83
8. (ಲೇ) ಆರ್.ಪ್ರಬೋಧ ಚಂದ್ರನ್ ನಾಯರ್ - ಕೆ.ವಿ. ನಾರಾಯಣ್ - ಮಲಯಾಳಂ
   (ಸಂ) ಎಲ್ .ಎಸ್ . ಶೇಷಗಿರಿ ರಾವ್ - ಭಾರತೀಯ ಸಾಹಿತ್ಯ ಸಮೀಕ್ಷೆ - ಪುಟ -43
9. ಹಂಪ . ನಾಗರಾಜಯ್ಯ - ದ್ರಾವಿಡ ಭಾಷಾ ವಿಜ್ಞಾನ -ಪುಟ -94
11. ಪ್ರಧಾನ ಸಂಪಾದಕರು- ಬಿ. ಎ. ವಿವೇಕ ರೈ - ತುಳು ಸಾಹಿತ್ಯ ಚರಿತ್ರೆ -ಪುಟ -5
12. ಹಂಪ . ನಾಗರಾಜಯ್ಯ - ದ್ರಾವಿಡ ಭಾಷಾ ವಿಜ್ಞಾನ -ಪುಟ -117
13. (ಸಂ) ಬಿ. ಎ. ವಿವೇಕ್ ರೈ -ತುಳು ಸಾಹಿತ್ಯ ಚರಿತ್ರೆ
    (ಲೇ) ಕೆ. ಪದ್ಮನಾಧ ಕೇಕುಣ್ಣಾಯ -ಪುಟ -222
14. ಅದೇ - ಪುಟ -223
15. ಅದೇ -ಪುಟ-169

ಅಧ್ಯಾಯ -೫

ಪಂಚ ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನ

ತೌಲನಿಕ ಭಾಷಾ ಅಧ್ಯಯನ:-

ಒಂದು ಮೂಲಭಾಷೆಯಿಂದ ರೂಪಗೊಂಡ ಜ್ಞಾತಿ ಭಾಷೆಗಳನ್ನು ಹೋಲಿಸಿ ಅಧ್ಯಯನ ಮಾಡುವುದು ತೌಲನಿಕ ಭಾಷಾ ಅಧ್ಯಯನ. ಇದರ ಮುಖ್ಯ ಉದ್ದೇಶ, ಒಂದು ಮೂಲ ಭಾಷೆಯನ್ನು ಪುನಃ ರಚನೆ ಮಾಡುವುದು. ಮೂಲ ಭಾಷೆಯನ್ನು ಪುನಃ ರಚಿಸುವುದಕ್ಕೆ ಮೂರು ವಿಧಾನಗಳನ್ನು ಅನುಸರಿಸಲಾಗುತ್ತದೆ. ಅವುಗಳೆಂದರೆ :

1) ಸಾಮ್ಯತೆ :-

ಒಂದು ಪದ ಎಲ್ಲಾ ಭಾಷೆಗಳಲ್ಲೂ ಒಂದೇ ರೀತಿ ಬಂದರೆ ಆ ಪದವನ್ನು ಮೂಲ ಪದವೆಂದು ಪುನಾರಚಿಸಬಹುದು.

ಉದಾ.	ತಮಿಳು	:	ನೀರ್
	ಕನ್ನಡ	:	ನೀರು (ನೀರ್)
	ಮಲಯಾಳಂ	:	ನೀರ್
	ತೆಲುಗು	:	ನೀರು / ನೀಳ್ಳು

ಮೇಲಿನ ಉದಾಹರಣೆಯಲ್ಲಿ 'ನೀರ್' ಎಂಬುದು ಹೆಚ್ಚು ಭಾಷೆಗಳಲ್ಲಿ ಬರುವುದರಿಂದ ಅದನ್ನು ಮೂಲವಾಗಿ ಪುನಃ ರಚಿಸಬಹುದು.

2) ಬಹುಮತ :

ಒಂದು ಪದ ಹೆಚ್ಚಿನ ಭಾಷೆಗಳಲ್ಲಿ ಒಂದೇ ರೀತಿಯಾಗಿದ್ದು ಒಂದೆರಡು ಭಾಷೆಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಿ ಬಂದರೆ ಹೆಚ್ಚಿನ ಭಾಷೆಗಳ ರೂಪವನ್ನೇ ಮೂಲರೂಪವಾಗಿ ಪುನಾರಚಿಬಹುದು.

ಉದಾ:-	ತಮಿಳು	:	ಪಾಲ್
	ಮಲಯಾಳಂ	:	ಪಾಲ್
	ಕನ್ನಡ	:	ಹಾಲು
	ತೆಲುಗು	:	ಪಾಲು

ಮೇಲಿನ ಉದಾಹರಣೆ 'ಪಾಲ್' ಎಂಬುದು ಹೆಚ್ಚು ಭಾಷೆಗಳಲ್ಲಿ ಬರುವುದರಿಂದ ಅದನ್ನು ಮೂಲವಾಗಿ ಪುನಾರಚಿಸಿಬಹುದು.

3) ಸಾಧ್ಯತೆ :-

ಜ್ಞಾತಿ ಭಾಷೆಗಳ ಹಲವು ಪದಗಳಲ್ಲಿ ಯಾವ ಪದದಿಂದ ಇತರ ಪರಿವರ್ತನೆಗಳನ್ನು ಸುಲಭವಾಗಿ ವೈಜ್ಞಾನಿಕವಾಗಿ ವಿವರಿಸುವುದಕ್ಕೆ ಸಾಧ್ಯವೋ ಆ ಪದವನ್ನು ಪುನಾರಚಿಸುವುದು. ಈ ವಿಧಾನ ಇದು ಮೇಲಿನ ಎರಡು ವಿಧಾನಗಳಿಗಿಂತ ಉತ್ತಮವಾದ ವಿಧಾನವಾಗಿದೆ.

ತೌಲನಿಕ ಭಾಷಾ ಅಧ್ಯಯನದ ಮತ್ತೊಂದು ಉದ್ದೇಶ ತೌಲನಿಕ ಅಧ್ಯಯನದಿಂದ ಪುನಾರಚನೆಯಾದ ಮೂಲಪದದ ಸಹಾಯದಿಂದ ಸಹೋದರ ಭಾಷೆಯಲ್ಲಾಗಿರುವ ಪರಿವರ್ತನೆಗಳನ್ನು ವಿವರಿಸುವುದು.

ಉದಾ:-	ತಮಿಳು	:	ಪಾಲ್
	ಮಲಯಾಳಂ	:	ಪಾಲ್
	ಕನ್ನಡ	:	ಹಾಲು
	ತೆಲುಗು	:	ಪಾಲು

ಮೂಲಪದವಾದ 'ಪಾಲ್' ಎಂಬುದರಲ್ಲಿನ 'ಪಕಾರ' ತಮಿಳು, ಮಲಯಾಳಂ, ತೆಲುಗು ಭಾಷೆಗಳಲ್ಲಿ 'ಪ'ಕಾರವಾಗಿದ್ದು ಕನ್ನಡದಲ್ಲಿ ಪದದ ಆದಿಯಲ್ಲಿ ಮತ್ತು ಸ್ವರಗಳು ನಡುವೆ ಬರುವ 'ಪ'ಕಾರ 'ಹ' ಕಾರವಾಗುವುದು ಎಂಬ ಸಾಮಾನ್ಯ ವಿಧಿಗನುಗುಣವಾಗಿ 'ಹ' ಕಾರವಾಗಿದೆ. ಇದಲ್ಲದೆ ಕನ್ನಡ , ತೆಲುಗು ಭಾಷೆಗಳಲ್ಲಿ ಆ ಪದದ ಉಚ್ಚಾರಣೆಯನ್ನು ಸುಲಭಗೊಳಿಸುವುದಕ್ಕಾಗಿ ಪದದ ಅಂತ್ಯದಲ್ಲಿ ವಿಮೋಚನಾ ಸ್ವರವಾಗಿ 'ಉ' ಕಾರ ಬಂದಿದೆ.ಹೀಗೆ ಮೂಲಪದದಿಂದ ಸಹೋದರ ಭಾಷೆಗಳಲ್ಲಿನ ಪರಿವರ್ತನೆಯನ್ನು ವಿವರಿಸಬಹುದು.

ಮೇಲಿನ ಉದಾಹರಣೆಯನ್ನು ನೋಡಿದರೆ ತಮಿಳು- ಮಲೆಯಾಳಂ ಭಾಷೆಗಳ ನಡುವಿನ ಸಂಬಂಧ ತಮಿಳು -ಕನ್ನಡ ಭಾಷೆಗಳ ನಡುವಿನ ಸಂಬಂಧಕ್ಕಿಂತ ಹತ್ತಿರವಾದುದು ಎಂಬುದನ್ನು ತಿಳಿಯಬಹುದು.

ತೌಲನಿಕ ಭಾಷೆ ಅಧ್ಯಯನಕ್ಕೆ ಕೆಳಗಿನ ಮೂರು ಹಂತಗಳು ಅವಶ್ಯಕ

1) ಜ್ಞಾತಿ ಭಾಷೆಯ ಶಬ್ದಗಳನ್ನು ಪಟ್ಟಿ ಮಾಡುವುದು.

2). ಪಟ್ಟಿಯಲ್ಲಿ ಜ್ಞಾತಿ ಶಬ್ದಗಳಿಂದ ಮೂಲ ಪದವನ್ನು ಪುನಾರಚನೆ ಮಾಡುವುದು.

3). ಈ ಪದದ ಮೂಲ ಸಹಾಯದಿಂದ ಸಹೋದರ ಭಾಷೆಗಳಲ್ಲಿನ ಪರಿವರ್ತನೆಗಳನ್ನು ವಿವರಿಸುವುದು.

ಪಂಚ ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನ:-

ಮೂಲ ದ್ರಾವಿಡ ಭಾಷೆಯನ್ನು ಮೂಲ ದಕ್ಷಿಣ ಭಾಷೆ, ಮೂಲ ಮಧ್ಯ ದ್ರಾವಿಡ ಭಾಷೆ, ಮೂಲ

ಉತ್ತರ ದ್ರಾವಿಡ ಭಾಷೆಯೆಂದು ಮೂರು ವರ್ಗಗಳಾಗಿ ವರ್ಗೀಕರಿಸಿದ್ದಾರೆ. ಈ ವರ್ಗೀಕರಣಕ್ಕೆ ಆಯಾ ವರ್ಗದ ವೈಶಿಷ್ಟಗಳೇ ಕಾರಣವಾಗಿವೆ. ಮೂಲ ದ್ರಾವಿಡ ಭಾಷೆಗೂ ಈ ಮೂರು ವರ್ಗಗಳಲ್ಲಿನ ಭಾಷೆಗಳಿಗೂ ಧ್ವನಿಮಾ ಆಕೃತಿಮಾ ಘೋಷ, ಸ್ಪರ್ಶಗಳಲ್ಲಿ ಇನ್ನೂ ಅನೇಕ ವಿಷಯಗಳಲ್ಲಿ ವ್ಯತ್ಯಾಸಗಳುಂಟಾಗಿವೆ. ಆದ್ದರಿಂದ ಇವುಗಳನ್ನು ತೌಲನಿಕ ಅಧ್ಯಯನ ಮಾಡುವುದರಿಂದ ಇವುಗಳಲ್ಲಿನ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ತಿಳಿಯಬಹುದು. ಈ ನಿಟ್ಟನಲ್ಲಿ ಪಂಚ ದ್ರಾವಿಡ ಭಾಷೆಗಳನ್ನು ತೌಲನಿಕವಾಗಿ ನೋಡುವುದಾರೆ.

ಇ/ ಎ, ಉ/ ಒ ಪರಿವರ್ತನೆ:-

'ಅ' ಕಾರದಲ್ಲಿ ಆರಂಭವಾಗುವ ತದ್ಧಿತಾಂತ ಪ್ರತ್ಯಯದಿಂದ ಮುಂಚೆ ಬರುವ ಕ್ರಿಯಾಧಾತುವಿನಲ್ಲಿ ತಮಿಳು - ಮಲೆಯಾಳಂ ಭಾಷೆಗಳಲ್ಲಿ 'ಇ ' ಕಾರ 'ಉ' ಕಾರ ಗಳೂ ಇತರ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ 'ಎ' ಕಾರ 'ಓ ' ಕಾರಗಳು ಬರುತ್ತವೆ. ತುಳು ಭಾಷೆಯಲ್ಲಿ 'ಅ' ಕಾರದ ಮುಂಚೆ ಕೆಲವು ಉಪಭಾಷೆಗಳಲ್ಲಿ ಉಚ್ಚ ಸ್ವರಗಳು ಇತರ ಉಪಭಾಷೆಗಳಲ್ಲಿ ಮಧ್ಯಸ್ವರಗಳು ಬರುತ್ತವೆ. ತುಳುವಿನಲ್ಲಿ ಮಧ್ಯಸ್ವರಗಳು ಕನ್ನಡದ ಪ್ರಭಾವದಿಂದ ಮಾತ್ರ ಬರುತ್ತವೆ. ಈ ಬಗೆಯ ಪರಿವರ್ತನೆ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಮಾತ್ರ ಬರುತ್ತದೆ. ಕನ್ನಡದ ಪ್ರಭಾವದಿಂದಾಗಿ ಮಧ್ಯ ದ್ರಾವಿಡ ಭಾಷೆಯಾದ ತೆಲುಗಿನಲ್ಲಿ ಈ ಪರಿವರ್ತನೆ ಕಂಡುಬರುತ್ತದೆ.

ಉದಾ:-	1)	ತಮಿಳು	:	ಚಿಱೈ
		ಮಲಯಾಳಂ	:	ಚಿರ
		ತೆಲುಗು	:	ಚೆರೆ
		ಕನ್ನಡ	:	ಕೆರೆ
		ತುಳು	:	ಕೆರೆ
	2)	ತಮಿಳು	:	ತುಟೈ
		ಮಲಯಾಳಂ	:	ತುಟೆ
		ತೆಲುಗು	:	ತುಡುಚು
		ಕನ್ನಡ	:	ತೊಡೆ
		ತುಳು	:	ತೊಡಪು

★ ಜ್ಞಾತಿ ಭಾಷೆಗಳಲ್ಲಿನ ಪರಸ್ಪರ ಸಂಬಂಧವನ್ನು ಕೆಲವು ನಿತ್ಯೋಪಯೋಗಿ ಪದಗಳ ನಿದರ್ಶನಗಳಲ್ಲಿ ನೋಡಬಹುದು.

ತಮಿಳು	ಕನ್ನಡ	ತೆಲುಗು	ಮಲಯಾಳಂ	ತುಳು
ಎಲಿ	ಇಲಿ	ಎಲುಕ	ಎಲಿ	ಎಲಿ
ಇರಂಡು	ಎರಡು	ರೆಂಡು	ರಂಟು	ರಡ್ಡು
ಚೆವಿ	ಕಿವಿ	ಚೆವಿ	ಚವಿ	ಕೆವಿ

ಮೇಲಿನ ಪಟ್ಟಿಯನ್ನು ಗಮನಿಸಿದಾಗ ಎಲ್ಲಾ ಭಾಷೆಗಳಲ್ಲೂ ಸಾದೃಶ್ಯತೆ ಸ್ಪಷ್ಟವಾಗಿ ಕಾಣಿಸುತ್ತದೆ.

ಸರ್ವನಾಮಗಳು:-

ನಾಮಪದಗಳಿಗೆ ಬದಲಾಗಿ ಬರುವುದು ಸರ್ವನಾಮಗಳು. ಈ ಸರ್ವನಾಮದಲ್ಲಿ ಸರಳ ಸರ್ವನಾಮ ಸಾಧಿತ ಸರ್ವನಾಮ ಎಂದು ಎರಡು ಬಗೆ. ಪುರುಷಾರ್ಥಕ ಸರ್ವನಾಮದಲ್ಲಿ ಉತ್ತಮಪುರುಷ ಸರ್ವನಾಮ, ಮಧ್ಯಮ ಪುರುಷ ಸರ್ವನಾಮ, ಪ್ರಥಮ ಪುರುಷ ಸರ್ವನಾಮ ಎಂದು ಮೂರು ವಿಧಗಳಿವೆ.

ಉತ್ತಮ ಪುರುಷ ಸರ್ವನಾಮದಲ್ಲಿ ಮತ್ತೆ ಏಕವಚನ ಮತ್ತು ಬಹುವಚನವೆಂದು ಎರಡು ವಿಧ ಬಹುವಚನವನ್ನು ಮತ್ತೆ ಸಮಾವೇಶಕ, ಅಸಮಾವೇಶಕವೆಂದು ವಿವೇಚಿಸಬಹುದು.

ಉತ್ತಮ ಪುರುಷ ಸರ್ವನಾಮ (ಏಕವಚನ)

ಭಾಷೆ	ಪ್ರಥಮ ವಿಭಕ್ತಿರೂಪ	ಪರಿವರ್ತಿತ ವಿಭಕ್ತಿ ರೂಪ
ತಮಿಳು	ಯಾನ್, ನಾನ್	ಎನ್
ಮಲಯಾಳಂ	ಞಾನ್, ನಾನ್	ಎನ್
ಕನ್ನಡ	ಆನ್, ನಾನ್	ಎನ್
ತುಳು	ಏನು, ಯಾನು	ಎನ್
ತೆಲುಗು	ಏನು, ನೇನು	ಎನ್

ನಾಮಪದದ ಜ್ಞಾತಿ ಶಬ್ದಗಳಲ್ಲಿ ಕೆಲವು ಆ, ಏ, ಓ, ಎಂಬ ಸ್ವರಗಳಿಂದಲೂ ಕೆಲವು ವ್ಯಂಜನಗಳಿಂದಲೂ ಆರಂಭವಾಗುತ್ತವೆ. ಆದರೆ ಸಾಧ್ಯತೆಯ ಆಧಾರದ ಮೇಲೆ 'ಯಾನ' ಎಂಬುವುದನ್ನು ಮೂಲ ದ್ರಾವಿಡ ರೂಪವಾಗಿ ರಚಿಸಲಾಗಿದೆ.

ಮೂಲ ದ್ರಾವಿಡ 'ಯಾ' ಕಾರ ತುಳು, ತೆಲುಗು ಭಾಷೆಗಳಲ್ಲಿ 'ಏ' ಕಾರವಾಗಿಯೂ ಉಳಿದ ಭಾಷೆಗಳಲ್ಲಿ 'ಆ' ಕಾರವಾಗಿಯೂ ಬದಲಾವಣೆಯಾಗಿದೆ. ತುಳು ಮುಂತಾದ ಭಾಷೆಗಳಲ್ಲಿ 'ಯ' ಕಾರದಲ್ಲಿರುವ 'ಆ' ಕಾರ ಮೊದಲು ಬರುವ ತಾಲವ್ಯ ವ್ಯಂಜನದ ಪ್ರಭಾವದಿಂದ 'ಏ' ಕಾರ ವಾಗುತ್ತದೆ. ಇದರ ಕಾರಣವಾಗಿ 'ಯಾ' ಕಾರ 'ಯೇ' ಕಾರಗುತ್ತದೆ. ಅನಂತರ 'ಆ' ಕಾರವನ್ನು ಬಿಟ್ಟು ಉಳಿದ ಸ್ವರಗಳೊಂದಿಗೆ ಪದದ ಆದಿಯಲ್ಲಿ ಬರುವ 'ಯ' ಕಾರ ಲೋಪವಾಗಿ 'ಯೆ' ಕಾರದಲ್ಲಿ ಬರುವ 'ಯ' ಕಾರ ಲೋಪವಾಗುತ್ತದೆ.

ಆದ್ದರಿಂದ 'ಯಾ 'ಕಾರ 'ಏ' ಕಾರವಾಗಿ (ಯಾ -ಯೇ -ಏ) ಪರಿವರ್ತನೆ ಹೊಂದುತ್ತದೆ. ಆಧುನಿಕ ತಮಿಳು, ಮಲೆಯಾಳಂ, ಕನ್ನಡ ಮುಂತಾದ ಭಾಷೆಗಳಲ್ಲಿ ನಾನ್ ಎಂಬುದು ಬರುತ್ತದೆ. ಇದು ಯಾನ್ ಎಂಬುದರಿಂದ ವಿಕಾಸಗೊಂಡಿದೆ. ಮೊದಲು ಮೂಲದ್ರಾವಿಡ 'ಯಾನ್' ಮಲೆಯಾಳಂ ಭಾಷೆಯಲ್ಲಿರುವ 'ಞಾನ್' ಎಂದಾಗಿದೆ. ಹಳೆಯ ತಮಿಳು ಭಾಷೆಯಲ್ಲೂ 'ಯ' ಕಾರ 'ಞಾ' ಕಾರಗಳು ಸ್ವಚ್ಛಂಥ ಪರಿವರ್ತನೆಯಲ್ಲಿ ಬರುವುದು. ಗಮನಾರ್ಹ ಅಂಶ.

ಉದಾ:- ಯಮಲಿ - ಇಮಲಿ

ಯಮನ್ - ಇಮನ್

ಮಾಧ್ಯಮ ಪುರುಷ ಬಹುವಚನ ಸರ್ವನಾಮ

ತಮಿಳು	ನೀಂ, ನೀರ ,ನೀಯರ್	ನುಂ, ಉಂ, ನುಂಕಳ್
	ನೀವಿರ್, ನೀಂಕಳ್	ಉಂಕಳ್
ಮಲಯಾಳಂ	ನಿಜ್ಜಳ್	ನಿಜ್ಜಳ್
ಕನ್ನಡ	ನೀಂ/ ನೀವು	ನಿಂ
ತುಳು	ನುಕುಳು, ನಿಂಕ್ಳು	ನಿಂಕೈ
ತೆಲುಗು	ಈರು, ಮೀರು	ಮಿಂ ಮೀ

ಪ್ರಥಮ ಪುರುಷ ಏಕವಚನ ಮತ್ತು ಬಹುವಚನ ಸರ್ವನಾಮ

ಭಾಷೆ	ಪ್ರಥಮ ಪುರುಷ ವಿಭಕ್ತಿ ರೂಪ	
	ಏಕವಚನ /	ಬಹುವಚನ
ತಮಿಳು	ತಾನ್	ತಾಮ್, ತಾಂಕಳ್
ಮಲಯಾಳಂ	ತಾನ್	ತಾಮ್
ಕನ್ನಡ	ತಾನ್	ತಾಮ್ , ತಾವು
ತುಳು	ತಾನು	
ತೆಲುಗು	ತಾನು	ತಾಮ

ಪ್ರಥಮ ಪುರುಷ ಸರ್ವನಾಮಗಳನ್ನು ಆತ್ಮಾರ್ಥಕ ಸರ್ವನಾಮಗಳಾಗಿಯೂ ಅನೇಕ ದ್ರಾವಿಡ ಭಾಷೆಗಳಲ್ಲಿ ಬರುವುದರಿಂದ ಈ ಎರಡೂ ಅರ್ಥಗಳು ಮೂಲದ್ರಾವಿಡದಲ್ಲಿದ್ದವು ಎನ್ನಬಹುದು.

ನಾಮ ವಿಶೇಷಣಗಳು :-

ನಾಮಪದದ ಮುಂಚೆ ಬಂದು ಮುಂದೆ ಬರುವ ನಾಮ ಪದವನ್ನು ದರ್ಶಿಸುವ, ವಿವರಿಸುವ ಪದ ನಾಮ ವಿಶೇಷಣ. ಈ ನಾಮ ವಿಶೇಷಣ ಮುಂದೆ ಬರುವ ನಾಮಪದದ ಲಿಂಗ, ವಚನ, ವಿಭಕ್ತಿಗಳಿಗೆ ತಕ್ಕಂತೆ ಬದಲಾಗುವುದಿಲ್ಲ. ನಾಮಪದ ಯಾವ ಲಿಂಗವಾಗಿದ್ದರೂ, ಯಾವ ವಚನವಾಗಿದ್ದರೂ, ಯಾವ ವಿಭಕ್ತಿಯೊಡನೆ ಬಂದರೂ ಅದರ ಮುಂಚೆ ಬರುವ ನಾಮ ವಿಶೇಷಣದಲ್ಲಿ ಯಾವ ಬದಲಾವಣೆ ಆಗುವುದಿಲ್ಲ. ಒಂದೇ ವಿಶೇಷಣ ಎಲ್ಲಕ್ಕೂ ಸೀಮಿತವಾಗುತ್ತದೆ.

ಉದಾ:-

ಒಳ್ಳೆಯ ಹುಡುಗ

ಒಳ್ಳೆಯ ಹುಡುಗಿ

ಒಳ್ಳೆಯ ಹುಡುಗರು.

ನಾಮಪದಗಳೊಡನೆ ಪ್ರತ್ಯಯಗಳನ್ನು ಸೇರಿದಂತೆ ವಿಶೇಷಣಗಳೊಡನೆ ನೇರವಾಗಿ ಅನ್ವಯಿಸಲು ಬರುವುದಿಲ್ಲ. ಅಲ್ಲದೇ ನಾಮಪದದಂತೆ ವಿಶೇಷಣಗಳು ಕರ್ತೃವಿನ ಸ್ಥಾನದಲ್ಲಿ ಬರುವುದಿಲ್ಲ.

ಶುದ್ಧ ವಿಶೇಷಣಗಳು:-

ನಾಮ ವಿಶೇಷಣಗಳಲ್ಲಿ ಎರಡು ವಿಧ. ಅವು ಸಹಜ ಅಥವಾ ಶುದ್ಧ ವಿಶೇಷಣಗಳು ಮತ್ತು ಸಾಧಿತ ವಿಶೇಷಣಗಳು. ದ್ರಾವಿಡ ಭಾಷೆಗಳಲ್ಲಿ ಶುದ್ಧ ವಿಶೇಷಣಗಳಿಲ್ಲ ಎಂದು ಕೆಲವರು ವಾದಿಸಿದರೂ ಕೆಲವು ವಿಶೇಷಣಗಳಾದರೂ ಇದ್ದವು ಎಂಬುವುದಕ್ಕೆ ಆಧಾರಗಳಿವೆ.

ಉದಾ.	ತಮಿಳು	ಮಲಯಾಳಂ	ಕನ್ನಡ	ತೆಲುಗು	ತುಳು
	ಪುತು/ಪುತಿಯ	ಪುತು	ಪೊಸ	ಪೂಸ	ಪೊಸ
	ನಲ್/ನಲ್ಲ	ನಲ್	ನಲ್	ನಲುವು	ನಲು/ನಲ

ಇವುಗಳು ಮಾತ್ರವಲ್ಲದೇ ಈ ಕೆಳಗಿನ ನಾಮ ವಿಶೇಷಣಗಳನ್ನು ಶುದ್ಧ ವಿಶೇಷಣಗಳಾಗಿ ಪರಿಗಣಿಸಲಾಗಿದೆ.

ಚಿಕ್ಕ, ಸಣ್ಣ, ಪುಟ್ಟ, ದೊಡ್ಡ, ಬಿಸಿ, ಹಳೆಯ, ಕಿರಿಯ, ಒಳ್ಳೆಯ ಇತ್ಯಾದಿ

ಸಾಧಿತ ವಿಶೇಷಣಗಳು:-

ಹಲವು ಬಗೆಯ ಪ್ರತ್ಯಯಗಳನ್ನು ಹಚ್ಚುವುದರ ಮೂಲಕ ನಾಮ ಪ್ರಕೃತಿಗಳನ್ನು ಅಥವಾ ಮೂಲ ರೂಪಗಳನ್ನು ವಿಶೇಷಣಗಳಾಗಿ ರೂಪಿಸಬಹುದು. ಇವುಗಳನ್ನು ಸಾಧಿತ ನಾಮ ವಿಶೇಷಣಗಳೆನ್ನುತ್ತಾರೆ.

ಪಂಚ ದ್ರಾವಿಡ ಭಾಷೆಗಳಲ್ಲಿ ನಾಮ ವಿಶೇಷಣ:-

ಭಾಷೆ	ಭೂತಕಾಲ	ಭೂತೇತರ ಕಾಲ
ತಮಿಳು	-ಅ	-ಅ (ವರ್ತಮಾನ)
ಮಲಯಾಳಂ	-ಅ	-ಉಂ(ಭವಿಷ್ಯಕ)
ಕನ್ನಡ	-ಅ	-ಅ -ಉಂ
ತುಳು	-ಇ	-ಇ
ತೆಲುಗು	-ಇನ	ಹಳೆ ತೆಲುಗು -ಎಡು /-ಎದಿ
		ಆಧುನಿಕ ತೆಲುಗು -ವ/ -ವತ್

ದ್ರಾವಿಡ ಭಾಷೆಗಳಲ್ಲೂ ಭೂತಕಾಲ ನಾಮ ವಿಶೇಷಣ ಬರುತ್ತವೆ. ಭೂತಕಾಲ ಕ್ರಿಯಾ ಮೂಲದೊಂದಿಗೆ ಅ/ಇ ಕಾರಗಳನ್ನು ಸೇರಿಸಿದರೆ ಭೂತಕಾಲ ನಾಮವಿಶೇಷಣ ರಚಿತವಾಗುತ್ತದೆ. ಹೆಚ್ಚಿನ ಭಾಷೆಗಳಲ್ಲಿ 'ಅ' ಕಾರ ಪ್ರತ್ಯಯವಾಗಿ ಬಂದರೆ ತುಳು ಭಾಷೆಯಲ್ಲಿ 'ಇ' ಬರುತ್ತದೆ. ತೆಲುಗಿನ 'ಇನ' ಎನ್ನುವ ಪ್ರತ್ಯಯವನ್ನು ಮತ್ತೆ ಬಿಡಿಸಲಾಗುವುದಿಲ್ಲ. ತಮಿಳು - ತೆಲುಗು ಭಾಷೆಗಳ ತೌಲನಿಕ ಅಧ್ಯಯನ ಇದರಲ್ಲಿರುವ

‘ಇನ್’ ಎಂಬುದು ಭೂತಕಾಲ ಪ್ರತ್ಯಯ ಎಂಬುದನ್ನು ‘ಅ’ ಕಾರ ನಾಮ ವಿಶೇಷಣ ಪ್ರತ್ಯಯ ಎಂಬುದನ್ನು ವ್ಯಕ್ತಪಡಿಸುತ್ತದೆ.

ಉದಾ:-	ತಮಿಳು	ತೆಲುಗು
	ಆಟ್- ಇನ್ -ಅ	ಆಡ್-ಇನ್
	ಪಾಟ್-ಇನ್-ಅ	ಪಾಡ್ -ಇನ್

‘ಇನ್’ ಎನ್ನುವ ಅನುಕ್ರಮ ತಮಿಳುಭಾಷೆಯಲ್ಲಿ ಸ್ಪರ್ಶ ಧ್ವನಿಯಲ್ಲಿ ಅಂತ್ಯವಾಗುವ ಸಬಲ ಕ್ರಿಯಾ ಮೂಲಗಳೊಂದಿಗೆ ಬಂದರೆ, ತೆಲುಗು ಭಾಷೆಯಲ್ಲಿ ಸಾದೃಶ್ಯಾತ್ಮಕ ರಚನೆಯಿಂದ ಎಲ್ಲಾ ಕ್ರಿಯಾಮೂಲಗಳೊಂದಿಗೆ ಬರುತ್ತದೆ. ಆದರೂ ‘ಡು’ ವಿನಲ್ಲಿ ಅಂತ್ಯವಾಗುವ ಮೂರು ದ್ವಿಯಕ್ಷರ ಕ್ರಿಯಾಪದಗಳಿಗೆ ಮತ್ತು ‘ಗಂ’ ನಲ್ಲಿ ಅಂತ್ಯವಾಗುವ ಒಂದು ದ್ವಿಯಕ್ಷರ ಕ್ರಿಯಾಪದಕ್ಕೆ ತೆಲುಗು ಭಾಷೆಯಲ್ಲಿ ಭಿನ್ನರೂಪಗಳಿವೆ. ಈ ಭಿನ್ನರೂಪಗಳಲ್ಲಿ ಭೂತಕಾಲ ನಾಮ ವಿಶೇಷಣಗಳಲ್ಲಿನ ಅಂತ್ಯ ‘ಡ’ ಕಾರ ‘ಗ’ ಕಾರಗಳು ಒತ್ತಕ್ಷರಗಳಾಗುವುವು ಅವುಗಳ ಮುಂದೆ ‘ಅ’ ಕಾರ ಬರುವುದು.

ಕ್ರಿಯಾಪದ:-

ಭಾಷೆಯಲ್ಲಿ ನಾಮಪದದಷ್ಟೇ ಅತ್ಯಂತ ಪ್ರಾಮುಖವಾದುದು ಕ್ರಿಯಾಪದ. ಭಾಷೆಯ ಆರಂಭಿಕ ಹಂತದಲ್ಲಿ ಕ್ರಿಯಾಪದದ ಮೂಲರೂಪವಾದ ಧಾತುವನ್ನೇ ಕ್ರಿಯಾಪದನ್ನಾಗಿ ಬಳಸುತ್ತಿದ್ದರೆಂದು ಭಾಷಾವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ ‘‘ದ್ರಾವಿಡ ಭಾಷೆಗಳಲ್ಲಿ ನ್ಯಾಯವಾಗಿ ಕ್ರಿಯಾಪದವೇ ಇಲ್ಲ’’ ಎಂದು ಕಾಲ್ಡ್‌ವೆಲ್‌ರವರ ಅಭಿಪ್ರಾಯ. ಇದರರ್ಥ ಧಾತುಗಳೇ ಇಲ್ಲವೆಂದಲ್ಲ. ದ್ರಾವಿಡ ಭಾಷೆಗಳ ಕ್ರಿಯಾಪದದ ಮೂಲ ಭಾಗವಾದ ಧಾತುವಿಗೆ ಕಾಲಸೂಚಕ ಪ್ರತ್ಯಯಗಳನ್ನು ಪ್ರಯೋಗಿಸಿದಲ್ಲಿ ಅದು ಕೃಲ್ಲಿಂಗವಾಗಿ ನಾಮಪ್ರಕೃತಿ ಆಗುವುದು.

ಉದಾ:-
ಮಾಡು - ಮಾಡಿದ
ಓಡು - ಓಡಿದ

ರಾ. ನರಸಿಂಹಚಾರ್ಯರವರು ಕ್ರಿಯಾಪದದ ವಿಶ್ಲೇಷಣೆ ಮಾಡುವಾಗ ತಮಿಳು , ಕನ್ನಡ , ತೆಲುಗು ಭಾಷೆಗಳಲ್ಲಿ ಕಂಡು ಬರುವ ಧಾತುಗಳನ್ನು ತುಲನಾತ್ಮಕ ದೃಷ್ಟಿಯಿಂದ ಬಹಳ ಅರ್ಥಪೂರ್ಣವಾದ ವರ್ಗೀಕರಣ ಮಾಡಿದ್ದಾರೆ.

ನಾಮಪ್ರಕೃತಿಗಳಲ್ಲಿ ಯಾವ ರೀತಿಯಲ್ಲಿ ಜ್ಞಾತಿ ರೂಪಗಳನ್ನು ಗುರುತಿಸಿಬಹುದೋ ಅದೇ ತೆರನಾಗಿ ಧಾತುಗಳಲ್ಲಿಯೂ ಈ ಭಾಷೆಗಳ ಪರಸ್ಪರ ಬಾಂಧವ್ಯವನ್ನು ಕಾಣಬಹುದು. ಅವರು ಉದಾಹರಿಸಿರುವ ಧಾತುಗಳಲ್ಲಿ ನಿದರ್ಶನಗಳು ಇಂತಿವೆ.

1) ತಮಿಳು, ಕನ್ನಡ, ತೆಲುಗು, ಭಾಷೆಗಳಲ್ಲಿರುವ ಸಮಾನ ಧಾತುಗಳು

ತಮಿಳು	ಕನ್ನಡ	ತೆಲುಗು
ಆಡು	ಆಡು	ಆಡು
ಕೂಡು	ಕೂಡು	ಕೂಡು
ಪಾಡು	ಪಾಡು	ಪಾಡು
ನಗು	ನಗು	ನಗು

2) ತಮಿಳು ಹಾಗೂ ತೆಲುಗು ಭಾಷೆಗಳಲ್ಲಿರುವ ಅಲ್ಪ ಸ್ವಲ್ಪ ವ್ಯತ್ಯಾಸಗಳು

ತಮಿಳು	ಕನ್ನಡ	ತೆಲುಗು
ನಡ	ನಡೆ	ನಡಚು
ವರೈ	ಬರೆ	ವ್ರಾಯು
ನಡುಂಗು	ನಡುಗು	ನಡುಂಕು

3) ಕನ್ನಡ ಹಾಗೂ ತೆಲುಗು ಭಾಷೆಯಲ್ಲಿ ಕಂಡು ಬರುವ ಸಮಾನ ಧಾತುಗಳು

ಕನ್ನಡ	ತೆಲುಗು
ಪುಟ್ಟು	ಪುಟ್ಟು
ದಾಂಟು	ದಾಂಟು
ಅಂಟು	ಅಂಟು

4) ಕನ್ನಡ ಮತ್ತು ತಮಿಳು ಭಾಷೆಯಲ್ಲಿ ಕಂಡು ಬರುವ ಸಮಾನ ಧಾತುಗಳು

ತಮಿಳು	ಕನ್ನಡ
ಈ	ಈ
ಕೊಲ್	ಕೊಲ್
ಕೊಳ	ಕೊಳ
ಓದು	ಓದು

ಇಷ್ಟೇ ಅಲ್ಲದೇ ಧಾತುಗಳು ಕೆಲ ಸಂದರ್ಭಗಳಲ್ಲಿ ರೂಪ ಪರಿವರ್ತನೆ ಆಗಿರುವುದನ್ನು ಕಂಡರೆ ಮತ್ತೆ ಕೆಲವು ಸಂದರ್ಭಗಳಲ್ಲಿ ಅರ್ಥ ಪರಿವರ್ತನೆ ಆಗಿರುವುದೆಂಬ ಅಭಿಪ್ರಾಯವನ್ನು ನರಸಿಂಹಚಾರ್ಯ ಅವರು ವ್ಯಕ್ತಪಡಿಸುತ್ತಾರೆ. ನಿದರ್ಶನಾರ್ಥವಾಗಿ ನೋಡಿದಾಗ ತಮಿಳಿನ 'ತಿಗಳ್' ರೂಪಕ್ಕೆ 'ಪ್ರಕಾಶಿಸು' ಅರ್ಥವಿದ್ದರೆ ಅದಕ್ಕೆ ಸಂವಾದಿಯಾಗಿ ದೊರೆಯುವ ಕನ್ನಡದ 'ತೆಗಳ್' ಮತ್ತು ತೆಲುಗಿನ 'ತೆಗಡು' ಎಂಬುವುಗಳಿಗೆ 'ಹಳಿ' ಎಂಬ ಅರ್ಥವಿದೆ. ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ 'ಕೇಳ್'ಎಂಬ ಒಂದೇ ಧಾತುವಿನ ಮೂಲಕ ಎರಡು ಕ್ರಿಯೆಗಳನ್ನು ವ್ಯಕ್ತಪಡಿಸುವರು.

ವಿಧ್ಯರ್ಥಕದಲ್ಲಿ ಹಾರೈಕೆ ಇಲ್ಲವೇ ಅಪೇಕ್ಷೆಯನ್ನು ವ್ಯಕ್ತಪಡಿಸುವಾಗ ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ 'ಅ'(ಕ) ಎನ್ನುವ ಪ್ರತ್ಯಯವನ್ನು ಬಳಸಿದರೆ ತೆಲುಗಿನಲ್ಲಿ 'ಮ' ಪ್ರಯೋಗದಲ್ಲಿರುವುದನ್ನು ಕಾಣುತ್ತೇವೆ.

ಉದಾ : ತಮಿಳು : ಪೆಱುಕ (ಪಡೆಯಲಿ)
ಕನ್ನಡ : ನೀಂ ಕೇಳ, ನೀಂ ನೋಡ
ತೆಲುಗು : ಪೋಷಿಂಪುಮ (ಪೋಷಿಸಲಿ)

ನಿಷೇದಾರ್ಥದಲ್ಲಿ ಆಜ್ಞೆ ಮಾಡುವಾಗ ತಮಿಳು ಹಾಗೂ ಕನ್ನಡ ರೂಪಗಳು ಸಾದೃಶ್ಯತೆಯನ್ನು ತೋರಿಸಿದರೆ, ತೆಲುಗಿನಲ್ಲಿ ಅಲ್ಪಸ್ವಲ್ಪ ಬದಲಾವಣೆ ಹೊಂದಿರುವುದನ್ನು ಗಮನಿಸಬಹುದು.

ಉದಾ : ತಮಿಳು : ಚೆಯ್ಯನ್ಮಿನ್ (ಚೆಯ್+ಅನ್+ಮಿನ್) = ಮಾಡಬೇಡಿ
ಕನ್ನಡ : ಗೆಯ್ಯಲಿಂ (ಗೆಯ್+ಅಲ್+ಇಂ) = ಮಾಡಬೇಡಿ
ತೆಲುಗು : ಚೇಯಕಂಡಿ (ಚೇಯ್ +ಅಕ + ಅಂಡಿ) = ಮಾಡಬೇಡಿ

ತೃತೀಯ ಪುರುಷದ ಏಕವಚನ ಹಾಗೂ ಬಹುವಚನಗಳಲ್ಲಿ ವಿಧ್ಯರ್ಥಕವನ್ನು ವ್ಯಕ್ತಪಡಿಸುವಲ್ಲಿ ಕನ್ನಡ ಭಾಷೆಯಲ್ಲಿ 'ಕೆ' 'ಗೆ' ಕಂಡು ಬಂದರೆ ತಮಿಳಿನಲ್ಲಿ 'ಕ' ಆ ಕಾರ್ಯವನ್ನು ಮಾಡುತ್ತದೆ.

ಕನ್ನಡ	ತಮಿಳು
ಕೆಡುಗೆ	ಕೆಡುಗ
ರಕ್ಷಿಕ್ಕೆ	ಇರಕ್ಷಿಕ್ಕ

ಸಂಖ್ಯಾವಾಚಕಗಳು:-

ಯಾವುದೇ ವಸ್ತು ಇಲ್ಲವೇ ವ್ಯಕ್ತಿಯ ಎಣಿಕೆಯನ್ನು ಸೂಚಿಸುವ ಪದಗಳೇ 'ಸಂಖ್ಯಾವಾಚಕ'. ಯಾವುದೇ ಒಂದು ಭಾಷೆಯಲ್ಲಿ ಸರ್ವನಾಮಗಳು ಹೇಗೆ ಸ್ಥಿರವಾದ ಸ್ಥಾನ ಹೊಂದಿರುತ್ತದೆಯೋ, ಅಂತೆಯೇ ಸಂಖ್ಯಾವಾಚಕಗಳು ಕೂಡ ಸಂಖ್ಯಾ ವಿಶೇಷದ ಜೊತೆಗೆ ನಾಮಪದ ಬಳಕೆಯಾಗಿ ವಾಕ್ಯ ನಿರ್ಮಾಣ ಮಾಡಬಹುದು.

ಉದಾ. ಒಂದು ಊರು, ಒಬ್ಬ ಹುಡುಗ, ಇತ್ಯಾದಿ.

ತಮಿಳು, ಮಲೆಯಾಳಂ, ತೆಲುಗು, ಕನ್ನಡ, ತುಳುಗಳಲ್ಲಿ ಕಂಡು ಬರುವ ಸಂಖ್ಯಾವಾಚಕಗಳ ತೌಲನಿಕ ನೋಟವನ್ನು ಮೂಲ ದ್ರಾವಿಡದೊಂದಿಗೆ ಹೇಗಿದೆ ನೋಡೋಣ.

ಮೂಲದ್ರಾವಿಡ	ತಮಿಳು	ಮಲಯಾಳಂ	ತೆಲುಗು	ಕನ್ನಡ,	ತುಳು
*ಒನ್ತು/ಒಕ್ಕುನ್ತು	ಒನ್ಱು	ಒನ್ನು	ಒಕಟಿ	ಒನ್ದು	ಒನಿ
	ಒರು/ಓರ	ಓರು/ಒರು	ಒನ್ದು,ಒಕ	ಒರ್, ಓರ್	ಒರ್
*ಇರಣ್ಡು	ಇರಂಡು	ರೆಂಡು	ರೆಂಡು	ಎರಡು	ರಡ್ಡು
	ಇರು, ಈರ	ಇರು, ಈರ	ಇದ್ದರು	ಇರ್, ಈರ್	ಇರ್
*ಚಯನ್ತು	ಐಂದು ಅಂಜು	ಅಂಜು	ಐದು/ಏನು	ಐನು	ಐನು
	ಐ	ಐ	ಏ	ಐ	ಐ
*ಪತ್ತು	ಪನ/ಪತ್ತು	ಪತ್ತು	ಪದಿ,ಪದ	ಪತ್ತು, ಪದಿನ್	ಪಾದ್
	ಪದು, ಪದಿನ್	ಪದಿನ್	ಪನ್	ಪನ್	ಪಾತ್
	ಪನ್	ಪನ್			
* ನೂಱು	ನೂಱು	ನೂಱು	ನೂಱು, ವದ	ನೂಱು	ನೂದು

ಈ ಕೋಷ್ಟಕವನ್ನು ಗಮನಿಸಿದಾಗ ಈ ಪಂಚ ದ್ರಾವಿಡ ಭಾಷೆಗಳಲ್ಲಿ ಸಂಖ್ಯಾವಾಚಕಗಳು ಪರಸ್ಪರ ಸಾದೃಶ್ಯವನ್ನು ಹೇಗೆ ಉಳಿಸಿಕೊಂಡು ಬಂದಿವೆ ಎನ್ನುವ ಸಂಗತಿಯನ್ನು ಅರಿಯಬಹುದು. ಇಲ್ಲಿ ಪ್ರತಿಯೊಂದು ಸಂಖ್ಯಾವಾಚಿಯ ಪ್ರಕೃತಿ ಸ್ವರೂಪಕ್ಕೂ , ಆದೇಶ ಸ್ವರೂಪಕ್ಕೂ ಇರುವ ಅಂತರವನ್ನು ಪರಿಶೀಲಿಸಬಹುದು.

ಉಪಸಂಹಾರ

ಭಾರತೀಯ ಭಾಷಾ ಪರಿವಾರಗಳಲ್ಲಿ ದ್ರಾವಿಡ ಭಾಷಾ ಪರಿವಾರ ಎರಡನೆಯ ಸ್ಥಾನವನ್ನು ಪಡೆದುಕೊಂಡಿದೆ. ಮೊದಲಿಗೆ ದ್ರಾವಿಡ ಭಾಷೆಗಳು ಸಂಸ್ಕೃತ ಜನ್ಯವೆಂಬ ಅಭಿಪ್ರಾಯ ಆಳವಾಗಿ ಬೇರೂರಿತ್ತು. ಆದರೆ ಭಾಷಾ ವಿಜ್ಞಾನಿಗಳ ಶ್ರಮದಿಂದಾಗಿ ದ್ರಾವಿಡ ಭಾಷೆಗಳು ಸ್ವತಂತ್ರವೆಂಬ ವಿಚಾರ ಸ್ಥಾಪಿತವಾಯಿತು.

ಇದೇ ಸಂದರ್ಭದಲ್ಲಿ ಪಂಚ ದ್ರಾವಿಡ ಭಾಷೆಗಳ ವಿಚಾರದಲ್ಲಿದ್ದ ತಪ್ಪು ಅಭಿಪ್ರಾಯಗಳೂ ದೂರವಾಗಿವೆ. ಕನ್ನಡ ,ತೆಲುಗು, ತಮಿಳು, ಮಲಯಾಳಂ, ತುಳು - ಈ ಐದು ಭಾಷೆಗಳನ್ನು ಪಂಚ ದ್ರಾವಿಡ ಭಾಷೆಗಳೆಂದು ಕರೆಯುತ್ತಿದ್ದರು. ಭಾಷಾಶಾಸ್ತ್ರಜ್ಞರು ಸಂಶೋಧನೆಗಳಿಂದ ಮರಾಠಿ ಮತ್ತು ಗುಜಾರಾತಿ ಭಾಷೆಗಳನ್ನು ಪಂಚ ದ್ರಾವಿಡ ಗುಂಪಿಗೆ ಸೇರುವುದಿಲ್ಲವೆಂದೂ, ಅದರ ಬದಲು ಅವು ಪಂಚಗೌಡ ಭಾಷೆಗಳ ಪಂಗಡಕ್ಕೆ ಸೇರುತ್ತವೆಯೆಂದೂ, ಈ ಭಾಷೆಗಳನ್ನು ಸರಿಯಾಗಿ ವರ್ಗೀಕರಿಸಿದರು. ಉತ್ತರಭಾರತದಲ್ಲಿ ವಿಶೇಷವಾಗಿ ಇರುವ ಪಂಚಗೌಡ ಭಾಷೆಗಳೇ ಬೇರೆ, ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಇರುವ ಪಂಚ ದ್ರಾವಿಡ ಭಾಷೆಗಳ ಬೇರೆ ಎಂಬುದನ್ನು ನಿರೂಪಿಸಿದ್ದಾರೆ.

ಪಂಚ ದ್ರಾವಿಡ ಭಾಷೆಗಳಾದ ತಮಿಳು, ಕನ್ನಡ, ಮಲಯಾಳಂ, ತೆಲುಗು, ತುಳು ಇವುಗಳು ಕ್ರಮವಾಗಿ ತಮಿಳುನಾಡು, ಕರ್ನಾಟಕ, ಕೇರಳ, ಆಂಧ್ರ, ತುಳು ನಾಡುಗಳಲ್ಲಿ ಬಳಕೆಯಲ್ಲಿವೆ. ಇವುಗಳಲ್ಲಿ ತೆಲುಗನ್ನು ಹೊರತು ಪಡಿಸಿದರೆ ಉಳಿದೆಲ್ಲಾ ಭಾಷೆಗಳು ದಕ್ಷಿಣ ದ್ರಾವಿಡ ಭಾಷೆಗಳ ಗುಂಪಿಗೆ ಸೇರುತ್ತವೆ. ತೆಲುಗು ಮಧ್ಯದ್ರಾವಿಡ ಭಾಷೆಗಳ ಗುಂಪಿಗೆ ಸೇರುತ್ತದೆ. ಈ ಭಾಷೆಗಳು ಪರಸ್ಪರ ಜ್ಞಾತಿ ಮೂಲ ಅಂತರ್ ಸಂಬಂಧವನ್ನು ಹೊಂದಿವೆ. ಅಂದರೆ ಈ ಭಾಷೆಗಳು ಪರಸ್ಪರ ಭಾಷಿಕವಾಗಿ, ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ, ವ್ಯವಹಾರಿಕವಾಗಿ ಸೋದರತ್ವದ ಅಂಶಗಳನ್ನು ಒಳಗೊಂಡಿವೆ.

ಭಾಷಿಕವಾಗಿ ಹೇಳುವುದಾದರೆ ಅನೇಕ ಅಂಶಗಳಲ್ಲಿ ಪರಸ್ಪರ ಸಾಮ್ಯಗಳನ್ನು ಗುರುತಿಸಬಹುದು. ಭಾರತೀಯ ಭಾಷೆಗಳಲ್ಲಿ ಇಂಡೋ-ಆರ್ಯನ್ ಬುಡಕಟ್ಟಿನ ಭಾಷೆಯಾದ ಲೌಕಿಕ ಸಂಸ್ಕೃತವನ್ನು ಕುರಿತು ಪಾಣಿನಿಯು ರಚಿಸಿದ 'ಅಷ್ಟಾಧ್ಯಾಯೀ' ಕೃತಿಯು ಅತ್ಯಂತ ಪ್ರಾಚೀನ ವ್ಯಾಕರಣ ಗ್ರಂಥವಾಗಿದೆ. ಈ ಗ್ರಂಥದ ಅಧ್ಯಯನದಿಂದಾಗಿ ಸಂಸ್ಕೃತೇತರ ಭಾಷೆಗಳ ವಿದ್ವಾಂಸರಿಗೆ ತಮ್ಮ ತಮ್ಮ ಮಾತೃಭಾಷೆಯಲ್ಲೂ ವ್ಯಾಕರಣ ಗ್ರಂಥಗಳನ್ನು ರಚಿಸಲು ಪ್ರೇರಣೆಯಾಯಿತು. ಅದರ ಫಲವಾಗಿ ಸಂಸ್ಕೃತೇತರ ಭಾಷೆಗಳಲ್ಲಿ ವ್ಯಾಕರಣದ ಚಿಂತನೆಗಳು ನಡೆಯಲು ಸಾಧ್ಯವಾಯಿತು.

ಉದಾ:- ಕನ್ನಡದ ಪ್ರಾಚೀನ ಕೃತಿ ಕವಿರಾಜಮಾರ್ಗ, ಕೇಶಿರಾಜನ ಶಬ್ದಮಣಿದರ್ಪಣ, ತಮಿಳಿನ

ತೊಲ್ಕಾಪಿಯಂ, ಮಲೆಯಾಳಂನ ಲೀಲಾತಿಲಕಂ ಕೃತಿಗಳು ಆಯಾ ಭಾಷೆಗಳಿಗೆ ಪ್ರಾಚೀನ ವ್ಯಾಕರಣ ಗ್ರಂಥಗಳನ್ನು ಒದಗಿಸಿಕೊಟ್ಟವು.

ಭೌಗೋಳಿಕ ಹಿನ್ನೆಲೆಯಲ್ಲಿ ನೋಡುವುದಾದರೆ ಈ ಪಂಚ ದ್ರಾವಿಡ ಭಾಷೆಗಳು ದಕ್ಷಿಣ ಭಾರತದ ನೆರೆ ಹೊರೆಯ ರಾಜ್ಯಗಳಲ್ಲಿ ಪ್ರಚಲಿತದಲ್ಲಿರುವ ಭಾಷೆಗಳು. ಹೀಗಾಗಿ ಈ ಭಾಷೆಗಳಲ್ಲಿ ಪರಸ್ಪರ ಕೊಡು-ಕೊಳ್ಳುವಿಕೆಗಳು ನಡೆಯುವುದು ಸಹಜ ವಿದ್ಯಮಾನ.

ಸಾಮಾಜಿಕವಾಗಿ ಆಚಾರ-ವಿಚಾರ, ಹಬ್ಬ-ಹರಿದಿನ, ಸಂಪ್ರದಾಯಗಳಲ್ಲಿ ಕೆಲವೊಂದು ಸಾಮ್ಯಗಳನ್ನು ಗುರುತಿಸಬಹುದು.

ಉದಾ:- ಕರ್ನಾಟಕದಲ್ಲಿ ಸಂಕ್ರಾಂತಿ ಆಚರಿಸಿದರೆ, ತಮಿಳುನಾಡಿನಲ್ಲಿ ಅದನ್ನೇ ಪೊಂಗಲ್ ಆಗಿ ಆಚರಿಸುತ್ತಾರೆ.

ಸಾಂಸ್ಕೃತಿಕವಾಗಿ ಸಂಗೀತ, ನೃತ್ಯ, ಆಹಾರ, ಉಡುಪು, ವ್ಯವಹಾರ ಇತ್ಯಾದಿಗಳಲ್ಲಿ ವಿಚಾರ ವಿನಿಮಯ ಕಂಡುಬರುತ್ತದೆ.

ಒಟ್ಟನಲ್ಲಿ ಸಾದೃಶ್ಯಾಂಶಗಳು ಸಾಕಷ್ಟಿದ್ದರೂ ಈ ಭಾಷೆಗಳು ಒಂದರೊಳಗೊಂದು ಹುಟ್ಟಬಂದಿಲ್ಲ. ಮೂಲದ್ರಾವಿಡದಿಂದ ಬೇರ್ಪಟ್ಟ ಪಂಚ ದ್ರಾವಿಡ ಭಾಷೆಗಳಾದ, ತಮಿಳು, ಕನ್ನಡ, ಮಲಯಾಳಂ, ತೆಲುಗು, ತುಳು ಪ್ರಾಚೀನ ಕಾಲದಿಂದಲೂ ಸ್ವತಂತ್ರ ಭಾಷೆಗಳಿಗಿರಬೇಕಾದ ಎಲ್ಲಾ ಸಾಮರ್ಥ್ಯಗಳನ್ನು ಮೈಗೂಡಿಸಿಕೊಂಡು ಬೆಳೆಯುತ್ತಿವೆ ಎಂಬ ಭಾಷಿಕ ವಾಸ್ತವತೆಯನ್ನು ಗುರುತಿಸಲು ಈ ಅಧ್ಯಯನದ ಮೂಲಕ ಸಾಧ್ಯವಾಗಿದೆ ಎಂದು ಹೇಳಬಹುದು.

ಅಡಿ ಟಿಪ್ಪಣಿಗಳು

1. ಡಾ. ತಂಗಮಣಿಯನ್ - ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನ, ಪುಟ 6
2. ಅದೇ, ಪುಟ 21
3. ಹಂಪ . ನಾಗರಾಜಯ್ಯ - ದ್ರಾವಿಡ ಭಾಷಾ ವಿಜ್ಞಾನ -ಪುಟ -110

ಪರಾಮರ್ಶನ ಗ್ರಂಥಗಳು

1. ಆಧುನಿಕ ವರ್ಣಾತ್ಮಕ ಭಾಷಾ ವಿಜ್ಞಾನ - ಡಾ।। ರಾಜೇಶ್ವರಿ ಮಹೇಶ್ವರಯ್ಯ , ಪ್ರಕಾಶನ -ಸಮಾಜ ಬುಕ್ ಡಿಪೋ, ಧಾರವಾಡ (2003)
2. ಕನ್ನಡ ಭಾಷಾ ಚರಿತ್ರೆ - ಡಾ।। . ಕೆ. ಕಂಪೇಗೌಡ , ನವಭಾರತೀ ಪ್ರಕಾಶನ, ಮೈಸೂರು (2003)
3. ಕನ್ನಡ ಉಪಭಾಷೆಗಳ ಅಧ್ಯಯನ -ಡಾ।। .ಕೆ. ಕೆಂಪೇಗೌಡ , ನವಭಾರತೀ ಪ್ರಕಾಶನ ಮೈಸೂರು (2003)
4. ಕನ್ನಡ ಭಾಷಾ ಶಾಸ್ತ್ರ - ರಾ.ಯ. ಧಾರವಾಡಕರ್, ಗೀತಾ ಬುಕ್ ಹೌಸ್, ಮೈಸೂರು (1998)
5. ಕನ್ನಡ ಲಿಪಿಯ ಉಗಮ ಮತ್ತು ವಿಕಾಸ -ಡಾ।। .ಎ. ವಿ. ನರಸಿಂಹಮೂರ್ತಿ (1975)
6. ಕನ್ನಡ ಸಾಹಿತ್ಯ ಕೋಶ - ರಾಜಪ್ಪ ದಳವಾಯಿ, ದಳವಾಯಿ ಪಬ್ಲಿಕೇಷನ್ಸ್, ಬೆಂಗಳೂರು (2003)
7. ತೆಲುಗು ಭಾಷಾ ಚರಿತ್ರೆ - ಡಾ।। ಆರ್ಪಿಯಸ ಸುಂದರಂ , ಪ್ರಸಾರಾಂಗ,ಮಾನಸ ಗಂಗೋತ್ರಿ, ಮೈ ಸೂರು (1982)
8. ತಮಿಳು ಭಾಷಾ ಚರಿತ್ರೆ - ಡಾ।। ತಂಗ ಮಣಿಯನ್, ಮಾಣಿಕ್ಕಂ ಪ್ರಕಾಶನ , ಮೈಸೂರು
9. ತುಳು ಸಾಹಿತ್ಯ ಚರಿತ್ರೆ - ಪ್ರಧಾನ ಸಂಪಾದಕರು - ಡಾ।। ಬಿ. ಎ. ವಿವೇಕ ರೈ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ,ಹಂಪಿ (2007)
10. ದ್ರಾವಿಡ ಭಾಷಾ ವಿಜ್ಞಾನ - ಡಾ।। ಹಂಪ . ನಾಗರಾಜಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು (1991)
11. ದ್ರಾವಿಡ ಭಾಷಾಗಳ ತೌಲನಿಕ ಅಧ್ಯಯನ - ಡಾ ।। ತಂಗ ಪ್ರಕಾಶ - ಮಾಣಿಕ್ಕಂ, ಪ್ರಕಾಶನ, ಮೈಸೂರು
12. ಭಾರತೀಯ ಸಾಹಿತ್ಯ ಸಮೀಕ್ಷೆ - (ಸಂ) ಎಲ್ . ಎಸ್ ಶೇಷಗಿರಿರಾವ್, ಕರ್ನಾಟಕ ಸಾಹಿತ್ಯ ಅಕಾಡಮಿ,ಬೆಂಗಳೂರು (1990)
13. ಭಾಷಾ ವಿಜ್ಞಾನದ ಮೂಲ ತತ್ವಗಳು - ಡಾ।। ಎಂ. ಚಿದಾನಂದ ಮೂರ್ತಿ, ಡಿ. ವಿ.ಕೆ. ಮೂರ್ತಿ, ಮೈ ಸೂರು (1986)
14. ಭಾಷಾ ಬಗೆಗೆ ನೀವೇನು ಬಲ್ಲಿರಿ - ಡಿ. ಎನ್. ಶಂಕರಭಟ್, ಭಾಷಾ ಪ್ರಕಾಶನ, ಮೈಸೂರು (2002)
15. ಮಲಯಾಳಂ ಸಾಹಿತ್ಯ ಚರಿತ್ರೆ - ಮೂಲ: ಪಿ.ಕೆ. ಪರಿಮೇಶ್ವರನ್ ನಾಯರ್, ಅನುವಾದ: ಕಯ್ಯಾರ ಕಿಞ್ಞಣ್ಣರೈ, ಸಾಹಿತ್ಯ ಅಕಾಡೆಮಿ, ನವದೆಹಲಿ (1976)